

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 15 ಬುಧವಾರ 2023

ಸಂಪುಟ: 43 | ಸಂಚಿಕೆ: 325 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೆಬಿಜಿಯವರ
ಭೂಮಂತ್ರ... ಭೂಮಂತ್ರ...



ಚುನಾವಣೆ ಬರುತ್ತಿದೆ: ಮತದಾರ ದೇವರುಗಳಲ್ಲಿ ಒಂದು ಮನವಿ

■ ಪುಟ–4

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ

ಬಸ್ ಪ್ರಯಾಣಿಕರಿಗೂ ಟೋಲ್ ಬಿಸಿ

ಸಾಮಾನ್ಯ ಬಸ್ 15 ರೂ., ರಾಜಹಂಸ 18 ರೂ., ವೋಲ್ವೋಗೆ 20 ರೂ. ದರ ಏರಿಕೆ



ಮೈಸೂರು, ಮಾ.14(ಎಸ್‌ಬಿಡಿ)– **ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ಬಿಸಿ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣಿಕರಿಗೆ ತಟ್ಟಿದೆ. ಖಾಸಗಿ ವಾಹನದಲ್ಲಿ ತೆರಳಿದರೆ ಟೋಲ್ ಪಾವತಿಸಬೇಕು. ಅದರ ಬದಲಾಗಿ ಬಸ್‌ನಲ್ಲಿ ಹೋಗುವುದು ಉತ್ತಮ ಎಂದು ಯೋಚಿಸುತ್ತಿದ್ದವರಿಗೆ ಕೆಎಸ್‌ಆರ್‌ಟಿಸಿ ಏಕಾಏಕಿ ಶಾಕ್ ನೀಡಿದೆ. ಸಾರಿಗೆ ಸಂಸ್ಥೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪಾವತಿಸಬೇಕಿರುವ ಟೋಲ್ ಮೊತ್ತವನ್ನು ಪ್ರಯಾಣಿಕರಿಂದಲೇ ವಸೂಲಿ ಮಾಡುತ್ತಿದೆ. ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಸಂಗ್ರಹ ಆರಂಭವಾದ ಬೆನ್ನಲ್ಲೇ ಎಕ್ಸ್‌ಪ್ರೆಸ್ ವೇನಲ್ಲಿ ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ಬಸ್ ಪ್ರಯಾಣಿಕರಿಂದ ಟೋಲ್ ಸಂಗ್ರಹ ಶುರುಮಾಡಿದೆ.**

15–20 ರೂ. ಹೆಚ್ಚುವರಿ: ಬೆಂಗಳೂರು–ಮೈಸೂರು ಬಸ್ ಪ್ರಯಾಣ ದರ ಏರಿಕೆ ಮಾಡಿಲ್ಲ. ಆದರೆ ಟಿಕೆಟ್ ದರದೊಂದಿಗೆ ಟೋಲ್ ಶುಲ್ಕದ ಪಾಲನ್ನೂ ಪ್ರಯಾಣಿಕರಿಂದ ಪಡೆಯಲಾಗುತ್ತಿದೆ. ಇದು ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸುವ ಬಸ್‌ಗಳಿಗೆ ಮಾತ್ರ ಅನ್ವಯವಾಗಲಿದೆ. ಸರ್ವೀಸ್ ರಸ್ತೆಯಲ್ಲಿ ಸಂಚರಿಸುವ ಬಸ್ ಪ್ರಯಾಣ ದರದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಸದ್ಯ ಬೆಂಗಳೂರು–ಮೈಸೂರು ಪ್ರಯಾಣ ದರ ನಿಲುಗಡೆ ರಹಿತ ಬಸ್ 150 ರೂ., ರಾಜಹಂಸ 180 ಹಾಗೂ ವೋಲ್ವೋ ಬಸ್ ಟಿಕೆಟ್ 310 ರೂ. ಇದೆ. ನಿತ್ಯ 500 ಟ್ರಿಪ್ ಕಾರ್ಯಾಚರಣೆಯಾಗಲಿದ್ದು, ಅದರಲ್ಲಿ 140 ಟ್ರಿಪ್ ಎಕ್ಸ್‌ಪ್ರೆಸ್ ವೇ ಮೂಲಕ ಸಾಗಲಿವೆ. ಎಕ್ಸ್‌ಪ್ರೆಸ್ ವೇನಲ್ಲಿ ಸಾಗುವ ಬಸ್ ಪ್ರಯಾಣಿಕರು ಮಾತ್ರ ಟೋಲ್‌ಗಾಗಿ ಹೆಚ್ಚುವರಿ ಹಣ ಪಾವತಿಸಬೇಕಾಗುತ್ತದೆ. ಅಂದರೆ ನಿಲುಗಡೆ ರಹಿತ ಸಾಮಾನ್ಯ ಬಸ್‌ನಲ್ಲಿ 15 ರೂ., ರಾಜಹಂಸದಲ್ಲಿ 18 ರೂ. ಹಾಗೂ ವೋಲ್ವೋ, ಫ್ಲೈಬಸ್‌ನಲ್ಲಿ 20 ರೂ. ಟೋಲ್ ಶುಲ್ಕವನ್ನೂ ತೆರಬೇಕಾಗುತ್ತದೆ. ಇದು ಟಿಕೆಟ್‌ನಲ್ಲೂ ನಮೂದಾಗಿರುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದು, ಈ ಬಗ್ಗೆ ಕೆಎಸ್‌ಆರ್‌ಟಿಸಿ ಪ್ರಕಟಣೆಯನ್ನೂ ಹೊರಡಿಸಿದೆ.

ಎಲೆಕ್ಟ್ರಿಕ್ ಬಸ್‌ಗೂ ಅನ್ವಯ: ಉಭಯ ನಗರಗಳ ನಡುವಿನ ಎಲೆಕ್ಟ್ರಿಕ್ ಬಸ್ ಮತ್ತು ವೋಲ್ವೋ ಬಸ್‌ಗಳಿಗೂ ಈ ಪರಿಷ್ಕರಣೆ ಅನ್ವಯವಾಗಲಿದೆ. ಟೋಲ್ ಶುಲ್ಕವನ್ನು ಭರಿಸುವುದಕ್ಕಾಗಿ ಮಾತ್ರ ಈ ಹೆಚ್ಚುವರಿ ದರ ಸಂಗ್ರಹ ನಿರ್ಧಾರ ಕೈಗೊಳ್ಳಲಾಗಿದೆ. ನಾವು ಅಂತರರಾಜ್ಯ ಬಸ್ ಸೇವೆಗಳನ್ನೂ ಹೊಂದಿದ್ದು, ಇತರ ಕಡೆಗಳಲ್ಲಿ ಟೋಲ್‌ಗಳನ್ನು ಪಾವತಿಸುವುದು ನಮಗೆ ಹೆಚ್ಚು ಸಮಸ್ಯೆಯಾಗಿಲ್ಲ. ಆದರೆ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಹೆಚ್ಚು ಟೋಲ್ ಇರುವುದರಿಂದ ಅನಿವಾರ್ಯವಾಗಿ ನಾವೂ ಹೆಚ್ಚುವರಿ ಪಡೆಯಬೇಕಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬು ಕುಮಾರ್ ತಿಳಿಸಿದ್ದಾರೆ.

ಜನಾಕ್ರೋಶದ ನಡುವೆಯೂ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳವಾರ ಬೆಳಗ್ಗೆಯಿಂದ ಮೊದಲ ಹಂತದ ಟೋಲ್ ಸಂಗ್ರಹ ಆರಂಭಿಸಿದೆ. ಬೆಂಗಳೂರಿನಿಂದ ಮೈಸೂರು ಕಡೆಗೆ ಹೋಗುವ ವಾಹನಗಳಿಗೆ ಬೆಂಗಳೂರು ದಕ್ಷಿಣ ತಾಲೂಕಿನ ಕಣಮಿಣಿಕೆ ▶ 6ನೇ ಪುಟಕ್ಕೆ

ನಾನು ಬಿಜೆಪಿ ಬಿಡೆನು! ಸಚಿವ ಸೋಮಣ್ಣ

ಊಹಾಪೋಹ, ತೇಜೋವಧೆಯಿಂದ ಭಾವೋದ್ವೇಗ; ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರು



ಬೆಂಗಳೂರು, ಮಾ. 14 (ಕೆಎಂಶಿ)–ಪಕ್ಷ ತೊರೆಯುವ ಪ್ರಶ್ನೆಯೇ ಇಲ್ಲ ಎನ್ನುವ ಮೂಲಕ ವಸತಿ ಸಚಿವ ವಿ. ಸೋಮಣ್ಣ, ಕಾಂಗ್ರೆಸ್ ಸೇರುವ ವದಂತಿಗಳಿಗೆ ಬ್ರೇಕ್ ಹಾಕಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ನನ್ನ ಪ್ರಶ್ನಾತೀತ ನಾಯಕರು. ಬಿ.ಎಲ್. ಸಂತೋಷ್ ಮತ್ತು ಕೇಂದ್ರ ಸಚಿವ ಪ್ರಹ್ಲಾದ ಜೋಷಿ ನಮ್ಮ ನಾಯಕರು ಎಂದು ಘೋಷಿಸಿದ್ದಾರೆ. ನಾನು ಯಾವ ಪಕ್ಷದಲ್ಲಿರುತ್ತೇನೋ ಅದನ್ನು ನನ್ನ ತಾಯಿ ಎಂದು ಭಾವಿಸುತ್ತೇನೆ. ಇವತ್ತು ಬಿಜೆಪಿ ನನ್ನ ತಾಯಿ, ಈ ತಾಯಿಯನ್ನು ತೊರೆಯಲಾರೆ, ಕಾಂಗ್ರೆಸ್ ಪಕ್ಷಕ್ಕೆ ಸೇರಲಾರೆ ಎಂದು ಖಂಡತುಂಡವಾಗಿ ಹೇಳಿದರು. ಒಂದು ▶ 6ನೇ ಪುಟಕ್ಕೆ

'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ ಹಾಗೂ ಅದರ ಸುಧಾರಣಾ ಮಾರ್ಗಗಳು' ಕುರಿತಾಗಿ ನಾಗರಿಕರ ಜಾಗೃತಿ ಕಾರ್ಯಕ್ರಮ

ಮಾ.18ರಂದು ಅಪರಾಹ್ನ 4 ಗಂಟೆಗೆ ಬಿಎನ್ ಬಹದ್ದೂರ್ ಇನ್‌ಸ್ಟಿಟ್ಯೂಟ್; ಸರ್ವರಿಗೂ ಮುಕ್ತ ಪ್ರವೇಶ

ಮೈಸೂರು, ಮಾ.14(ಪಿಎಂ)– ಮೈಸೂರು ವಿಜಯನಗರ 4ನೇ ಹಂತದ ಡಾ.ವಿ.ಆರ್.ಅನಿಲ್‌ಕುಮಾರ್ ನೇತೃತ್ವದ ಮೈಸೂರು ಮುಕ್ತ ವೇದಿಕೆ (Mysore open forum) ವತಿಯಿಂದ 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ ಮತ್ತು ಅದರ ಸುಧಾರಣಾ ಮಾರ್ಗಗಳು' ವಿಷಯ ಕುರಿತಂತೆ ನಾಗರಿಕರ ಜಾಗೃತಿ ಕಾರ್ಯಕ್ರಮವನ್ನು ಮಾ.18ರ ಅಪರಾಹ್ನ 4 ಗಂಟೆಗೆ ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಆವರಣದಲ್ಲಿ ಏರ್ಪಡಿಸಲಾಗಿದೆ.



ಮತದಾನದ ಹಕ್ಕನ್ನು ಚಲಾಯಿಸುವ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಭ್ರಷ್ಟಾಚಾರ ಮುಕ್ತ ಸರ್ಕಾರ ಅಸ್ತಿತ್ವಕ್ಕೆ ತರುವಲ್ಲಿ ಸಾರ್ವಜನಿಕರು ಪ್ರಮುಖ ಪಾತ್ರ ವಹಿಸಬೇಕೆಂಬ ಆಶಯದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಪ್ರಥಮ್ ಮೈಸೂರು ಸಂಸ್ಥಾಪಕ ▶ 6ನೇ ಪುಟಕ್ಕೆ



ಟೋಲ್ ಸಂಗ್ರಹ ಆರಂಭ

ಬಿಡದಿ, ರಾಮನಗರ ಬಳಿ ಕಾಂಗ್ರೆಸ್, ಕನ್ನಡಪರ ಸಂಘಟನೆಗಳಿಂದ ಪ್ರತಿಭಟನೆ, ಟೋಲ್ ವಸೂಲಿಗೆ ತೀವ್ರ ಆಕ್ರೋಶ



ಮೈಸೂರು, ಮಾ.14(ಆರ್‌ಕೆ)– ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದಿನಿಂದ ಆರಂಭವಾದ ಟೋಲ್ ಶುಲ್ಕ ಸಂಗ್ರಹ ಪ್ರಕ್ರಿಯೆಗೆ ಕಾಂಗ್ರೆಸ್ ಮತ್ತು ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.


ಇತ್ತೀಚೆಗಷ್ಟೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟನೆ ಮಾಡಿದ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಂಗಳೂರು–ನಿಡಘಟ್ಟ ನಡುವಿನ ಕಣಿಮಿಣಿಕೆ ಟೋಲ್ ಪ್ಲಾಜಾ ಬಳಿ ನೂರಾರು ಕನ್ನಡಪರ ಸಂಘಟನೆ ಕಾರ್ಯಕರ್ತರು ಇಂದು ಬೆಳಗ್ಗೆ 8 ಗಂಟೆಗೆ ಜಮಾಯಿಸಿ ಟೋಲ್ ವಸೂಲಾತಿ ವಿರೋಧಿಸಿ ಪ್ರತಿಭಟನೆ ನಡೆಸಿದರಲ್ಲದೆ, ಪ್ಲಾಜಾದ ಕಂಬಿ ಜಖಂಗೊಳಿಸಿದರು. ಮತ್ತೊಂದೆಡೆ ರಾಮನಗರ ಸಮೀಪ ಶೇಷಗಿರಿಹಳ್ಳಿ ಬಳಿಯ ಟೋಲ್ ಪ್ಲಾಜಾದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ವಾಹನಗಳಿಂದ ಟೋಲ್ ವಸೂಲಿ ಮಾಡಬಾರದೆಂದು ಒತ್ತಾಯಿಸಿ ಧರಣಿ ನಡೆಸಿದರು. ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಇನ್ನೂ ದಶಪಥ ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿಲ್ಲವಾದರೂ, ಪ್ರಧಾನಿಗಳು ಉದ್ಘಾಟನೆ ಮಾಡಿದರೆಂಬ ಕಾರಣಕ್ಕೆ ದುಬಾರಿ ಟೋಲ್ ವಸೂಲಿ ಮಾಡುತ್ತಿರುವುದು ಸರಿಯಲ್ಲ ಎಂದು ಎರಡೂ ಕಡೆ ಧರಣಿನಿರತ ಕಾರ್ಯಕರ್ತರು ಆರೋಪಿಸಿದರು. ಹೆದ್ದಾರಿಯಲ್ಲಿ ಪ್ರತಿಭಟನೆ ಮಾಡುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತದೆ. ನಿಮ್ಮ ಮನವಿಯನ್ನು ಕೊಟ್ಟರೆ ನಾವೇ ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸುತ್ತೇವೆ. ಆದರೆ ರಸ್ತೆಯಲ್ಲಿ ಧರಣಿ ಮಾಡುವುದು ಸರಿಯಲ್ಲ ಎಂದ ಪೊಲೀಸರು ಅವರ ಮನವೊಲಿಸಲೆತ್ನಿಸಿದರಾದರೂ, ಪ್ರತಿಭಟನೆ ಮುಂದುವರಿಸಿದ ಕಾರ್ಯಕರ್ತರನ್ನು ಭದ್ರತಾ ಕಾಯ್ದೆಯಡಿ ಬಂಧಿಸಿ ನಂತರ ಬಿಡುಗಡೆ ಮಾಡಿದರು. ಈ ವೇಳೆ ಎರಡೂ ಕಡೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು. ಕಡೆಗೆ ಪೊಲೀಸ್ ಅಧಿಕಾರಿಗಳು ಅನಿವಾರ್ಯವಾಗಿ ಕೆಲವರನ್ನು ಬಂಧಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಸಾರ್ವಜನಿಕರ ತೀವ್ರ ವಿರೋಧದ ನಡುವೆಯೂ ಇಂದಿನಿಂದ ಟೋಲ್ ಸಂಗ್ರಹ ಆರಂಭವಾಗಿದೆ. ಎರಡೂ ಕಡೆಯ ಟೋಲ್ ಪ್ಲಾಜಾಗಳಲ್ಲೂ ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಭಾರೀ ಬಂದೋಬಸ್ತ್ ಮಾಡಲಾಗಿದೆಯಲ್ಲದೆ, ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕೆಎಸ್‌ಆರ್‌ಪಿ, ಡಿಎಆರ್ ತುಕಡಿಗಳು ಸ್ಥಳದಲ್ಲಿ ಮೊಕ್ಕಾಂ ಹೂಡಿವೆ. ▶ 6ನೇ ಪುಟಕ್ಕೆ

ಕೊಡಗಲ್ಲಿ ಗುಡುಗು ಸಹಿತ ಮಳೆ



ನಾಪೋಕ್ಲು, ಮಾ.14– ಕೊಡಗಿನ ನಾಪೋಕ್ಲು ಭಾಗದಲ್ಲಿ ಗುಡುಗು ಸಹಿತ ಮಳೆಯಾಗಿದೆ. ಮಂಗಳವಾರ ಮಧ್ಯಾಹ್ನ 3.30 ಗಂಟೆಯಲ್ಲಿ ಆರಂಭವಾದ ಮಳೆ ಬಿಸಿಲಿನ ಬೇಗೆಯಿಂದ ಬಸವಳಿದ ಜನತೆಗೆ ತಂಪೆರೆದಿದೆ. ದಿಢೀರ್ ಸುರಿದ ಮಳೆಯಿಂದ ಸಾರ್ವಜನಿಕರು ಅಂಗಡಿ ಮುಂಗಟ್ಟುಗಳಲ್ಲಿ ಆಶ್ರಯ ಪಡೆದರು.

ನಾಪೋಕ್ಲು, ಕಕ್ಕಬ್ಬೆ, ಹಾಕತ್ತೂರು, ಮರಗೋಡು ಕಡೆಗಳಲ್ಲಿ ಮಳೆಯಾಗಿದ್ದು, ಕಾಫಿ ಬೆಳೆಗಾರರ ಮುಖದಲ್ಲಿ ಮಂದಹಾಸ ಮೂಡಿದೆ. ಇದೀಗ ಕಾಫಿ ಕುಯಿಲು ಮುಕ್ತಾಯದ ಹಂತಕ್ಕೆ ತಲುಪಿದ್ದು, ಕೆಲವೆಡೆ ತೋಟಕ್ಕೆ ನೀರು ಹಾಯಿಸಲಾಗುತ್ತಿದೆ. ಕೆಲವು ಭಾಗಗಳಲ್ಲಿ ಮಳೆಯಾಗಿರುವುದು ಆ ಭಾಗದ ಬೆಳೆಗಾರರಿಗೆ ತುಸು ನೆಮ್ಮದಿ ತಂದಿದೆ. ಮಡಿಕೇರಿ ಪಟ್ಟಣ ಭಾಗ, ಕೆ.ನಿಡುಗಣೆ, ಬೋಯಿಕೇರಿ ಕಡೆಗಳಲ್ಲಿ ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣವಿದ್ದು, ಸಂಜೆ ವೇಳೆಗೆ ಗುಡುಗು ಸಹಿತ ತುಂತುರು ಮಳೆಯಾಗಿದೆ.



ಪ್ರಧಾನಮಂತ್ರಿ ಅಧ್ಯಕ್ಷತೆಯ ಸಭೆಯಲ್ಲಿ

ಪೌರಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚೆ

● ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಮಾಹಿತಿ ● ಮಾ.21ರಂದು ಕೇಂದ್ರ, ರಾಜ್ಯದ ಸಮಾಜ ಕಲ್ಯಾಣ ಇಲಾಖೆಗಳ ಸುಧಾರಣೆ ಕುರಿತು ಸಭೆ ● ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ

ಮೈಸೂರು,ಮಾ.14(ಪಿಎಂ)–ಕೇಂದ್ರ ಮತ್ತು ರಾಜ್ಯದ ಸಮಾಜ ಕಲ್ಯಾಣ ಇಲಾಖೆಗಳಲ್ಲಿ ಸುಧಾರಣೆ ತರುವುದು ಅಗತ್ಯವಿದ್ದು, ಈ ನಿಟ್ಟಿನಲ್ಲಿ ಮಾ.21ರಂದು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವರು, ತಜ್ಞರ ಸಭೆ ಆಯೋಜಿಸಲಾಗಿದೆ. ಸದರಿ ಸಭೆಯಲ್ಲಿ ಪೌರಕಾರ್ಮಿಕರ ಸಮಸ್ಯೆಗಳ ಪರಿಹಾರದ ಬಗ್ಗೆಯೂ ಗಮನ ಸೆಳೆದು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ತಿಳಿಸಿದರು.

ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಸಂಯುಕ್ತಾಶ್ರಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಮತ್ತು ನಿಯಮ 2013ರ ಪರಿಣಾಮಕಾರಿ ಅನುಷ್ಠಾನ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪೌರಕಾರ್ಮಿಕರ ಸಮಸ್ಯೆಗಳ ಪರಿಹಾರ ಆಗಬೇಕಾದರೆ, ಸಮಸ್ಯೆಗಳು ದೆಹಲಿವರೆಗೆ ಮುಟ್ಟಬೇಕಿದೆ. ▶ 6ನೇ ಪುಟಕ್ಕೆ



ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ ಮತ್ತು ನಿಯಮ 2013ರ ಪರಿಣಾಮಕಾರಿ ಅನುಷ್ಠಾನ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿದರು.

ಕುಟುಂಬಕ್ಕೆ 10 ಲಕ್ಷ ಪರಿಹಾರದೊಂದಿಗೆ ಉದ್ಯೋಗ

"2021ರ ಡಿಸೆಂಬರ್‌ನಲ್ಲಿ ಆಯೋಗ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡೆ. 2 ವರ್ಷ ಮೂರು ತಿಂಗಳ ಈ ಅವಧಿಯಲ್ಲಿ ಪೌರಕಾರ್ಮಿಕ ಸಮುದಾಯದ ಪರವಾಗಿ ಕೆಲಸ ಮಾಡಿದ ಸಂತೃಪ್ತಿ ಇದೆ. ನೇರ ಪಾವತಿಯಡಿಯ ಪೌರಕಾರ್ಮಿಕರು ತೀರಿ ಹೋದಾಗ ಅವರ ಕುಟುಂಬಕ್ಕೆ ಅನುಕಂಪದ ಆಧಾರದಲ್ಲಿ ಕೆಲಸ ಸಿಗುತ್ತಿಲ್ಲ ಎಂಬ ಆತಂಕ ಈ ಪೌರಕಾರ್ಮಿಕರಲ್ಲಿದೆ. ಅದಕ್ಕಾಗಿ ನೇರಪಾವತಿ ಪೌರಕಾರ್ಮಿಕರು ತೀರಿಕೊಂಡರೆ ಅವರ ಕುಟುಂಬಕ್ಕೆ ಉದ್ಯೋಗದೊಂದಿಗೆ 10 ಲಕ್ಷ ರೂ. ಪರಿಹಾರ ಕೊಡಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಈಗಾಗಲೇ ಇದು ಬಿಬಿಎಂಪಿಯಲ್ಲಿ ಜಾರಿಯಲ್ಲಿ ಇರುವ ಕಾರಣ ಬೇರೆಡೆಯು ಜಾರಿಗೆ ಬರುತ್ತದೆ. **–ಕೋಟೆ ಎಂ.ಶಿವಣ್ಣ**

ಡಿಸಿ ಸೇರಿ ವಿವಿಧ ಗಣ್ಯರ ಗೈರು ಹಾಜರಿಗೆ ಕೇಂದ್ರ ಸಚಿವರ ಅಸಮಾಧಾನ

ಮೈಸೂರು,ಮಾ.14(ಪಿಎಂ)– ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು ಹಾಜರಿರಬೇಕಿತ್ತು. ಇಂತಹ ಕಾರ್ಯಕ್ರಮಗಳಲ್ಲಿ ಜಿಲ್ಲಾಧಿಕಾರಿ ಇದ್ದಾಗ, ಅದಕ್ಕೊಂದು ಅರ್ಥ ಬರುತ್ತದೆ ಎಂದು ಜಿಲ್ಲಾಧಿಕಾರಿಗಳ ಗೈರು ಹಾಜರಾತಿ ಬಗ್ಗೆ ಸಚಿವ ಎ. ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಇಲ್ಲಿ ಶೋಷಿತ ವರ್ಗದವರು ಬಿಟ್ಟರೆ ಯಾರೂ ವೇದಿಕೆಯಲ್ಲಿ ಇಲ್ಲ. ಭಾಷಣಕ್ಕೆ ಮಾತ್ರ ಮೇಲ್ವರ್ಗದ ಸಮಾಜ ಇರುತ್ತದೆ. ಪೇಪರ್‌ನಲ್ಲಿ ಫೋಟೋದಲ್ಲಿ ಬರಲು ಮೇಲ್ವರ್ಗ ಇರುತ್ತದೆ. ಸಮಸ್ಯೆ ಪರಿಹಾರಕ್ಕೆ ಇಂತಹ ವೇದಿಕೆಗಳಿಗೆ ಬರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇದಿಕೆ ಮೂಲಕ ಅವರಿಗೆ ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್, ನ್ಯಾಯಾಂಗ, ರಾಜಕಾರಣಿಗಳು ಸೇರಿದಂತೆ ಎಲ್ಲರಿಗೂ ಹೇಳುತ್ತಿದ್ದೇನೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಸ್ಯೆಗಳನ್ನು ಅರಿತು ಪರಿಹಾರ ಮಾಡಲು ಕಾರ್ಯ ಪ್ರವೃತ್ತರಾದರೆ ಅವರ ಮೇಲೆ ನಂಬಿಕೆ ಮತ್ತು ಗೌರವ ಬರುತ್ತದೆ. ನಾವು ನಿಮಗೆ ವ್ಯಾಪಾರಕ್ಕಾಗಿ ಇದ್ದೇವೆ ಎಂಬುದು ನಮಗೆ ಗೊತ್ತಿದೆ ಎಂದು ಖಾರವಾಗಿ ನುಡಿದರು.





ಬೆಂಗಳೂರಿನ ಕರ್ನಾಟಕ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ವತಿಯಿಂದ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಸಾಧಕಿ ಪ್ರಶಸ್ತಿಯನ್ನು ಎಜುಕೇರ್ ಐಟಿಇಎಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ರಚನಾ ಮಹೇಶ್ ಅವರಿಗೆ ನೀಡಲಾಯಿತು. ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಇಸ್ರೋದ ಮಾಜಿ ನಿರ್ದೇಶಕಿ ಡಾ.ಟಿ.ಕೆ.ಅನುರಾಧ, ಮೈಕ್ರೋ ಸಾಫ್ಟ್ ಇಂಡಿಯಾದ ಸಿಒಒ ಇರಿನಾ ಘೋಷ್,ವಿಂಗ್ ಕಮಾಂಡರ್ ಸ್ನೇಹ ಶೇಖಾವತ್, ಮಹಿಳಾ ಉದ್ಯಮಿಗಳ ಕಮಿಟಿ ಅಧ್ಯಕ್ಷೆ ಉಮಾರೆಡ್ಡಿ ಇದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಚುನಾವಣೆ ಅಡ್ಡಿಯಾಗಲ್ಲ

ಬೆಂಗಳೂರು, ಮಾ.14– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಮೀಪಿಸುತ್ತಿದ್ದು, ಈ ನಡುವೆ ರಾಜ್ಯ ವಿಧಾನಸಭಾ ಚುನಾವಣೆ ಕೂಡ ಹತ್ತಿರ ಬರುತ್ತಿದೆ. ಆದರೆ ಪರೀಕ್ಷೆಯ ಮೇಲೆ ಯಾವುದೇ ಪರಿಣಾಮ ಬೀರಲ್ಲ ಎಂದು ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾರ್ಚ್ 31 ರಿಂದ ಪ್ರಾರಂಭವಾಗಿ ಏಪ್ರಿಲ್ 15ರವರೆಗೆ ನಡೆಯಲಿವೆ. ಚುನಾವಣೆಯ ದಿನಾಂಕಗಳು ಇನ್ನೂ ಪ್ರಕಟವಾಗದಿದ್ದರೂ, ಮೇ 2023ರ ಮೊದಲು ನಡೆಯುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಚುನಾವಣೆ ವೇಳೆ ಶಿಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ. ಇದರಿಂದ ಪರೀಕ್ಷೆಗಳಿಗೆ ಸಮಸ್ಯೆಗಳಾಗುತ್ತವೆ ಎಂಬ ಆತಂಕಗಳು ಶುರುವಾಗಿದೆ. ಡಿಸೆಂಬರ್ 2022ರಲ್ಲಿ ಕೊನೆಯ ಬಾರಿಗೆ ಶಿಕ್ಷಕರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು, ಬೂತ್ ಮಟ್ಟದ ಅಧಿಕಾರಿಗಳಂತೆ 60,000 ಶಿಕ್ಷಕರನ್ನು ನಿಯೋಜಿಸಲಾಗಿದ್ದು, ಇದರಿಂದಾಗಿ ಸರ್ಕಾರಿ ಶಾಲೆಗಳಲ್ಲಿ ಸಿಬ್ಬಂದಿಗಳ ಕೊರತೆ ಎದುರಾಗಿತ್ತು. ಈ ಬಾರಿಯೂ ಎಸ್‌ಎಸ್‌ಎಲ್‌ಸಿ ಕೇಂದ್ರಗಳಲ್ಲಿ ಸಿಬ್ಬಂದಿಯನ್ನು ಸರಿಯಾಗಿ ನಿಯೋಜನೆಗೊಳಿಸದೇ ಹೋದಲ್ಲಿ ಸಮಸ್ಯೆಗಳು ಎದುರಾಗಬಹುದು ಎಂದು ಶಿಕ್ಷಕರು ಹೇಳಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಆರ್.ವಿಶಾಲ್, ಚುನಾವಣೆಯು ಪರೀಕ್ಷೆಯ ಮೇಲೆ ಪರಿಣಾಮ ಬೀರುವುದಿಲ್ಲ. ಪರೀಕ್ಷೆಗಳು ಮುಗಿದ ಬಳಿಕ ಸಾಕಷ್ಟು ಸಮಯವಿರುತ್ತದೆ. ಹೀಗಾಗಿ ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ.



ನಾಡಿನ ಅಪ್ರತಿಮ ಸಮಾಜವಾದಿ ಚಿಂತಕ, ಆದರ್ಶ ರಾಜಕಾರಣಿ ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವವನ್ನು ಆಚರಿಸಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಎಸ್.ಕೃಷ್ಣಕುಮಾರ್, ಕುಮಾರ್, ದೊಡ್ಡ ಒಕ್ಕಲಗೇರಿಯ ಶಿವಕುಮಾರ್ ಗೌಡ, ಕೇಬಲ್ ಕಿಟ್ಟಿ, ಆಟೋ ಸಿದ್ಧರಾಮ, ಸುರೇಂದ್ರ ಕುಮಾರ್, ವೇದ ಇದ್ದಾರೆ.

19ರಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್‌ರ 2 ಕೃತಿ ಲೋಕಾರ್ಪಣೆ

ಮೈಸೂರು, ಮಾ. 14– ಹಿರಿಯ ಪತ್ರಕರ್ತ, ಲೇಖಕ ಅಂಶಿ ಪ್ರಸನ್ನಕುಮಾರ್ ಅವರ





ಎರಡು ಕೃತಿಗಳು ಮಾ.19ರಂದು ಲೋಕಾರ್ಪಣೆಯಾಗಲಿವೆ. ವಿಸ್ಮಯ ಬುಕ್‌ಹೌಸ್ ಹಾಗೂ ಸಾಹಿತ್ಯ ಲೋಕ ಸಂಸ್ಥೆಯು ಅಂದು ಸಂಜೆ 4.30ಕ್ಕೆ ಹುಣಸೂರು ರಸ್ತೆಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ 'ಸಾಹಿತ್ಯ ಸಂಪದ' ಹಾಗೂ 'ಸಾಹಿತ್ಯ ಸಂಗಮ' ಕೃತಿಗಳನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಬಿಡುಗಡೆ ಮಾಡುವರು. ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸುವರು. ಅಂಕಣಕಾರ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಎನ್‌ಎಸ್‌ಎಸ್ ರಾಜ್ಯ ಸಂಯೋಜನಾಧಿಕಾರಿ ಡಾ.ಗುಬ್ಬಿಗೂಡು ರಮೇಶ್ ಮುಖ್ಯ ಅತಿಥಿಯಾಗಿರುವರು. ಸಂಜೆ 4ಕ್ಕೆ ಖ್ಯಾತ ಗಾಯಕ ಅಮ್ಮ ರಾಮಚಂದ್ರ ಮತ್ತು ತಂಡದಿಂದ ಗೀತಗಾಯನ ಕಾರ್ಯಕ್ರಮ ಇರುತ್ತದೆ. ಸಾಹಿತ್ಯ ಲೋಕ ಸಂಸ್ಥೆಯ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ವಿಸ್ಮಯ ಬುಕ್‌ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ ಉಪಸ್ಥಿತರಿರುವರು.

ಮಾ.18ರಂದು ಡಾ.ಪಿ.ಜಯಚಂದ್ರರಾಜು ಅವರ 'ಇಂಡಿಯಾ ಅಂಡ್ ದಿ ಯುನೈಟೆಡ್ ನೇಷನ್ಸ್' ಪುಸ್ತಕ ಬಿಡುಗಡೆ


ಮೈಸೂರು, ಮಾ. 14– ಗ್ಲೋಬಲ್ ಎಜುಕೇಶನ್ ಟ್ರಸ್ಟ್ ಹಾಗೂ ಆತ್ಮಶ್ರೀ ಕನ್ನಡ



ಸಾಂಸ್ಕೃತಿಕ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ದಕ್ಷ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ.ಪಿ. ಜಯಚಂದ್ರ ರಾಜು ಅವರ 'ಇಂಡಿಯಾ ಅಂಡ್ ದಿ ಯುನೈಟೆಡ್ ನೇಷನ್ಸ್' ಆಂಗ್ಲಭಾಷಾ ಪುಸ್ತಕ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಮಾ. 18 ರಂದು ಮಧ್ಯಾಹ್ನ 3 ಗಂಟೆಗೆ ಹೂಟಗಳ್ಳಿಯ ದಕ್ಷ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ಗುಣವಂತ ಮಂಜು ತಿಳಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತ ವಿಶ್ರಾಂತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಹಾಗೂ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ತಿನ ಮಾಜಿ ಸದಸ್ಯ ಹಾಗೂ ಸಾಹಿತಿ ಡಿ.ಎಸ್.ವೀರಯ್ಯ ಉದ್ಘಾಟಿಸುವರು. ಪಂಚಾಂಗಕರ್ತರಾದ ಡಾ. ಮೂಗೂರು ಮಧುದೀಕ್ಷಿತ್ ಗುರೂಜಿ ದಿವ್ಯ ಸಾನ್ನಿಧ್ಯ ವಹಿಸುವರು. ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಎ.ಮೋಹನ್ ಕೃಷ್ಣ ಪುಸ್ತಕ ಪರಿಚಯ ಮಾಡುವರು.

ನಿಧನ



ಪರುವಂಗಡ ಪಿ. ಉತ್ತಯ್ಯ

ಮೈಸೂರು, ಮಾ. 14– ಮೈಸೂರಿನ ರಾಮಕೃಷ್ಣನಗರ ಐ ಬ್ಲಾಕ್‌ನ ವಾಸು ಬಡಾವಣೆ ನಿವಾಸಿ ಪರುವಂಗಡ ಪಿ. ಉತ್ತಯ್ಯ (87) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರಿಯರಾದ ಶುಭಾ ಮತ್ತು ಅಶ್ವಿನಿ, ಅಳಿಯಂದಿರಾದ ಶ್ರೀನಿವಾಸ್ ಭಟ್ ಮತ್ತು ಪ್ರಶಾಂತ್ ಪೊನ್ನಪ್ಪ, ಮೊಮ್ಮಕ್ಕಳಾದ ಧಿರೇನ್, ಗೌರವ್, ಅನುಷ್ಕಾ ಮತ್ತು ಆರುಷಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪತ್ನಿ ಬಿ.ಟಿ. ಮುತ್ತಮ್ಮ (ಬೊಳ್ಳಚಂಡ) ಅವರು ಮಹಾಜನ ಪ್ರೌಢಶಾಲೆ ಮತ್ತು ಶ್ರೀ ಕಾವೇರಿ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಅವರು ಫೆ.12, 2019 ರಂದು ನಿಧನ ಹೊಂದಿದ್ದರು.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ಮಾ.15) ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟಲಕ್ಷ್ಮಮ್ಮ



ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ವೆಂಕಟಲಕ್ಷ್ಮಮ್ಮ (90) ಮಂಗಳವಾರ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ನಾಗರಾಜ್



ಮೈಸೂರು, ಮಾ.14– ಮೈಸೂರು ಕೆಜಿ ಕೊಪ್ಪಲು ಮೂಲದ ಜನತಾನಗರದ ನಿವಾಸಿ 78 ವರ್ಷದ ಟಿ.ನಾಗರಾಜ್(ಬಾಂಡ್) ಅವರು ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿ, ಓರ್ವ ಪುತ್ರ ಹಾಗೂ ಬಂದು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಸಂಜೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕೃಷಿ ಪಂಪ್‌ಸೆಟ್‌ಗೆ ಅಸಮರ್ಪಕ ವಿದ್ಯುತ್ ಪೂರೈಕೆ: ಎಸ್ಕಾಂ ಕಚೇರಿ ಮುಂದೆ ಪ್ರತಿಭಟನೆಗೆ ರೈತರ ನಿರ್ಧಾರ

ಮೈಸೂರು, ಮಾ.14(ಎಂಟಿವೈ)– ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ 7 ಗಂಟೆ ವಿದ್ಯುತ್ ಪೂರೈಸುವುದಾಗಿ ಹೇಳಿದ್ದ ಸರ್ಕಾರ, ಮಾತಿಗೆ ತಪ್ಪಿದೆ. ಹಾಗಾಗಿ ರಾಜ್ಯದ ಎಲ್ಲ ಎಸ್ಕಾಂ ಕಚೇರಿಗಳ ಎದುರು ಚಳವಳಿ ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇಸಿಗೆ ಆರಂಭವಾಗಿದ್ದು, ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡದ ಕಾರಣ ರೈತರು ಬೆಳೆದಿರುವ ಬೆಳೆಗಳು ಒಣಗಲಾರಂಭಿಸಿವೆ. ಈ ಹಿಂದೆ ಸರ್ಕಾರವೇ ಪ್ರತಿದಿನ ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆ ವಿದ್ಯುತ್ ಸರಬರಾಜು ಮಾಡುವುದಾಗಿ ಭರವಸೆ ನೀಡಿತ್ತು. ಆದರೆ, ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿಲ್ಲ. ಬೆಳಗ್ಗೆ 8 ಗಂಟೆಯಿಂದ 10 ರೊಳಗೆ 3 ಬಾರಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಹೀಗೆ ಮುಂದುವರಿದರೆ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ರೈತ ಮುಖಂಡರ ಸಭೆ ನಡೆಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕೃಷಿ ಪಂಪ್‌ಸೆಟ್‌ಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವುದಾಗಿ ನುಡಿದಿದ್ದರು. ಆದರೆ, ನೀರಿಲ್ಲದೇ ನಮ್ಮ ಜಮೀನಿನಲ್ಲಿಯೇ ಬೆಳೆ ಒಣಗುತ್ತಿದೆ. ಸರ್ಕಾರ ಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ಸುಟ್ಟು ಹೋಗುವ ಟ್ರಾನ್ಸ್‌ಫಾರ್ಮ್‌ಗಳನ್ನು 48 ಗಂಟೆಯೊಳಗೆ ಬದಲಿಸಬೇಕು ಎಂದು ಆಗ್ರಹಿಸಿದರು.



ನಾಗೇಂದ್ರ

2023ರ ವಿಧಾನಸಭಾ ಚುನಾವಣೆಯಲ್ಲಿ ರೈತರ ಅಜೆಂಡಾ ಚರ್ಚೆಯಾಗಬೇಕು. ಸಾಲ ಮನ್ನಾ ಮಾಡುವುದರೊಂದಿಗೆ ಸಾಲಮುಕ್ತ ಕೃಷಿ ವ್ಯವಸ್ಥೆ ರೂಪಿಸಬೇಕು. ಎಂಎಸ್‌ಪಿ ಜಾರಿ ಮಾಡಬೇಕು. ಉದ್ಯೋಗ ಖಾತ್ರಿ ಯೋಜನೆಯಡಿ ವರ್ಷಕ್ಕೆ 200 ದಿನಗಳ ಕೂಲಿ ನೀಡಬೇಕು. ಸ್ಪಷ್ಟವಾದ ಕೃಷಿ ನೀತಿ, ಗುಡಿ ಕೈಗಾರಿಕೆಗೆ ಉತ್ತೇಜನ ನೀಡಬೇಕು. ರೈತರು ಹಾಗೂ ಇತರೆ ದುಡಿಯುವ ವರ್ಗದ ವಿಷಯಗಳು ಮತ್ತು ನಿರುದ್ಯೋಗ ಸಮಸ್ಯೆ, ಮಹಿಳೆ ಹಾಗೂ ಮಕ್ಕಳ ವಿಚಾರಗಳು, ಉಚಿತ ಶಿಕ್ಷಣ, ಆರೋಗ್ಯದ ವಿಷಯಗಳು ಚರ್ಚಿಸಬೇಕು. ಧರ್ಮ, ಮಂದಿರ, ಮಸೀದಿಗಳ ವಿಚಾರ ಮುಂದಿಟ್ಟು ಮತ ಕೇಳುವವರನ್ನು ಧಿಕ್ಕರಿಸಬೇಕು. ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಹಾಗೂ ಸಂರಕ್ಷಣಾ ಕಾಯಿದೆ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಎಂಎಸ್‌ಪಿ ಜಾರಿ ಮಾಡುವ ಬಗ್ಗೆ ಗ್ಯಾರಂಟಿ ಕೊಡಬೇಕು ಎಂದು ಒತ್ತಾಯಿಸಿದರು.

ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಸಮಾನಮನಸ್ಕ ಸಂಘಟನೆಗಳು ಸೇರಿ ಜನತಾ ಪ್ರಣಾಳಿಕೆ ಸಿದ್ಧಪಡಿಸುತ್ತೇವೆ. ಸರ್ವೋದಯ ಪಕ್ಷದಿಂದ ಮತ್ತೊಂದು ಪ್ರಣಾಳಿಕೆ ರೂಪಿಸಲಾಗುತ್ತದೆ. ಮಾ.16ರಂದು ಮೈಸೂರಲ್ಲಿ ರಾಜ್ಯ ಮಟ್ಟದ ಕಾರ್ಯಕಾರಿಣಿ ನಡೆಯಲಿದೆ. ರಾಜ್ಯದ ಕೆಲ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ಮಾಡಲಿದ್ದೇವೆ. ಹೆಚ್.ಡಿ.ಕೋಟೆ ಮೀಸಲು ಕ್ಷೇತ್ರವಾಗಿದೆ. ಬಾದಾಮಿ, ಸಿಂಧಗಿ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಹ್ವಾನ ಬಂದಿದೆ. ಆದರೆ, ಈ ಚುನಾವಣೆಯಲ್ಲಿ ತಾವು ಸ್ಪರ್ಧಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ರೈತರು ಟೋಲ್ ಕಟ್ಟಬಾರದು: ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿ ರೈತರು ಮತ್ತು ಜನಸಾಮಾನ್ಯರು ಒಂದು ಪೈಸೆ ಟೋಲ್ ಪಾವತಿಸುವುದಿಲ್ಲ. ಒತ್ತಾಯ ಮಾಡಿದರೆ ಹೋರಾಟ ಮಾಡಬೇಕಾಗುತ್ತದೆ. ರೈತರು ಈಗಾಗಲೇ ಭೂಮಿ ನೀಡುವ ಮೂಲಕ ಲೈಫ್ ಟೈಂ ಟ್ಯಾಕ್ಸ್ ಪಾವತಿಸಿರುವಾಗ ಟೋಲ್ ಪಾವತಿಸುವ ಅಗತ್ಯವಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್, ವಿಜಯೇಂದ್ರ, ಗುರುಮಲ್ಲಪ್ಪ ಇನ್ನಿತರರಿದ್ದರು.

ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ, ಕೆ.ಆರ್.ಕ್ಷೇತ್ರ, ಪಿರಿಯಾಪಟ್ಟಣದಲ್ಲಿ ವೀರಶೈವ ಲಿಂಗಾಯಿತರಿಗೆ ಟಿಕೆಟ್ ನೀಡಲು ಆಗ್ರಹ

ಯಾವುದೇ ರಾಜಕೀಯ ಪಕ್ಷ ಸಮುದಾಯಕ್ಕೆ ಪ್ರಾತಿನಿಧ್ಯ ಕಲ್ಪಿಸಿದರೆ ಬೆಂಬಲಿಸಲು ಜನಾಂಗದ ಮುಖಂಡರ ನಿರ್ಧಾರ

ಮೈಸೂರು, ಮಾ.14(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕನಿಷ್ಠ ಮೂರು ಕ್ಷೇತ್ರಗಳಲ್ಲಿ ವೀರಶೈವ ಲಿಂಗಾಯಿತ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮುಖಂಡ ಮೇಗಳಾಪುರ ನಾಗರಾಜ್ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ವೀರಶೈವ ಲಿಂಗಾಯತ ಸಮುದಾಯ ಪ್ರಬಲವಾಗಿದ್ದರೂ, ರಾಜಕೀಯ ಪ್ರಾತಿನಿಧ್ಯ ಸಿಗುತ್ತಿಲ್ಲ. ಈ ಹಿಂದೆ ಮೈಸೂರು–ಚಾಮರಾಜನಗರ ಜಿಲ್ಲೆಯಿಂದ 7 ಮಂದಿ ನಮ್ಮ ಸಮುದಾಯದ ಮುಖಂಡರು ಶಾಸಕರಾಗಿ ಆಯ್ಕೆಯಾಗುತ್ತಿದ್ದರು. ಆದರೆ ಕೆಲ ವರ್ಷಗಳಿಂದ ನಮ್ಮ ಸಮುದಾಯವನ್ನು ಕಡೆಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇದೀಗ ವೀರಶೈವ ಲಿಂಗಾಯತ ಸಮುದಾಯ ಜಾಗೃತಗೊಂಡು ರಾಜಕೀಯ ಪಕ್ಷಗಳಿಗೆ ತಕ್ಕಪಾಠ ಕಲಿಸಲು ಮುಂದಾಗಿದೆ ಎಂದು ಎಚ್ಚರಿಸಿದರು.

ಈ ಬಾರಿ ಮೈಸೂರಿನ ಕೆ.ಆರ್.ಕ್ಷೇತ್ರ, ಚಾಮುಂಡೇಶ್ವರಿ ಹಾಗೂ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಪಕ್ಷಕ್ಕೆ ಬೆಂಬಲ ನೀಡುತ್ತೇವೆ. ಈ ಮೂರು ಕ್ಷೇತ್ರದಲ್ಲಿ ರಾಜಕೀಯ ಪಕ್ಷಗಳು ನಮ್ಮ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು. ಒಂದು ವೇಳೆ ಯಾವುದೇ ಪಕ್ಷ ಇದಕ್ಕೆ ತಪ್ಪಿದಲ್ಲಿ ಸಮುದಾಯ ಚುನಾವಣೆಯಲ್ಲಿ ಆಯಾ ರಾಜಕೀಯ ಪಕ್ಷಗಳಿಗೆ ತಕ್ಕಪಾಠ ಕಲಿಸಲಿದೆ ಎಂದರು.

ನಮ್ಮ ಸಮುದಾಯದವರು ರಾಜಕೀಯ ಪಕ್ಷಗಳಿಗೆ ಆಟದ ಸರಕಲ್ಲ. ನಮ್ಮ ಭಾವನೆಗಳನ್ನು ಗೌರವಿಸುವ ಕಡೆಗೆ ಮಾತ್ರ ಅಡಿಯಿಡುತ್ತೇವೆ. ಮೂಗಿಗೆ ತುಪ್ಪ ಸವರುವ ಪ್ರವೃತ್ತಿಯನ್ನು ಇನ್ನಾದರೂ ಎಲ್ಲ ರಾಜಕೀಯ ಪಕ್ಷಗಳು ಬಿಟ್ಟು ನ್ಯಾಯವಾಗಿ ಸಲ್ಲಬೇಕಾದ ಪ್ರಾತಿನಿಧ್ಯವನ್ನು, ಗೌರವವನ್ನು ನೀಡಬೇಕು. ಈ ಸಮುದಾಯವನ್ನು ಜಾತಿ ಮತ್ತು ಧರ್ಮದ ಆಧಾರದ ಮೇಲೆ ಒಡೆಯುವ ಕೆಲಸವನ್ನು ಯಾರೆಲ್ಲ ಮಾಡಿದ್ದಾರೆ, ಮಾಡುತ್ತಿದ್ದಾರೆ ಎಂಬ ಅರಿವು ನಮ್ಮ ಸಮುದಾಯಕ್ಕೆ ಇದೆ. ತಮಗೆ ಬೇಕಾದಾಗ ಆಡಿ ಹೊಗಳಿ ಆ ನಂತರ ಕೈಬಿಡುವ ಈ ಪ್ರವೃತ್ತಿಯನ್ನು ನಾವು ಗಮನಿಸುತ್ತಿದ್ದೇವೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕಾನ್ಯ ಶಿವಮೂರ್ತಿ, ಭಾನುಪ್ರಸಾದ್, ಮೂರ್ತಿ, ಸುರೇಶ್ ಇದ್ದರು.

ಪಿಂಚಣಿ ಅದಾಲತ್ ಏ.17ಕ್ಕೆ ಮುಂದೂಡಿಕೆ

ಮೈಸೂರು, ಮಾ.14– ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಪಿಂಚಣಿದಾರರ ಕುಂದುಕೊರತೆ ಮತ್ತು ಅಹವಾಲುಗಳಿಗೆ ಸಂಬಂಧಿಸಿದಂತೆ ಮಾ.15 ರಂದು ನಡೆಯಬೇಕಿದ್ದ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಏ.17ಕ್ಕೆ ಮುಂದೂಡಲಾಗಿದೆ. ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ, ಎಲ್ಲಾ ಇಲಾಖೆ ಕಚೇರಿ ಮುಖ್ಯಸ್ಥರು ಆರ್ಥಿಕ ವರ್ಷಾಂತ್ಯವಿರುವುದರಿಂದ ಬಿಲ್‌ಗಳನ್ನು ತಯಾರಿಸಿ ಪೂರ್ಣಗೊಳಿಸುವಲ್ಲಿ ಮಗ್ನರಾಗಿರುವುದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪಸ್ಥಿತಿಯಾಗುವುದು ಮತ್ತಷ್ಟು ಕಾರ್ಯಭಾರ ಒತ್ತಡ ಜಾಸ್ತಿಮಾಡುವುದರಿಂದ ಸದರಿ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಏ.17ಕ್ಕೆ ಮುಂದೂಡಲಾಗಿದೆ ಎಂದು ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆಯ ಅಪರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಐಎಸ್‌ಎಲ್ ಕಾರ್ಖಾನೆ ಮುಚ್ಚದಂತೆ ಆಗ್ರಹಿಸಿ ಇಬ್ಬರು ಕಾರ್ಮಿಕರ ಪ್ರತಿಭಟನೆ

ಮೈಸೂರು, ಮಾ.14(ಎಸ್‌ಪಿಎನ್)– ಸರ್.ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು (ವಿಐಎಸ್‌ಎಲ್) ಮುಚ್ಚಲು ಆದೇಶಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ವಾಪಸ್ಸು ಪಡೆಯುವಂತೆ ಆಗ್ರಹಿಸಿ ಇಬ್ಬರು ಗುತ್ತಿಗೆ ಕಾರ್ಮಿಕರು ಗಾಂಧಿಚೌಕದ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು. ವಿಐಎಸ್‌ಎಲ್ ಕಾರ್ಖಾನೆಯ ಗುತ್ತಿಗೆ ನೌಕರರ ಪರವಾಗಿ ದಯಾನಂದ ಸೇರಿದಂತೆ ಇಬ್ಬರು ನೌಕರರು ಕೇಂದ್ರ ಸರ್ಕಾರದ ವಿರುದ್ಧದ ಫಲಕಗಳನ್ನು ಪ್ರದರ್ಶಿಸಿದರು.



ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಗುತ್ತಿಗೆ ನೌಕರ ದಯಾನಂದ, ಮೈಸೂರು ಮಹಾರಾಜರು ಸ್ಥಾಪಿಸಿದ ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮುಚ್ಚುವ ನಿರ್ಧಾರದಿಂದ ಕೇಂದ್ರ ಸರ್ಕಾರ ಹಿಂದೆ ಸರಿಯಬೇಕು. ಈ ಕಾರ್ಖಾನೆ ಉಳಿಸಲು ಮೈಸೂರಿನ ಕಾರ್ಮಿಕ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ಬೆಂಬಲ ನೀಡುವಂತೆ ಎಂದು ಮನವಿ ಮಾಡಿದರು.

ಎರಡು ವರ್ಷಗಳ ಶಿಷ್ಯವೇತನಕ್ಕೆ ಆಗ್ರಹಿಸಿ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ಮಾ.14(ಎಸ್‌ಪಿಎನ್)– ಕಳೆದೆರಡು ವರ್ಷಗಳ ಹಿಂಬಾಕಿ ಶಿಷ್ಯವೇತನ ನೀಡದೆ ಮೈಸೂರು ವಿವಿ ದುರಾಡಳಿತ ನಡೆಸುತ್ತಿದೆ ಎಂದು ಆರೋಪಿಸಿ ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂಭಾಗ ಮಂಗಳವಾರ ಎಸ್ಸಿ–ಎಸ್ಟಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

2020–21ನೇ ಸಾಲಿನಲ್ಲಿ ಮೈಸೂರು ವಿವಿ ಎಸ್ಸಿ–ಎಸ್ಟಿ ವಿಶೇಷ ಘಟಕದ ವತಿಯಿಂದ ನೀಡುವ ಸಂಶೋಧನಾ ಶಿಷ್ಯವೇತನಕ್ಕೆ 46 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಆದರೆ ಶಿಷ್ಯ ವೇತನದ ಆದೇಶ ಪ್ರತಿಯಲ್ಲಿ ಪಿಹೆಚ್‌ಡಿ ಪದವಿಗೆ ನೋಂದಣೆಯಾದ ದಿನಾಂಕದಿಂದ 5 ವರ್ಷಗಳವರೆಗೆ ಶಿಷ್ಯ ವೇತನವನ್ನು ನೀಡಿದ್ದೇವೆ ಎಂದು ನಮೂದಿಸಲಾಗಿದೆ. ಆದರೆ, 2018ರಿಂದ 2020ರ ವರೆಗೆ ಕೆಲವರು ಪಿಹೆಚ್‌ಡಿಗೆ ನೋಂದಣಿಯಾಗಿದ್ದರು. ಇಂತಹ ವಿದ್ಯಾರ್ಥಿಗಳಿಗೆ 2021ಕ್ಕಿಂತ ಹಿಂದಿನ ಶಿಷ್ಯವೇತನ ವಿತರಿಸಿಲ್ಲ. ಆದರೂ ಆದೇಶ ಪ್ರತಿಯಲ್ಲಿ ವಿತರಿಸಲಾಗಿದೆ ಎಂದು ನಮೂದಿಸಿದ್ದಾರೆ. ಈ ರೀತಿ ನಮೂದಿಸಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಸಂಶೋಧನಾ ವಿದ್ಯಾರ್ಥಿ ಚಿದಂಬರಂ ತಿಳಿಸಿದರು. ಹಾಗೆಯೇ ಕಳೆದ ಎರಡು ವರ್ಷಗಳಿಂದ ಶಿಷ್ಯವೇತನ ವಿಚಾರವಾಗಿ ವಿಶ್ವವಿದ್ಯಾಲಯಕ್ಕೆ ಅನೇಕ ಬಾರಿ ಎಸ್ಸಿ–ಎಸ್ಟಿ ವಿದ್ಯಾರ್ಥಿಗಳು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗೆಯೇ ಈ ಹಿಂದಿನ(2021ನೇ ಸಾಲಿನ ಹಿಂದಿನ ವರ್ಷ) ಸಾಲಿನ ಶಿಷ್ಯವೇತನ ನೀಡದೆ ಮೈಸೂರು ವಿವಿ ಅಧಿಕಾರಿಗಳು ವಂಚಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಾದ ರಾಜೇಂದ್ರ, ಕಿರಣ್, ಮಾರುತಿ, ಗಣೇಶ್, ಮಹದೇವ್ ಸೇರಿದಂತೆ 46 ಮಂದಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ಪ್ರತಿಭಟನೆಗೆ ಮೈಸೂರು ವಿವಿ ಸಂಶೋಧಕರ ಸಂಘ ಬೆಂಬಲ ವ್ಯಕ್ತಪಡಿಸಿದೆ.

ನಾಳೆ ನಿರ್ಗಮನ ಪಥ ಸಂಚಲನ

ಮೈಸೂರು, ಮಾ.14– ಮೈಸೂರು ಪೊಲೀಸ್ ತರಬೇತಿ ಶಾಲೆಯ 8ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್, ರೈಲ್ವೇಸ್ ಮತ್ತು ಕೆ.ಎಸ್.ಐ.ಎಸ್.ಎಫ್ ಪ್ರಶಿಕ್ಷಣಾರ್ಥಿಗಳ ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 4 ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ಮಾ.16ರಂದು ಜ್ಯೋತಿನಗರದ ಡಿ.ಎ.ಆರ್ ಕವಾಯಿತು ಮೈದಾನದಲ್ಲಿ ಬೆಳಗ್ಗೆ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಪೊಲೀಸ್ ತರಬೇತಿಯ ಮಹಾ ನಿರ್ದೇಶಕ ಡಾಕ್ಟರ್ ಪಿ.ರವೀಂದ್ರನಾಥ್ ಭಾಗವಹಿಸಲಿದ್ದು, ಇವರಿಂದ ಪಥ ಸಂಚಲನ ಪರಿವೀಕ್ಷಣೆ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅತಿಥಿಗಳಾಗಿ ಮೈಸೂರಿನ ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕ ಪ್ರವೀಣ್ ಮಧುಕರ್ ಪವಾರ್ ಹಾಗೂ ನಗರದ ಪೊಲೀಸ್ ಆಯುಕ್ತ ಬಿ.ರಮೇಶ್ ಭಾಗವಹಿಸಲಿದ್ದಾರೆ ಎಂದು ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಾದ ಗೀತಾ ಎಂ.ಎಸ್ ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ ಎ.ಮಾರುತಿ ತಿಳಿಸಿದ್ದಾರೆ.

ವಿಶಿಷ್ಟ ರೀತಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ....




ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರೂಪನಗರ ನಿವಾಸಿಗಳ ವೆಲ್ಫೇರ್ ಅಸೋಸಿಯೇಷನ್, ಅಪೋಲೋ ಆಸ್ಪತ್ರೆಯ ಸಹಯೋಗದೊಂದಿಗೆ ರೂಪನಗರದ ಮಹಿಳೆಯರಿಗಾಗಿ ವಾಕಥಾನ್ ಮತ್ತು ಜುಂಬಾ ನೃತ್ಯವನ್ನು ಆಯೋಜಿಸಲಾಗಿತ್ತು. ವಾಕಥಾನ್‌ನಲ್ಲಿ 150 ಮಹಿಳೆಯರು ಭಾಗವಹಿಸಿದ್ದರು. ಮೊದಲ 40 ವಿಜೇತರಿಗೆ ಸಸಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಅಪೋಲೋ ಆಸ್ಪತ್ರೆಯ ಉಪಾಧ್ಯಕ್ಷ ಭರತೇಶ್ ರೆಡ್ಡಿ ಚಾಲನೆ ನೀಡಿದರು. ಸ್ತ್ರೀರೋಗ ಶಾಸ್ತ್ರದ ಕುರಿತು ಡಾ.ಆರತಿ ಬೆಹ್ಲ್ ಉಪನ್ಯಾಸ ನೀಡಿದರು. ಅಸೋಸಿಯೇಷನ್ ಪದಾಧಿಕಾರಿಗಳು, ಇತರರು ಉಪಸ್ಥಿತರಿದ್ದರು.

ನಾಳೆ ಸಾಮಾನ್ಯ ಕೌನ್ಸಿಲಿಂಗ್ ಸಭೆ

ಮೈಸೂರು, ಮಾ.14– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಮಾ.16 ರಂದು ಮಧ್ಯಾಹ್ನ 3 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮಾರ್ಚ್ ಮಾಹೆಯ ಸಾಮಾನ್ಯ ಕೌನ್ಸಿಲಿಂಗ್ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೌನ್ಸಿಲ್ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.3.2023 ಬುಧವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಜೀವನ್ ಜ್ಯೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.
- **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಸಂಸದ ಆರ್. ಧ್ರುವನಾರಾಯಣ್‌ಗೆ ಭಾವಪೂರ್ಣ ಶ್ರದ್ಧಾಂಜಲಿ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಡಿವೈಎಸ್ಪಿ ಶಿವಶಂಕರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸಮಾಜ ಸೇವಕ ಕೆ. ಹರೀಶ್‌ಗೌಡ, ಜೆಎಸ್‌ಎಸ್ ಕಾಲೇಜು ಸಹಾಯಕ ನಿರ್ದೇಶಕ ಡಾ. ನಿರಂಜನಮೂರ್ತಿ, ಇನ್ಸ್‌ಪೆಕ್ಟರ್ ಮೋಹಿತ್, ಪ್ರೊ. ಎಸ್. ಶಿವರಾಜಪ್ಪ, ಎ.ಸಿ. ಶ್ರೀಧರ್, ಡಾ. ಹೆಚ್. ಸೋಮಶೇಖರಪ್ಪ, ಡಾ. ಸಿ.ಡಿ. ಪರಶುರಾಮ್, ವಕೀಲ ಉಮೇಶ್, ಸ್ಥಳ: ವಿ.ವಿ. ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 11.30ಕ್ಕೆ.
- **ವ್ಯವಸ್ಥಾಪಕರು:** ಮೃದಂಗ ವಿದ್ವಾನ್ ವಿ.ನಾಗಭೂಷಣಾಚಾರ್ ಸಂಸ್ಮರಣೆ ಸಂಗೀತ ಕಾರ್ಯಕ್ರಮ, ವಿದ್ವಾನ್ ರಾಜಗೋಪಾಲ್ ಭಾಗವತರ್ ಮತ್ತು ತಂಡದವರಿಂದ ಹಾಡುಗಾರಿಕೆ, ಸಂಗೀತ ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ–ಪಿಟೀಲು, ವಿ.ಎಸ್.ರಮೇಶ್–ಮೋರ್ಚಿಂಗ್, ಎಂ.ಎಸ್. ಜಯರಾಮ್ –ಘಟಂ, ಸಂಗೀತ ವಿದ್ವಾನ್ ಎಂ.ಆರ್. ಉದಯಕುಮಾರ್–ಮೃದಂಗ ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಎಂ.ಎ.ಜ್ಯೋತಿ, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ. ಬೋರೇಗೌಡಾ ಚಿಕ್ಕಮರಳಿ, 9.00 ವೃತ್ತಿ ಮಾರ್ಗದರ್ಶನ–ವಸ್ತು ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಎಸ್.ಶ್ರೀಕಂಠಸ್ವಾಮಿ ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಸಂಗೀತ–ಅನೌಶ್ಕ ಶಂಕರ್–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಅಜ್ಜಿ, ಕ್ರಿಕೆಟ್ ಮತ್ತು ಯು ಟರ್ನ್", ರಚನೆ–ಇ.ಆರ್. ರಾಮಚಂದ್ರನ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಆರ್.ಮಹೇಶ್, 3.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು ಕವಯತ್ರಿ ಲಾವಣ್ಯ ಪ್ರಭಾ, ಪ್ರಸ್ತುತಿ–ಅಬ್ದುಲ್ ರಶೀದ್, 6.50 ಕೃಷಿರಂಗ–ಕಿಸಾನ್‌ವಾಣಿ, 9.30 ಹಿಂದೂಸ್ಥಾನಿ ಸಂಗೀತ–ಚಂದ್ರಶೇಖರ್ ಪುರಾಣಿಕ್ – ಗಾಯನ, 10.00 ಜನಪದ ಸಂಗೀತ, 10.30 ಸವಿನೆನಪು

'ಮೈಸೂರು ದಿಗಂತ' ಪ್ರಶಸ್ತಿ ಪ್ರದಾನ...





ಮೈಸೂರಿನ 'ಮೈಸೂರು ದಿಗಂತ' ಪ್ರಶಸ್ತಿಗಳನ್ನು ಅತ್ಯುತ್ತಮ ಮಾನವೀಯ ವರದಿಗಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಸೋಮವಾರ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ಈ ವೇಳೆ ಕಂದಾಯ ಸಚಿವ ಆರ್.ಅಶೋಕ್, 'ಮೈಸೂರು ದಿಗಂತ' ಪ್ರಾದೇಶಿಕ ಸಂಜೆ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಹನವಂತ ಮಳಲಿ, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಇತರರು ಇದ್ದಾರೆ. ಬಲಚಿತ್ರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹನವಂತ ಮಳಲಿ ಅವರನ್ನು ಅಭಿನಂದಿಸುತ್ತಿರುವುದನ್ನು ಕಾಣಬಹುದು.

ಮಾಡಾಳ್ ವಿರೂಪಾಕ್ಷಪ್ಪ ಮಧ್ಯಂತರ ಜಾಮೀನು ವಿರುದ್ಧ ಕರ್ನಾಟಕ ಲೋಕಾಯುಕ್ತ ಅರ್ಜಿ

ವಿಚಾರಣೆಗೆ ಸುಪ್ರೀಂಕೋರ್ಟ್ ಸಮ್ಮತಿ

ನವದೆಹಲಿ, ಮಾ.14– ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ (KSDL) ಗುತ್ತಿಗೆ ಹಗರಣದಲ್ಲಿ ಪುತ್ರ ಸರ್ಕಾರಿ ಅಧಿಕಾರಿ ಮಾಡಾಳ್ ಪ್ರಶಾಂತ್ ಮೂಲಕ ಲಂಚ ಸ್ವೀಕರಿಸಿದ ಆರೋಪ ಎದುರಿಸುತ್ತಿರುವ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಮಧ್ಯಂತರ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಕರ್ನಾಟಕ ಲೋಕಾಯುಕ್ತ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

ಅರ್ಜಿಯನ್ನು ಆರಂಭದಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠದ ಮುಂದೆ ತುರ್ತು ಪಟ್ಟಿಗೆ ಉಲ್ಲೇಖಿಸಲಾಗಿತ್ತು, ಅವರು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠದ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಲು ಲೋಕಾಯುಕ್ತ ವಕೀಲರಿಗೆ ಸೂಚಿಸಿದರು.

ಈ ವಿಷಯವನ್ನು ಆದಷ್ಟು ಮುಂಚಿತವಾಗಿ ಪಟ್ಟಿ ಮಾಡುವಂತೆ ವಕೀಲರು ಕೋರಿದಾಗ, ಮುಖ್ಯ ನ್ಯಾಯಮೂರ್ತಿಗಳಾದ ಚಂದ್ರಚೂಡ್, ನೀವು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠದ ಮುಂದೆ ವಿಷಯವನ್ನು ಪ್ರಸ್ತಾಪಿಸಬಹುದು. ನಾವು ಈಗ ಸಾಂವಿಧಾನಿಕ ಪೀಠದ ವಿಷಯವನ್ನು ಕೇಳುತ್ತಿದ್ದೇವೆ ಎಂದು ಹೇಳಿದರು.

ಮಧ್ಯಾಹ್ನ 2 ಗಂಟೆಗೆ ವಿಚಾರಣೆ ಕೈಗೆತ್ತಿಕೊಳ್ಳಬಹುದು ಎಂದು ವಕೀಲರು ತಿಳಿಸಿದರು. ಅದಕ್ಕೆ ಸಿಜೆಐ ಚಂದ್ರಚೂಡ್, ಸರಿ. ಹಾಗಾದರೆ ನೀವು ನ್ಯಾಯಮೂರ್ತಿ ಕೌಲ್ ಅವರ ಮುಂದೆ ಪ್ರಸ್ತಾಪಿಸಿ ಎಂದು ಹೇಳಿದರು.

ವಕೀಲರು ತಕ್ಷಣ ನ್ಯಾಯಮೂರ್ತಿ ಕೌಲ್ ನೇತೃತ್ವದ ನ್ಯಾಯಾಲಯಕ್ಕೆ ಧಾವಿಸಿ ಅರ್ಜಿಯ ತುರ್ತು ಪಟ್ಟಿಯನ್ನು ಕೋರಿದರು. ಆದಾಗ್ಯೂ, ಅರ್ಜಿಯ ತುರ್ತು ವಿಚಾರಣೆ ಏಕೆ ನಡೆಸಬೇಕು ಎಂದು ನ್ಯಾಯಮೂರ್ತಿ ಕೌಲ್ ವಕೀಲರನ್ನು ಕೇಳಿದರು.

ಚಾಮುಂಡಿಬೆಟ್ಟದಲ್ಲಿ ಹನಿ ಹನಿ ನೀರಿಗೂ ಪರದಾಡುವ ಪರಿಸ್ಥಿತಿ

● ಸಮರ್ಪಕ ನೀರು ಸರಬರಾಜಿಗೆ ಕೈಗೆತ್ತಿಕೊಂಡ ಪೈಪ್‌ಲೈನ್ ಕಾಮಗಾರಿ ನಿಂತು ಮೂರು ವರ್ಷವಾಯಿತು ● ಇದರ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ ● ಬೇಸಿಗೆಯ ಬಿರು ಬಿಸಿಲಲ್ಲಿ ಭಕ್ತಾದಿಗಳು, ಪ್ರವಾಸಿಗರು ಹೈರಾಣ ● ಬೆಟ್ಟದಲ್ಲಿ ಸಂಭವಿಸುವ ಅಗ್ನಿ ಅವಘಡಗಳ ಶಮನಕ್ಕೂ ನೀರಿಲ್ಲದ ಆತಂಕದ ಪರಿಸ್ಥಿತಿ ● ಚಾಮುಂಡಿಬೆಟ್ಟವನ್ನು ಹಾಗೆ ಅಭಿವೃದ್ಧಿ ಮಾಡುತ್ತೇವೆ, ಹೀಗೆ ಅಭಿವೃದ್ಧಿ ಮಾಡುತ್ತೇವೆ ಎನ್ನುವ 'ಭರವಸೆ' ಶೂರರಿಗೂ ಇಂತಹ ಗಂಭೀರ ಪರಿಸ್ಥಿತಿ ಅರಿವಿಲ್ಲವೆ...!



ಚಾಮುಂಡಿಬೆಟ್ಟದ ಮೇಲಿರುವ ಪಾರ್ಕಿಂಗ್ ಕಟ್ಟಡದ ಟ್ಯಾಂಕ್‌ಗಳು ನೀರಿಲ್ಲದೆ ಬರಿದಾಗಿರುವುದು.



● ಮೋಹನ್ ಕಾಯಕ

ಮೈಸೂರು, ಮಾ.14– ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಸಿದ್ಧ ಧಾರ್ಮಿಕ ಕೇಂದ್ರ ಹಾಗೂ ನಾಡ ಅಧಿದೇವತೆ ಚಾಮುಂಡಿ ಸನ್ನಿಧಿಯಾದ ಚಾಮುಂಡಿಬೆಟ್ಟದಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ....!

ನಿತ್ಯ ಸಾವಿರಾರು ಪ್ರವಾಸಿಗರು, ಭಕ್ತಾದಿಗಳು ಭೇಟಿ ನೀಡುವ ನೆಚ್ಚಿನ ತಾಣವಾದ ಸುಪ್ರಸಿದ್ಧ ಚಾಮುಂಡಿಬೆಟ್ಟದಲ್ಲಿ ಸುಡು ಬಿಸಿಲಿನ ಈ ಬೇಸಿಗೆಯಲ್ಲಿ ಹನಿ ನೀರಿಗೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಸರಾ, ಆಷಾಢ ಮಾಸ ಹೊರತುಪಡಿಸಿ ಇನ್ನುಳಿದ ದಿನಗಳಲ್ಲಿ ನೀರಿನ ಸಮರ್ಪಕ ಪೂರೈಕೆ ಇಲ್ಲದೆ ಚಾಮುಂಡೇಶ್ವರಿ ದೇವಸ್ಥಾನದ ಶುಚಿ ಕಾರ್ಯಕ್ಕೂ ತೊಂದರೆ ಉಂಟಾಗುತ್ತಿದೆ.

ಅಲ್ಲದೆ ಬೇಸಿಗೆ ಕಾಲದಲ್ಲಿ ಚಾಮುಂಡಿ ಬೆಟ್ಟದಲ್ಲಾಗುವ ಅಗ್ನಿ ಅನಾಹುತಗಳನ್ನು ನಿಯಂತ್ರಿಸಿ, ಸಸ್ಯ ಸಂಪತ್ತು ಕಾಪಾಡಲು ನೀರಿನ ಕೊರತೆ ಎದುರಾಗಿದೆ. ಬೆಟ್ಟದ ಮೇಲೆ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆಯಾದರೂ ಅಗತ್ಯವಾಗಿ ಬೇಕಾಗುವ ಜಲ ಸಂಪನ್ಮೂಲವೇ ಕ್ಷೀಣಿಸಿದೆ.

ಚಾಮುಂಡಿಬೆಟ್ಟದ ಮೇಲೆ ಸುಮಾರು 500–600 ಮನೆಗಳಿದ್ದು, 2000ಕ್ಕೂ ಹೆಚ್ಚು ಜನರು ವಾಸವಿದ್ದಾರೆ. ನಗರ ಪಾಲಿಕೆಯಿಂದ ವಾರಕ್ಕೆ ಒಂದೆರಡು ದಿನ ಮಾತ್ರ ನೀರು ಪೂರೈಕೆ ಮಾಡುತ್ತಿದ್ದು, ಯಾವುದಕ್ಕೂ ಸಾಕಾಗುತ್ತಿಲ್ಲ. ಇಲ್ಲಿ ನೀರಿನ ಸಮಸ್ಯೆಯೇ ಗಂಭೀರ ಎಂದು ಬೆಟ್ಟದಲ್ಲಿರುವ ನಿವಾಸಿಗಳು ತಿಳಿಸಿದರೆ, ಚಾಮುಂಡೇಶ್ವರಿ ದೇವಸ್ಥಾನ ಶುಚಿಗೊಳಿಸುವುದಕ್ಕೂ ನೀರಿನ ತೊಂದರೆಯಾಗುತ್ತಿದೆ ಬರುವ ನೀರನ್ನೇ ಸಂಗ್ರಹಿಸಿ ಬಳಕೆ ಮಾಡುತ್ತಿದ್ದೇವೆ ಎಂದು ಮುಜರಾಯಿ ಇಲಾಖೆಯ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಬಹುಮಹಡಿ ಕಟ್ಟಡದಲ್ಲಿಲ್ಲ ನೀರು: ಸುಮಾರು 8 ಎಕರೆ ಪ್ರದೇಶದಲ್ಲಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡವನ್ನು 80 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಈ ಕಟ್ಟಡದಲ್ಲಿರುವ 4 ಟ್ಯಾಂಕ್‌ಗಳಲ್ಲಿಯೂ ಹನಿ ನೀರಿಲ್ಲ. 600 ಕಾರುಗಳು, 1 ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳ ನಿಲುಗಡೆ ಸಾಮರ್ಥ್ಯವಿರುವ ಕಟ್ಟಡದಲ್ಲಿ ಕಾರು ಅಥವಾ ದ್ವಿಚಕ್ರ ವಾಹನಗಳಲ್ಲಿ ಬೆಂಕಿ ಕಾಣಿಸಿಕೊಂಡರೆ ಬೆಟ್ಟದ ಪಾದದಿಂದ ಮೇಲಕ್ಕೆ ಟ್ಯಾಂಕರ್‌ಗಳ ಮೂಲಕ ನೀರನ್ನು ತೆಗೆದುಕೊಂಡು ಹೋಗಿ ಬೆಂಕಿ ನಂದಿಸಬೇಕಾದ ದುಸ್ಥಿತಿ ಇದೆ.

2019ರ ಸೆ.29 ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಉದ್ಘಾಟನೆಗೊಂಡು ಎರಡು ವರ್ಷ ಕಳೆದರೂ ಬಹುಮಹಡಿ ಪಾರ್ಕಿಂಗ್ ಕಟ್ಟಡಕ್ಕೆ ಸರಿಯಾದ ನೀರಿನ ಪೂರೈಕೆಯಾಗುತ್ತಿಲ್ಲ. ದಸರಾ, ಆಷಾಢ ಮಾಸದಲ್ಲಿ ದಾಸೋಹ ಸಂದರ್ಭದಲ್ಲಷ್ಟೇ ನೀರಿನ ಪೂರೈಕೆಯಾಗಿರುವುದು ಬಿಟ್ಟರೆ, ಇನ್ನುಳಿದ ದಿನಗಳಲ್ಲಿ ಪಾರ್ಕಿಂಗ್ ಕಟ್ಟಡದ ಟ್ಯಾಂಕ್‌ಗಳು ನೀರಿಲ್ಲದೆ ಒಣಗುತ್ತಿವೆ. ಪಾರ್ಕಿಂಗ್ ಕಟ್ಟಡ ಉದ್ಘಾಟನೆಯಾದಾಗಿನಿಂದಲೂ ವಾಹನಗಳ ನಿಲುಗಡೆ ಶುಲ್ಕ ವಸೂಲಿಯಾಗುತ್ತದೆಯೇ ತುರ್ತು ಸಂದರ್ಭದಲ್ಲಿ ಅಗತ್ಯವಾಗಿ ಬೇಕಾಗುವ ನೀರಿನ ಪೂರೈಕೆ ಮಾತ್ರ ಆಗಿಲ್ಲ. ಅಲ್ಲದೆ ಪಾರ್ಕಿಂಗ್ ಕಟ್ಟಡದ ಮೇಲೆ 116 ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಲಾಗಿದ್ದು, ಅಕಸ್ಮಾತ್ ಅಗ್ನಿ ಅನಾಹುತ ಸಂಭವಿಸಿದರೆ ಭಾರೀ ಪ್ರಮಾಣದಲ್ಲಿ ತೊಂದರೆ ಎದುರಾಗಲಿದೆ

ಆತಂಕ: ವಾರದ ಹಿಂದೆಯಷ್ಟೇ ಪಾರ್ಕಿಂಗ್‌ನಲ್ಲಿ ನಿಂತಿದ್ದ ಕಾರೊಂದರಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಸ್ವಲ್ಪದರಲ್ಲೇ ಅಗ್ನಿನಂದಕ(fire extinguisher) ಬಳಸಿ ಬೆಂಕಿ ನಂದಿಸಲಾಯಿತು. ದೊಡ್ಡ ಮಟ್ಟದಲ್ಲಿ ಬೆಂಕಿ ಹೊತ್ತಿಕೊಂಡಿದ್ದರೆ ಭಾರೀ ಅನಾಹುತ ಸಂಭವಿಸುತ್ತಿತ್ತು. ಬೇಸಿಗೆಯಲ್ಲಿ ಎಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತದೆ ಎಂಬುದೇ ತಿಳಿಯುವುದಿಲ್ಲ. ನೀರು ಪೂರೈಕೆ ಇಲ್ಲದಿರುವುದು ಆತಂಕ ಉಂಟುಮಾಡಿದೆ ಎಂದು ಪಾರ್ಕಿಂಗ್ ಕಟ್ಟಡದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಯೊಬ್ಬರು ತಿಳಿಸಿದರು.

ಪರದಾಡಿದೆವು: ಕೆಲ ದಿನಗಳ ಹಿಂದೆಯಷ್ಟೇ ಚಾಮುಂಡಿಬೆಟ್ಟದಲ್ಲಾದ ಕಾಡ್ಗಿಚ್ಚು ನಂದಿಸಲು ಪರದಾಡಿದೆವು. ಬೆಟ್ಟದ ಮೇಲಿರುವ ಪಾರ್ಕಿಂಗ್ ಕಟ್ಟಡದಿಂದ ನೀರು ಹಾಯಿಸೋಣವೆಂದು ಪೈಪ್‌ವಾಲ್ವ್‌ಗಳನ್ನು ತಿರುಗಿಸಿದರೂ ಹನಿ ನೀರಿಲ್ಲ. ಬಳಿಕ ಮತ್ತೆರಡು ಟ್ಯಾಂಕರ್‌ಗಳಲ್ಲಿ ನೀರನ್ನು ಕೆಳಗಿನಿಂದಲೇ ತೆಗೆದುಕೊಂಡು ಹೋಗಬೇಕಾಯಿತು. ಇದರಿಂದ ಬೆಂಕಿ ನಂದಿಸುವ ಕಾರ್ಯಾಚರಣೆ ತುಂಬಾ ಸಮಯ ಹಿಡಿಯಿತು. ಬೆಟ್ಟದ ಮೇಲೆಯೇ ನೀರು ದೊರೆತರೆ ಬೇಸಿಗೆ ಸಂದರ್ಭದಲ್ಲಿ ಉಂಟಾಗುವ ಅಗ್ನಿ ಅವಘಡಗಳನ್ನು ನಿಯಂತ್ರಿಸಲು ಅನುಕೂಲವಾಗುತ್ತದೆ ಎಂದು ಅಗ್ನಿಶಾಮಕ ಸಿಬ್ಬಂದಿಯೊಬ್ಬರು ಹೇಳಿದರು.



ಇತ್ತೀಚೆಗೆ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಹೊತ್ತಿ ಉರಿದ ಕಾರು

ಸ್ಥಗಿತಗೊಂಡಿರುವ ಪೈಪ್‌ಲೈನ್ ಕಾಮಗಾರಿ ಪೂರ್ಣವಾದರೆ ನೀರಿನ ಸಮಸ್ಯೆ ಬಗೆಹರಿಸಲಿದೆ....

ಚಾಮುಂಡಿಬೆಟ್ಟಕ್ಕೆ ಸಮರ್ಪಕ ನೀರಿನ ಪೂರೈಕೆಗಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವತಿಯಿಂದ ಕೈಗೊಂಡಿದ್ದ ಪೈಪ್‌ಲೈನ್ ಕಾಮಗಾರಿ ಪೂರ್ಣವಾದರಷ್ಟೇ ಚಾಮುಂಡಿಬೆಟ್ಟದ ಮೇಲಿನ ನೀರಿನ ಸಮಸ್ಯೆ ಬಗೆಹರಿಯಲಿದೆ ಎಂದು ಚಾಮುಂಡಿಬೆಟ್ಟದ ಕೆಲ ಗ್ರಾಮಸ್ಥರು, ಮುಜರಾಯಿ ಇಲಾಖೆ ಅಧಿಕಾರಿಗಳು ಹಾಗೂ ಭಕ್ತಾದಿಗಳು ತಿಳಿಸಿದ್ದಾರೆ. ಬೆಟ್ಟದ ಪಾದದಲ್ಲಿರುವ ಪಂಪ್‌ಹೌಸ್‌ನಿಂದ ರಾಜೇಂದ್ರ ವಿಲಾಸ ಅರಮನೆ ಮಾರ್ಗವಾಗಿ ಕೈಗೊಂಡಿದ್ದ ಪೈಪ್‌ಲೈನ್ ಕಾಮಗಾರಿ ಸ್ಥಗಿತಗೊಂಡು ಸುಮಾರು 3 ವರ್ಷವೇ ಕಳೆದಿದೆ. ಈ ಕಾಮಗಾರಿ ಪೂರ್ಣವಾದರಷ್ಟೇ ಚಾಮುಂಡಿಬೆಟ್ಟದಲ್ಲಿನ ನೀರಿನ ಬವಣೆ ತಪ್ಪಲಿದೆ ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ.

250 ಮೀಟರ್ ಕಾಮಗಾರಿಯಲ್ಲಿ ತೊಡಕು: ಮೊದಲಿದ್ದ 6 ಇಂಚಿನ ಪೈಪ್ ಬದಲು ಒಂದು ಅಡಿ ಪೈಪ್ ಅಳವಡಿಸುವ ಕಾಮಗಾರಿ ಇದಾಗಿದೆ. ಬೆಟ್ಟದ ಪಾದದಿಂದ ರಾಜೇಂದ್ರ ವಿಲಾಸ ಅರಮನೆವರೆಗೂ ಕಾಮಗಾರಿ ನಡೆದಿದೆ. ಆದರೆ ರಾಜೇಂದ್ರ ವಿಲಾಸ ಅರಮನೆ ಬಳಿ 250 ಮೀಟರ್‌ನಷ್ಟು ಕಾಮಗಾರಿ ಆಗಬೇಕಾಗಿದ್ದು, ಸಂಬಂಧಪಟ್ಟವರ ಅನುಮತಿ ದೊರೆಯದೆ ಕಾಮಗಾರಿ ಅರ್ಧಕ್ಕೆ ಸ್ಥಗಿತವಾಗಿದೆ. ಪೈಪ್‌ಲೈನ್ ಕಾಮಗಾರಿ ಪೂರ್ಣವಾದರೆ ಚಾಮುಂಡಿಬೆಟ್ಟದ ನೀರಿನ ಸಮಸ್ಯೆ ಬಗೆಹರಿಯಲಿದ್ದು, ದಸರಾ ಹಾಗೂ ಆಷಾಢ ಮಾಸಗಳಲ್ಲಿಯೂ ಅನುಕೂಲವಾಗಲಿದೆ ಎಂದು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಇಂಜಿನಿಯರ್ ಒಬ್ಬರು ತಿಳಿಸಿದರು.

ಬೆಟ್ಟದ ಪಾದದಲ್ಲಿರುವ ಪಂಪ್‌ಹೌಸ್‌ನಿಂದ ನಂದಿ ವಿಗ್ರಹದ ಬಳಿಯ ಟ್ಯಾಂಕ್ ನೀರನ್ನು ತುಂಬಿಸಿಕೊಂಡು ನಂತರ ಅಲ್ಲಿಂದ ಮತ್ತೊಂದು ಮೋಟಾರ್ ಮೂಲಕ ಬೆಟ್ಟದ ಮೇಲಕ್ಕೆ ನೀರೆತ್ತಿಸಲಾಗುವುದು. ಬೆಟ್ಟ ಮೇಲೆ ಮೇಲೂ ನೆಲ ಮಟ್ಟದ ಜಲಾಶಯ(ground level reservoir)ವನ್ನು ನಿರ್ಮಾಣ ಮಾಡಲಾಗಿದೆ. ಪ್ರತೀ ವರ್ಷ ಆಷಾಡ ಮಾಸದಲ್ಲಿ ಭಕ್ತ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು, ನೀರಿನ ವ್ಯವಸ್ಥಿತ ಪೂರೈಕೆ ಇಲ್ಲದೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್ ತಿರುಪತಿ ಯಾತ್ರೆ ಸೇವೆ



ಮೈಸೂರು, ಮಾ.14(ಜಿಎ)– ತಿರುಪತಿ ತಿಮ್ಮಪ್ಪನ ದರ್ಶನ ಮಾಡಬೇಕೆನ್ನುವವರ ಆಸೆಯನ್ನು ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಯೂ ಆದ ಕಲ್ಯಾಣಗಿರಿಯ ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನದ ಅಧ್ಯಕ್ಷ ಹೆಚ್.ಜಿ.ಗಿರಿಧರ್ ಈಡೇರಿಸುತ್ತಿದ್ದಾರೆ.

ಜೀವನದಲ್ಲಿ ಒಮ್ಮೆಯಾದರೂ ತಿರುಪತಿ ತಿಮ್ಮಪ್ಪನ ದರ್ಶನ ಮಾಡಬೇಕೆನ್ನುವ ಭಕ್ತರನ್ನು ಗುರ್ತಿಸಿ ಪ್ರತಿವರ್ಷ ಉಚಿತವಾಗಿ ತಿರುಪತಿ ಯಾತ್ರೆ ನಡೆಸುತ್ತಿರುವ ಗಿರಿಧರ್, ಇದುವರೆಗೆ ಸುಮಾರು 10 ಸಾವಿರ ಭಕ್ತರಿಗೆ ತಿಮ್ಮಪ್ಪನ ದರ್ಶನ ಮಾಡಿಸಿದ್ದು, ಮತ್ತೊಂದು ತಿರುಪತಿ ಯಾತ್ರೆಗೆ ಮಂಗಳವಾರ ಚಾಲನೆ ನೀಡಿದ್ದಾರೆ. ಈ ಬಾರಿ 10 ಬಸ್‌ನಲ್ಲಿ 550 ಮಂದಿ ತಿರುಪತಿ ತಿಮ್ಮಪ್ಪನ ದರ್ಶನ ಮಾಡುವ ಭಾಗ್ಯ ಪಡೆದಿದ್ದಾರೆ.

ಈ ವೇಳೆ ಮಾತನಾಡಿರುವ ಅವರು, ಪ್ರತಿ ವರ್ಷ ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನದಲ್ಲಿ ಅನೇಕ ಸಾಮಾಜಿಕ ಚಟುವಟಿಕೆಗಳ ಜೊತೆಯಲ್ಲಿ ಉಚಿತ ತಿರುಪತಿ ಯಾತ್ರೆಯನ್ನು ಆಯೋಜಿಸುತ್ತಿದ್ದು, ಇದುವರೆಗೂ 10,000 ಭಕ್ತರು ತಿರುಪತಿ ಯಾತ್ರೆ ಮಾಡಿದ್ದಾರೆ. ಜೀವನದಲ್ಲಿ ಒಮ್ಮೆಯಾದರೂ ವೆಂಕಟೇಶ್ವರನ ದರ್ಶನ ಮಾಡಬೇಕು ಎನ್ನುವ ಭಕ್ತರನ್ನು ಗುರ್ತಿಸಿ, ಅವರನ್ನು ಕಳುಹಿಸಿಕೊಡಲಾಗುತ್ತಿದೆ ಸನಾತನ ಹಿಂದೂ ಧರ್ಮ ಉಳಿಯ ಬೇಕಾದರೆ ಈ ರೀತಿ ಚಟುವಟಿಕೆಗಳನ್ನು ಮಾಡುತ್ತಿರಬೇಕು. ಮಾನವ ತನ್ನ ಸಂಪಾದನೆಯಲ್ಲಿ ಅರ್ಧ ಭಾಗವನ್ನು ಜನರಿಗೆ ಮೀಸಲಿಡಬೇಕು. ಜನರಿಗೆ ಅನುಕೂಲವಾಗುವಂತಹ ಕಲ್ಯಾಣ ಕಾರ್ಯಗಳನ್ನು ಮಾಡಬೇಕು. ಜನರ ಸೇವೆಯೇ ಜನಾರ್ಧನ ಸೇವೆ ಎಂಬ ಘೋಷವಾಕ್ಯದೊಂದಿಗೆ ಜೀವನವನ್ನು ನಡೆಸಬೇಕು ಎಂದು ಹೇಳಿದ್ದಾರೆ.

ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ತಿರುಪತಿ ಯಾತ್ರಾರ್ಥಿಗಳಿಗೆ ಶುಭಕೋರಿದರು. ಬಿಜೆಪಿ ಮುಖಂಡರಾದ ರವಿಶಂಕರ್, ಸೋಮಸುಂದರ್, ವಾಣೀಶ್ ಕುಮಾರ್, ದೇವನೂರು ಪ್ರತಾಪ್, ಜೋಗಿ ಮಂಜು, ಜಯರಾಮ್, ಚೇತನ್, ಸ್ವಾಮಿಗೌಡ, ವೇಲು, ಸತೀಶ್, ಮಂಜು ಮತ್ತಿತರರಿದ್ದರು.



ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಸೌಂದರ್ಯ ತಜ್ಞೆಯು ಉಚಿತ ತರಬೇತಿ ನೀಡಿ ಹಲವರ ಬದುಕಿಗೆ ನೆರವಾದ ಬ್ಯೂಟಿಷಿಯನ್‌ರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಮೈಸೂರಿನ ಶ್ರೀಮತಿ ಉಮಾ ಜಾಧವ್, ಶ್ರೀಮತಿ ಶಾಂತ ಗೌಡ, ಶ್ರೀಮತಿ ಪದ್ಮಶ್ರೀ, ಶ್ರೀಮತಿ ಮೀನಾಕ್ಷಿ ವಿಜಯ್, ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಮದ್ದೂರಿನ ಶ್ರೀಮತಿ ರಮಾಮಣಿ, ಸರಗೂರಿನ ಶ್ರೀಮತಿ ಮಂಗಳಾ ಶ್ರೀನಿವಾಸ್ ಇತರರಿದ್ದಾರೆ

ಸಾರ್ವಜನಿಕರ ದೂರಿನ ಹಿನ್ನೆಲೆ

ಹೂಟಗಳ್ಳಿ ನಗರಸಭೆಗೆ ಶಾಸಕ ಜಿ.ಟಿ.ದೇವೇಗೌಡರ ದಿಢೀರ್ ಭೇಟಿ

● ಅಧಿಕಾರಿಗಳಿಂದ ಮಾಹಿತಿ ಸಂಗ್ರಹ ● ಸಾರ್ವಜನಿಕರಿಗೆ ಖಾತೆ, ಕಂದಾಯ ಸೇರಿ ಯಾವುದೇ ಸಮಸ್ಯೆ ಆಗದಂತೆ ಎಚ್ಚರಿಕೆ



ಮೈಸೂರು, ಮಾ.14(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಹೂಟಗಳ್ಳಿ ನಗರಸಭೆಗೆ ಮಂಗಳವಾರ ದಿಢೀರ್ ಭೇಟಿ ನೀಡಿ ಅಧಿಕಾರಿಗಳಿಗೆ ಶಾಕ್ ನೀಡಿದರು.

ಹೂಟಗಳ್ಳಿ ನಗರಸಭೆಯಲ್ಲಿ ಖಾತೆ ವಿಳಂಬ ಸೇರಿದಂತೆ ಹಲವು ಸಮಸ್ಯೆಗಳಿವೆ ಎಂದು ಸಾರ್ವಜನಿಕರು ದೂರಿದ್ದರ ಹಿನ್ನೆಲೆಯಲ್ಲಿ ಇಂದು ದಿಢೀರ್ ಭೇಟಿ ನೀಡಿದ್ದ ಅವರು, ಅಲ್ಲಿನ ಕಾರ್ಯ ಚಟುವಟಿಕೆಯನ್ನು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಇಲ್ಲಿನ ಕಂದಾಯ ವಿಭಾಗದ ಅಧಿಕಾರಿಗಳು, ಸಾರ್ವಜನಿಕ ಕೆಲಸ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಕಂದಾಯ ನಿಗದಿ, ಖಾತೆ ಮಾಡಿಕೊಡಲು ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ ಎಂದು ನನಗೆ ದೂರು ಬಂದಿದೆ. ಯಾವುದೇ ಕಾರಣಕ್ಕೂ ಮತ್ತೆ ಈ ರೀತಿಯ ದೂರು ಬರದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಖಾತೆ–ಕಂದಾಯಕ್ಕೆ ಸಾರ್ವಜನಿಕರು ಅಲೆದಾಡುವ ಪರಿಸ್ಥಿತಿ ನಿರ್ಮಿಸಬಾರದು. ನಿಗದಿತ ಸಮಯಕ್ಕೆ ಕೆಲಸ ಮಾಡಿಕೊಡಬೇಕೆಂದು ಸೂಚನೆ ನೀಡಿದರು.

ನೂತನ ನಗರಸಭೆ ಆಗಿರುವುದರಿಂದ ಕೆಲ ಗೊಂದಲಗಳು ಎದುರಾಗಬಹುದು. ಇಲ್ಲಿನ ಅಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಗ್ರಾಪಂ ವ್ಯಾಪ್ತಿಯ ಖಾತೆಗಳನ್ನು ನಗರಸಭೆಯಲ್ಲಿ ಮಾಡಬೇಕು ಎಂದು ತಿಳಿಸಿದರು.

ಅಧಿಕಾರಿಗಳು ಖಾತೆ–ಕಂದಾಯಕ್ಕೆ ಮಾತ್ರ ಸೀಮಿತವಾಗದೆ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಆರಂಭದಿಂದಲೇ ಸ್ವಚ್ಛತೆ ನಿರ್ವಹಣೆ ಸಮರ್ಪಕವಾಗಿದ್ದರೆ ಮುಂದಿನ ದಿನಗಳಲ್ಲಿ ಗಂಭೀರ ಸಮಸ್ಯೆ ಎದುರಾಗುವುದಿಲ್ಲ. ನಗರಸಭೆ ವ್ಯಾಪ್ತಿಯಲ್ಲಿನ ಪ್ರತಿಯೊಂದು ಬಡಾವಣೆಗಳಲ್ಲೂ ಸ್ವಚ್ಛತೆ ಕಾಯ್ದುಕೊಳ್ಳಬೇಕು. ಆಟೋಗಳ ಮೂಲಕ ಕಸ ಸಂಗ್ರಹಿಸಿ, ಸಮರ್ಪಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಮಾದರಿ ನಗರಸಭೆ ಆಶಯದೊಂದಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮನ್ವಯತೆಯಿಂದ ಸಾರ್ವಜನಿಕರ ಸೇವೆ ಮಾಡಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಮುಖ್ಯಾಧಿಕಾರಿ ನರಸಿಂಹಮೂರ್ತಿ, ಮುಖಂಡರಾದ ಹೂಟಗಳ್ಳಿ ಲೋಕೇಶ್, ಸುರೇಶ್, ಕೂರ್ಗಳ್ಳಿ ನಂಜುಂಡೇಗೌಡ, ಸತೀಶ್, ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ವರ್ಷಕ್ಕೆ ಎಷ್ಟು ರಾತ್ರಿಗಳು?
ಗುಂಡ : 10 ರಾತ್ರಿಗಳು ಸಾರ್!
ಮೇಷ್ಟ್ರು : ಅದ್ಹೇಗೆ...
ಗುಂಡ : 9 ನವರಾತ್ರಿ, ಒಂದು ಶಿವರಾತ್ರಿ ಸಾರ್!

ಮೈಸೂರು ಮಿತ್ರ
ಬುಧವಾರ, 15 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಯಾವುದು ತನ್ನ ವಿಷಯದಲ್ಲಿ ಬಗ್ಗುವುದಿಲ್ಲವೋ ಅದನ್ನು ಬೇರೆಯವರ ವಿಷಯದಲ್ಲಿಯೂ ಮಾಡಬಾರದು – ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಕೋದು ಬಿತ್ತೋದು ತನ್ನಿಚ್ಛೆ, ಆಗೋದು ಹೋಗೋದು ದೇವರ ಇಚ್ಛೆ

ನಿಮ್ಮ ಪತ್ರಗಳು

ಗ್ರಂಥಾಲಯ ಸಮಯ ಮಾಮೂಲಿನಂತೆ ಇರಲಿ!!

ಮಾನ್ಯರೆ,

ಮೈಸೂರು ನಗರದ ಕೆಲವು ಸಾರ್ವಜನಿಕ ಗ್ರಂಥಾಲಯಗಳ ಸಮಯದಲ್ಲಿ ವ್ಯತ್ಯಾಸವಾಗಿದ್ದು, ಜಯಲಕ್ಷ್ಮೀಪುರಂ, ಹೆಬ್ಬಾಳು, ಚಾಮರಾಜಪುರಂ, ಜಯನಗರ,



ಬೃಂದಾವನ ಬಡಾವಣೆ ಗ್ರಂಥಾಲಯಗಳು ಬೆಳಿಗ್ಗೆ 8.30ರಿಂದ 11.30ರವರೆಗೆ ಹಾಗೂ ಸಂಜೆ 4.30ರಿಂದ 7.30ರವರೆಗೆ ತೆರೆಯುತ್ತವೆ. ಇನ್ನುಳಿದ ಗ್ರಂಥಾಲಯಗಳು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ತೆರೆಯುತ್ತವೆ. ಈ ಮೇಲ್ಕಂಡ ಗ್ರಂಥಾಲಯಗಳೂ ಸಹ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯ ನಿರ್ವಹಿಸಲಿ. ಏಕೆಂದರೆ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯ. ಮಧ್ಯೆ ಗ್ರಂಥಾಲಯಗಳಿಗೆ ಬಿಡುವು ನೀಡಿದರೆ ಅವರಿಗೆ ಸಾಕಷ್ಟು ತೊಂದರೆ ಯಾಗುತ್ತದೆ. ಆಗ ಪ್ರತಿ ಆರು ಗಂಟೆಗೆ ಇಬ್ಬರು ಮೇಲ್ವಿಚಾರಣೆ ನೋಡಿಕೊಳ್ಳಬಹುದು. ಇನ್ನು ಕೆಲವು ಹಿರಿಯ ನಾಗರಿಕರಿಗೆ ಮನೆಯಲ್ಲಿ ಸಮಯವೇ ಕಳೆಯುವುದಿಲ್ಲ. ಅವರು ಗ್ರಂಥಾಲಯಕ್ಕೆ ಬಂದು ದೈನಂದಿನ ದಿನಪತ್ರಿಕೆ, ಮಾಸ ಪತ್ರಿಕೆ, ವಾರಪತ್ರಿಕೆಗಳನ್ನು ಗಂಟೆಗಟ್ಟಲೆ ಓದಲು ಬಯಸುತ್ತಾರೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ನಗರದ ಎಲ್ಲ ಗ್ರಂಥಾಲಯಗಳು ಒಂದೇ ತರನಾದ ಅಂದರೆ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಲಿ.

–ರಾಮಣ್ಣ, ಹಿರಿಯ ನಾಗರಿಕ, ಒಂಟಿಕೊಪ್ಪಲು, ಮೈಸೂರು

ಅರವಿಂದನಗರದಲ್ಲಿ ಚರಂಡಿ ಸ್ವಚ್ಛಗೊಳಿಸಿ

ಮಾನ್ಯರೆ,

ಮೈಸೂರಿನ ಅರವಿಂದನಗರದ ಚರಂಡಿಯಲ್ಲಿ ಕಸಕಡ್ಡಿಗಳು ತುಂಬಿಕೊಂಡು ಮಳೆಯ ನೀರು ಮುಂದಕ್ಕೆ ಹರಿಯದಂತಾಗಿದೆ. ಇದರಿಂದ ಕಲುಷಿತ ನೀರು ರಸ್ತೆ ಮೇಲೆಲ್ಲಾ ಹರಿದು ಹೋಗುತ್ತದೆ. ಅಲ್ಲದೆ, ನೀರು ಸಂಗ್ರಹವಾಗುವುದರಿಂದ ಸೊಳ್ಳೆ, ಕ್ರಿಮಿಕೀಟ, ಇಲಿ, ಹೆಗ್ಗಣಗಳ ಕಾಟ ಜಾಸ್ತಿಯಾಗಿದೆ. ಇದರಿಂದ ರೋಗ ರುಜಿನಗಳು ಹರಡುವ ಭೀತಿಯುಂಟಾಗಿದೆ. ಇದರ ಬಗ್ಗೆ ಇಲ್ಲಿನ ಪಾಲಿಕೆ ಸದಸ್ಯರು ಗಮನಹರಿಸುತ್ತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಚರಂಡಿಯನ್ನು ಸ್ವಚ್ಛಗೊಳಿಸಬೇಕೆಂದು ಮನವಿ.

–ಹರೀಶ್, ಪರಿಸರವಾದಿ, ಅರವಿಂದನಗರ, ಮೈಸೂರು.

ಬಹುಸಂಖ್ಯಾತರನ್ನು ಓಲೈಸುವುದನ್ನು ನಿಲ್ಲಿಸಿ

ಮಾನ್ಯರೆ,

ಚುನಾವಣೆ ಹತ್ತಿರ ಬರುತ್ತಿದ್ದು, ರಾಜಕೀಯ ಪಕ್ಷಗಳು ಬಹುಸಂಖ್ಯಾತ ವರ್ಗದವರನ್ನು ಓಲೈಸಲು ಅತಿರೇಕದ ಹೆಜ್ಜೆಗಳನ್ನಿಡುತ್ತಿರುವುದು ನಿಜಕ್ಕೂ ಶೋಚನೀಯ. ಕುಟುಂಬ ರಾಜಕಾರಣವನ್ನು ವಿರೋಧಿಸುತ್ತಾ ಬಂದಿದ್ದ ಬಿಜೆಪಿ ಸರ್ಕಾರವಾದರೂ ಮಾಡುತ್ತಿರುವುದಾದರೂ ಏನು? ಎಲ್ಲೆಡೆ ಬಹುಸಂಖ್ಯಾತ ಜನಾಂಗದ ಗಣ್ಯರ ಪ್ರತಿಮೆಗಳನ್ನೇ ಸ್ಥಾಪಿಸುತ್ತಿರುವುದು ಎಷ್ಟು ಸರಿ? ಸಮಗ್ರ ಕರ್ನಾಟಕದಲ್ಲಿ ಸಾವಿರಾರು ಸಂತರು, ರಾಜರುಗಳಿದ್ದು, ಅವರನ್ನೆಲ್ಲ ಕಡೆಗಣಿಸಿ ಸಮಾಜಕ್ಕೆ ಕೊಡುತ್ತಿರುವ ಸಂದೇಶವಾದರೂ ಏನು?

ಉದಾಹರಣೆಗೆ ಅಲ್ಪಸಂಖ್ಯಾತ ಜನಾಂಗದ ಮಹಾನುಭಾವರಾದ ಪುರಂದರ ದಾಸರು, ಚಕ್ರವರ್ತಿ ಶ್ರೀ ಕೃಷ್ಣದೇವರಾಯರು, ಇಮ್ಮಡಿ ಪುಲಕೇಶಿ, ಕೈವಾರ ತಾತಯ್ಯನವರ ಕೊಡುಗೆ ಕರ್ನಾಟಕಕ್ಕೆ ಏನು ಇಲ್ಲವೇ? ನಮ್ಮ ನಾಡಿನ ಸಂತರು ಮುನಿಗಳ ಜಯಂತಿಯನ್ನು ಆಯಾ ಜನಾಂಗದವರೇ ಆಚರಿಸಬೇಕಾಗಿ ಬಂದಿರುವುದು ನಮ್ಮ ನಾಡಿನ ದುರಂತವೆಂದು ಇತ್ತೀಚೆಗೆ ರಘು ಕೌಟಿಲ್ಯ ಸಮಾರಂಭವೊಂದರಲ್ಲಿ ಹೇಳಿದ್ದರು. ಅದು ಅಪ್ಪಟ ಸತ್ಯ.

ಆದ್ದರಿಂದ ಸರ್ಕಾರಗಳು ಕರ್ನಾಟಕದ ಸಂತರು, ಶರಣರು, ರಾಜರುಗಳನ್ನಾದರೂ ರಾಜಕೀಯದಿಂದ ದೂರವಿಡಿ. ಏಕೆಂದರೆ ಇವರೆಲ್ಲರೂ ಕರ್ನಾಟಕದ ಆಸ್ತಿ, ಯಾವುದೋ ಒಂದು ಜಾತಿಯ ಆಸ್ತಿಯಲ್ಲ.

– ಎಂ.ಎಸ್.ರಾಘವೇಂದ್ರ, ಮೈಸೂರು.


ಧ್ರುವನಾರಾಯಣ ಇಂದು ಶ್ರೀಮನ್ನಾರಾಯಣ

ಮಾನ್ಯರೆ,



ಮುಂಜಾನೆಯೇ ಬರಸಿಡಿಲು ಬಡಿದಂತಾಯ್ತು
ಆಘಾತಸುದ್ದಿ ಕೇಳಿದ ಸಮಸ್ತ ಕರುನಾಡಿಗೆ,
ಸೌಮ್ಯ ಸ್ವಭಾವದ ಸಜ್ಜನ–ಸಂಪನ್ನ ಅಜಾತಶತ್ರು
ಹೆಗ್ಗವಾಡಿಯ ಸುಪುತ್ರ ಧ್ರುವನಾರಾಯಣ ಇನ್ನಿಲ್ಲ!,
ಸ್ನೇಹಿತರಿಗೂ ಸ್ನೇಹಿ, ವೈರಿಗೂ ಸ್ನೇಹಿ, ಈ ಸರಳಜೀವಿ,
ಮತದಾರನ ಮನೆಮಗನಾಗಿ ವಿರಮಿಸದೆ ದುಡಿದು
ಸೇವಕನಾಗಿ ಹಮ್ಮು–ಬಿಮ್ಮು ಇಲ್ಲದೆ ತೋರಿಸಿಕೊಟ್ಟರು
ರಾಜಕಾರಣಿಗಳು ಹೀಗೂ ಇರಬಹುದೆಂದು!,
ಸದ್ದಿಲ್ಲದೆ ದೀನ–ದಲಿತರ ದೊಡ್ಡಧ್ವನಿಯಾಗಿದ್ದವರು,
ಜಾತಿಧರ್ಮಗಳನು ಮೀರಿ ನಿಂತ ಸಂತನಿವನು,
ಮತದಾರ ಚಲಾಯಿಸುವ ಒಂದೊಂದು ಓಟಿಗೂ
ಮಹತ್ವ ಇರುವುದನ್ನು ತಿಳಿಸಿದ ಪುಣ್ಯಾತ್ಮ!, ಇಲ್ಲ
ಹಾದಿಬೀದಿಯಲ್ಲಿ ಎದುರಾಳಿಯ ತೇಜೋವಧೆ,
ಕಾಮ–ಕ್ರೋಧ–ಲೋಭ–ಮದ–ಮತ್ಸರ ಅರಿಯದ
ಶ್ರೀಮನ್ನಾರಾಯಣ ನಮ್ಮ 'ಧ್ರುವ'ನಾರಾಯಣ ದೇವರು!,
ಗೆದ್ದು ಗದ್ದುಗೆ ಏರಿದಾಗಲೂ 'ಧ್ರುವ'ರಾಜನೇ,
ಸೋಲುಂಡರು ಧರ್ಮರಾಜನಾಗಿ ಸುಖದುಃಖಗಳಿಗೆ
ಸ್ಪಂದಿಸಿ ಪರಿಹರಿಸಿದ ಧ್ರುವಹರ ಹರಹರ ಮಹದೇವ
ಪರಮಾತ್ಮನಿಗೂ ಪ್ರಿಯವಾಗಿರಬೇಕು 'ಕೈ'ಬೀಸಿ
ಕರೆದು ನಭೋಮಂಡಲದ ಧ್ರುವತಾರೆ ಪಟ್ಟಕೊಟ್ಟನು!,
ಅಭಿಮಾನಿಗಳಿಗೆ ಏಕಿಷ್ಟು ಸಹಿಸಲಾಗದ ನೋವು?,
ಹುಟ್ಟಿದವರೊಮ್ಮೆ ಸಾಯಲೇಬೇಕು ಜಗದ ನಿಯಮ,
ಮನಸ್ಸುಗಳನ್ನು ಗೆದ್ದು ಸತ್ತು ಬದುಕಿದ್ದಾರೆ ನಮ್ಮೊಳಗೆ
ಇದ್ದವರಿಗೆ ಮಾದರಿಯಾಗಿ ನಾಯಕ ಶ್ರೀ ಧ್ರುವನಾರಾಯಣ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.




ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಚುನಾವಣೆ ಬರುತ್ತಿದೆ: ಮತದಾರ ದೇವರುಗಳಲ್ಲಿ ಒಂದು ಮನವಿ







ನಮ್ಮ ಈ ಪ್ರಜಾಪ್ರಭುತ್ವದಲ್ಲಿ ಎಲ್ಲಾ ವರ್ಗದ ಮತದಾರರು ತಮ್ಮ ರಹಸ್ಯವಾದ ಮತವನ್ನು ಚಲಾಯಿಸುವಾಗ ತಮ್ಮದು ಅರಿವಿನ ಆಯ್ಕೆ ಆಗಿರಲಿ (Informed Choice). ಒಬ್ಬ ಅಭ್ಯರ್ಥಿಯ ಅಪರಾಧಿ ಪ್ರವೃತ್ತಿ (criminal acts), ಅವನ ವಿದ್ಯಾರ್ಹತೆ ಹಾಗೂ ಆರ್ಥಿಕ ಹಿನ್ನೆಲೆಯ ಬಗ್ಗೆ ಅರಿವಿರಲಿ. ಈ ಮಾಹಿತಿ ಮತದಾರನಿಗೆ ಇದ್ದರೆ ಮಾತ್ರ ಅವನು ಒಬ್ಬ ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ಸಾಧ್ಯ.

ನಮ್ಮ ಹಿಂದಿನ ಹಾಗೂ ಇಂದಿನ ರಾಜಕೀಯ ಗೊಂದಲದ ಗೂಡಾಗಿದೆ. ರಾಷ್ಟ್ರದ ಬೆಳವಣಿಗೆ ಕುಂಠಿತವಾಗಲು ಮತದಾರರಲ್ಲಿನ ಈ ಅರಿವಿನ ಕೊರತೆಯೇ ಕಾರಣ ಎಂದು ಬುದ್ಧಿಜೀವಿಗಳು ತಮ್ಮ ಅನುಭವದಿಂದ ಅರಿತಿದ್ದಾರೆ. ಈ ಹಿಂದೆ ಇದ್ದ ಹಾಗೂ ಈಗ ಇರುವಂತಹ ಸರಕಾರಕ್ಕೂ ಇದರ ಅರಿವಿದೆ. ಆದರೆ, ದುರದೃಷ್ಟವೆಂದರೆ, ಯಾವ ಸರಕಾರವೂ ನಮ್ಮ ಈ ಚುನಾವಣಾ ಪ್ರಕ್ರಿಯೆಯಲ್ಲಿ ಬದಲಾವಣೆ ತರಲು ಸಿದ್ಧರಿಲ್ಲ, ರಾಜಕೀಯ ಮನಸ್ಥಿತಿ ಮಾತ್ರವಲ್ಲ ಇಚ್ಛಾಶಕ್ತಿಯೂ ಇಲ್ಲ.

ನಮ್ಮ ಚುನಾವಣೆಗೆ ಸಂಬಂಧಿಸಿದಂತೆ ಈ ಒಂದು ದೊಡ್ಡ ಕೊರತೆಯನ್ನು ನಿವಾರಿಸಲು ನಮ್ಮ ನಡುವೆಯೇ ಇರುವ ಅನೇಕ ಪ್ರಜ್ಞಾವಂತ ಬುದ್ಧಿಜೀವಿಗಳು, ನಮ್ಮ ಸಂವಿಧಾನ ಪಂಡಿತರು, ಪರಿಣತ ನ್ಯಾಯಮೂರ್ತಿಗಳು ಹಾಗೂ ಆಡಳಿತ ವ್ಯವಸ್ಥೆಯ ಬಗ್ಗೆ ಬೋಧಿಸುವ ಪ್ರತಿಷ್ಠಿತ ವಿದ್ಯಾಸಂಸ್ಥೆಗಳ ಹಿರಿಯ ಪ್ರಾಧ್ಯಾಪಕರುಗಳು ಚಿಂತನೆ ಮಾಡಿದ್ದಾರೆ. ಈಗಲೂ, ಸ್ವಾತಂತ್ರ್ಯ ಸಿಕ್ಕಿ 75 ವರ್ಷಗಳು ಕಳೆದಿದ್ದರೂ ಇದರ ಬಗ್ಗೆ ಯೋಚನೆ ಮಾಡುತ್ತಲೇ ಇದ್ದಾರೆ. ಆದರೆ ಈ ಕಾರ್ಯವನ್ನು ಕೈಗೆತ್ತಿಕೊಂಡು ಮುಂದುವರಿಸಿದವರು ಗುಜರಾತಿನ ಅಹಮದಾಬಾದ್‌ನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (Indian Institute of Manage-ment)ನ ಒಂಬತ್ತು ಮಂದಿ ಹಿರಿಯ ಪ್ರಾಧ್ಯಾಪಕರು. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬ ಪ್ರಶ್ನೆ ಬಂದಾಗ ಈ ಮಹಾಶಯರು ಮುಂದೆ ಬಂದರು. ಅದು 1999ರಲ್ಲಿ. ಅದಾಗಲೇ ಅನೇಕ ಚುನಾವಣೆಗಳು ನಡೆದು ಹೋಗಿತ್ತು. ಆದರೆ ಅವರು ಯೋಚಿಸಿದ ಹಾಗೆ, ತಾವು ತರಬೇಕೆಂದು ಉದ್ದೇಶಿಸಿದ್ದ ಚುನಾವಣಾ ಪ್ರಕ್ರಿಯೆಯಲ್ಲಿನ ಬದಲಾವಣೆಗಳು ಸಂಪೂರ್ಣವಾಗಿ ಫಲಕಾರಿಯಾಗಲಿಲ್ಲ. ಆದರೆ ಮತದಾರರಲ್ಲಿ ಈ ಬದಲಾವಣೆಯ ಅಗತ್ಯವನ್ನು ಸ್ವಲ್ಪ ಮಟ್ಟಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಅವರು 1999ರಲ್ಲಿ ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (Association for Democratic Reforms - ADR) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ನಂತರ ಅವರು ಮಾಡಿದ ಮೊದಲ ಕೆಲಸವೆಂದರೆ ದೆಹಲಿ ಉಚ್ಚ ನ್ಯಾಯಾಲಯದಲ್ಲಿ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು (PIL) ಹಾಕಿದ್ದು. ಅವರ ಬೇಡಿಕೆ ಏನಿತ್ತೆಂದರೆ: ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ತನ್ನ ಅಪರಾಧ ಹಿನ್ನೆಲೆ, ವಿದ್ಯಾರ್ಹತೆ ಹಾಗೂ ಆಸ್ತಿ ವಿಚಾರವಾಗಿ ಮಾಹಿತಿಯನ್ನು ಕೊಡಬೇಕು. ಇದರ ಮೇಲೆ ಸರ್ವೋಚ್ಚ ನ್ಯಾಯಾಲಯ (Supreme Court) 2002 ಹಾಗೂ 2003ರಲ್ಲಿ ಒಂದು ನಿರ್ಣಯ ಕೈಗೊಂಡಿತು. ಅದೇನೆಂದರೆ, ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿ ತನ್ನ ಅಪರಾಧ ಹಿನ್ನೆಲೆ, ವಿದ್ಯಾರ್ಹತೆ ಹಾಗೂ ಆಸ್ತಿಗೆ ಸಂಬಂಧಿಸಿದ ವಿಷಯಗಳನ್ನು ಒಂದು ಪ್ರಮಾಣಪತ್ರದ (Affidavit) ಮೂಲಕ ಬಹಿರಂಗಪಡಿಸಬೇಕು ಹಾಗೂ ಅದನ್ನು ಚುನಾವಣೆಗೆ ಮುಂಚೆ ಸಂಬಂಧಿಸಿದ ಚುನಾವಣಾ ಅಧಿಕಾರಿಗೆ ಸಲ್ಲಿಸಬೇಕು. ಗುಜರಾತಿನ 2002ರ ವಿಧಾನಸಭಾ ಚುನಾವಣೆಯಲ್ಲಿ ಇದನ್ನು ಮೊದಲ ಬಾರಿಗೆ ಅನುಷ್ಠಾನಕ್ಕೆ ತರಲಾಯಿತು. ಅದಕ್ಕಾಗಿ ಒಂದು 'ರಾಷ್ಟ್ರೀಯ ಚುನಾವಣಾ ಪಹರೆ' ಎಂಬ ಪಡೆಯನ್ನು (National Election Watch) ಸ್ಥಾಪಿಸಿತು. ಅದರ ಮೂಲಕ ಮತದಾರನಿಗೆ ಅಭ್ಯರ್ಥಿಗಳ ಬಗ್ಗೆ ಮೇಲೆ ಹೇಳಲಾದ ಎಲ್ಲಾ ಮಾಹಿತಿಗಳನ್ನು ತಲುಪಿಸಿ, ಮತದಾರನಿಗೆ ಅರಿವಿನ ಆಯ್ಕೆಗೆ (Informed Choice) ಅನುವು ಮಾಡಿಕೊಡಲಾಯಿತು. ಇದರಿಂದ ನಮ್ಮ ಈ ರಾಜಕೀಯ ಹಾಗೂ ಚುನಾವಣಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ (transparency) ಹಾಗೂ ಬದ್ಧತೆಯನ್ನು (accoun-tability) ತರುವ ಆಶಯ.

ನಾವೆಲ್ಲಾ ಮತದಾರರು ಈ ದಿಸೆಯಲ್ಲಿ ಬರುವ 2023ರ ಚುನಾವಣೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ನಾವೆಲ್ಲಾ ಮತದಾರರು ಚುನಾವಣಾ ಚೌಕಿದಾರರಂತೆ ಕೆಲಸ ಮಾಡುತ್ತ, ಪ್ರಜಾಪ್ರಭುತ್ವದ ನೆಲೆಯನ್ನು ಭದ್ರಪಡಿಸುವ ಹಾಗೂ ಆ ಮೂಲಕ ದೇಶವನ್ನು ಅಭ್ಯುದಯಗೊಳಿಸುವ ಆದರೆ ಇದೆಲ್ಲವೂ ನಾವು ಆಯ್ಕೆ ಮಾಡುವ ಜನಪ್ರತಿನಿಧಿಗಳನ್ನು ಅವಲಂಬಿಸಿದೆ. ನೆನಪಿರಲಿ, ಯಾವುದೋ ಆಮಿಷಕ್ಕೆ ಒಳಗಾಗಿ ಸತ್ಯ, ರಾಷ್ಟ್ರಪ್ರೇಮ, ಜನಹಿತದ ವಿಚಾರದಲ್ಲಿ ರಾಜೀ ಮಾಡಿಕೊಳ್ಳಬೇಡಿ. ನಿಮ್ಮ ಆಯ್ಕೆ ಉತ್ತಮವೂ, ಉನ್ನತವೂ ಆಗಿರಲಿ. ಅದಕ್ಕೆ ಹೊಣೆ ನೀವೇ ಆಗಿರುತ್ತೀರಿ. ಆದರೆ ದಯವಿಟ್ಟು ಅನರ್ಹರೆಂದು ತಿಳಿದೂ ಅಂತಹವರಿಗೆ ಮತ ಹಾಕಬೇಡಿ. ಸ್ಪರ್ಧೆಯಲ್ಲಿರುವವರಲ್ಲಿ ಯಾರೊಬ್ಬರು ನಿಮ್ಮ ಆಯ್ಕೆಗೆ ಅರ್ಹರಲ್ಲವೆ, ಅದಕ್ಕೋಸ್ಕರವೇ ನಿಮ್ಮ ಮತಯಂತ್ರ –ಮತ ಚೀಟಿಯಲ್ಲಿ ಒಂದು ವಿಶೇಷ ಅವಕಾಶವನ್ನು ಕೊಟ್ಟಿದ್ದಾರೆ. ಅದೇ **'ನೋಟ'** (NOTA-None of the above candi-dates), ಮೇಲೆ ಇರುವ ಯಾವ ಅಭ್ಯರ್ಥಿಯೂ ನನಗೆ ಬೇಡವೆಂದಾದರೆ ಮತಯಂತ್ರದ ಈ ಗುಂಡಿಯನ್ನು ಒತ್ತಿ ನೀವು ಎಲ್ಲಾ ಅನರ್ಹ ಅಭ್ಯರ್ಥಿಗಳನ್ನು ತಿರಸ್ಕರಿಸಬಹುದು.

ಈ ರೀತಿಯಲ್ಲಿ ನಾವೆಲ್ಲರೂ–ಬಡವ, ಬಲ್ಲಿದ, ರೈತ, ಕಾರ್ಮಿಕ, ವಿದ್ಯಾವಂತ, ಅವಿದ್ಯಾವಂತ, ಹಿರಿಯರು, ಕಿರಿಯರು, ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳು, ಕಲಾವಿದರು ಮೊದಲಾಗಿ–ಮತ ಚಲಾಯಿಸಿದರೆ ನಮ್ಮ ಆಡಳಿತ ವ್ಯವಸ್ಥೆಯ ದಿಕ್ಕನ್ನು ಬದಲಿಸಲಾಗದಿದ್ದರೂ, ಸುಧಾರಿಸಬಹುದು. ಈ ರೀತಿ ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕಿದೆ. ಭ್ರಷ್ಟಾಚಾರ ಹಾಗೂ ಅಪರಾಧಗಳನ್ನು ರಾಜಕೀಯದಿಂದ ತೊಲಗಿಸಬಹುದು. ನಮ್ಮ ಮತದಾರನಿಗೆ ಶಕ್ತಿ ತುಂಬುವ ಕೆಲಸವಾಗಬೇಕಿದೆ.

ಆದರೆ, ಇದೆಲ್ಲದಕ್ಕೂ ಮುಖ್ಯವಾಗಿ ನಮ್ಮ ರಾಜಕೀಯ ಪಕ್ಷಗಳ ವರಿಷ್ಠರು (ಹೈಕಮಾಂಡ್) ತಮ್ಮ ಹಳೇ ಕಾರ್ಯವೈಖರಿಯನ್ನು ಬದಿಗೊತ್ತಿ ಹೊಸ ಚಿಂತನೆಯೊಂದಿಗೆ ದೇಶದ ಒಳಿತಿಗಾಗಿ ಯೋಚಿಸಬೇಕು. ಒಳ್ಳೆಯ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು. ಒಬ್ಬ ಕವಿ ಹೇಳಿದ ಹಾಗೆ, ಹಳೇ ಕಟ್ಟುಪಾಡು, ಸಂಪ್ರದಾಯ ಕೈಬಿಟ್ಟು ಹೊಸ ಮಾನದಂಡಕ್ಕೆ ಅವಕಾಶ ಮಾಡಿಕೊಡಬೇಕು. ಪ್ರಸ್ತುತ ಚುನಾವಣಾ ವ್ಯವಸ್ಥೆಯಲ್ಲಿ ಬದಲಾವಣೆ ಕೂಡ ತರಬೇಕಾಗುತ್ತದೆ. **ಲೋಕನಾಯಕ ಜಯಪ್ರಕಾಶ್ ನಾರಾಯಣ್** ಅವರು ನೀಡಿದ ಮುಖ್ಯವಾದ ಸಲಹೆ ಏನೆಂದರೆ **ಚುನಾವಣೆಯಲ್ಲಿ ಆಯ್ಕೆಯಾಗಿ ಬಂದ ಅಭ್ಯರ್ಥಿಗಳು ಅಸಮರ್ಥರು, ನಾಲಾಯಕ್, ಭ್ರಷ್ಟರಾದರೆ ಅವರನ್ನು ಅವರ ಶಾಸಕ ಸ್ಥಾನದಿಂದ ವಾಪಸು ಕರೆಸಬೇಕು (Right to recall).** ಈ ಹಕ್ಕು ಅವರು ಆಯ್ಕೆಯಾದ ಕ್ಷೇತ್ರದ ಜನರಿಗೆ ಇರಬೇಕು. ಈ ಲೇಖನವನ್ನು ಬರೆಯುವಾಗ ನನಗೆ ಪದೇ ಪದೆ ನೆನಪಾಗಿದ್ದು **ಡಾ.ಬಿ.ಆರ್.ಅಂಬೇಡ್ಕರ್** ಅವರು. ಮುಂಬಯಿಯಲ್ಲಿ ನಡೆದ ಒಂದು ರಾಜಕೀಯ ಸಮಾವೇಶದಲ್ಲಿ ಒಬ್ಬ ಸಂಕುಚಿತ, ಪ್ರಾಂತೀಯ ಮನೋಭಾವದ ರಾಜಕಾರಣಿಯ ಅಭಿಪ್ರಾಯಕ್ಕೆ ಒಂದೇ ಮಾತಿನಲ್ಲಿ ಛಾಟಿ ಬೀಸಿದಂತೆ ಪ್ರತಿಕ್ರಿಯಿಸಿದ್ದು: **"If India loses, who wins?"**, ಭಾರತ ಸೋತರೆ ಗೆಲ್ಲುವವರು ಯಾರು? ಯೋಚಿಸಿ.

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

Email: voice@starofmysore.com

ಬಿಲ್ ಬರೆಯಲು ಅಧಿಕಾರಿಗಳು 7 ಪರ್ಸೆಂಟ್ ಕೇಳುತ್ತಾರೆ!

● ಧಾರವಾಡ ಇನ್ನಿತರೆ ಕೆಲ ಜಿಲ್ಲೆಯಲ್ಲಿ 10 ಪರ್ಸೆಂಟ್ ಕೇಳ್ತಾರೆ ● ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪ
● ಗುತ್ತಿಗೆದಾರರಿಗೆ ವಿವಿಧ ಇಲಾಖೆ ಕಾಮಗಾರಿ ಮುಗಿಸಿ 2 ವರ್ಷವಾದರೂ 22 ಸಾವಿರ ಕೋಟಿ ಬಾಕಿ ಬಿಡುಗಡೆ ಆಗಿಲ್ಲ

ಬೆಂಗಳೂರು, ಮಾ. 14 (ಕೆಎಂಶಿ)–



ಡಿ.ಕೆಂಪಣ್ಣ

ಕಾಮಗಾರಿಗಳನ್ನು ಪೂರ್ಣಗೊಳಿಸಿ ಎರಡು ವರ್ಷಗಳು ಕಳೆದಿದ್ದರೂ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ಸುಮಾರು 22 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣ ಬಿಡುಗಡೆಯಾಗಬೇಕಿದೆ. ಹಾಗಾಗಿ, ಕಾಲಮಿತಿಯೊಳಗೆ ಬಾಕಿ ಮೊತ್ತ ಬಿಡುಗಡೆ ಮಾಡಬೇಕೆಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಪ್ರೆಸ್‌ಕ್ಲಬ್‌ನಲ್ಲಿಂದು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ, ನೀರಾವರಿ ಹಾಗೂ ಬಿಬಿಎಂಪಿಯಲ್ಲಿ ಅತೀ ಹೆಚ್ಚು ಕಾಮಗಾರಿಗಳು ನಡೆಯುತ್ತಿದ್ದು, ಹಣ ಬಿಡುಗಡೆಯಲ್ಲಿ ಜ್ಯೇಷ್ಠತೆಯನ್ನು ಪಾಲಿಸುತ್ತಿಲ್ಲ. ಸಚಿವರು, ಶಾಸಕರು ಹಾಗೂ ಹಿರಿಯ ಅಧಿಕಾರಿಗಳು ಸೂಚಿಸುವವರಿಗೆ ಮಾತ್ರ ಬಾಕಿ ಮೊತ್ತ ಬಿಡುಗಡೆ ಮಾಡಲಾಗುತ್ತಿದೆ. ಅಧಿಕಾರಿಗಳು ಶೇ.7ರಷ್ಟು ಹಣ ಕೊಟ್ಟರೆ ಬಿಲ್ ಬರೆಯುತ್ತೇವೆ ಎಂದು ಹೇಳುತ್ತಿದ್ದಾರೆ. ಇನ್ನು, ಧಾರವಾಡ ಮತ್ತಿತರ ಜಿಲ್ಲೆಗಳಲ್ಲಿ ಶೇ.10ರಷ್ಟು ಕೊಟ್ಟರೆ ಬಿಲ್ ಮಾಡುವುದಾಗಿ ನೇರವಾಗಿ ಹೇಳುತ್ತಿದ್ದಾರೆ. ರಾಜಕಾರಣಿಗಳು ಹಾಗೂ ಅಧಿಕಾರಿಗಳು ಅವರಿಗೆ ಬೇಕಾದವರಿಗೆ ಮಾತ್ರ ಬಿಲ್ ಮಾಡುತ್ತಾರೆ ಎಂದು ಆರೋಪಿಸಿದರು.

ಕೆಲಸ ಮಾಡದೇ ಬಿಲ್ ಕೊಡುವುದು ಕಾಂಗ್ರೆಸ್ ಚಾಳಿ

ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಬೊಮ್ಮಾಯಿ ಎದಿರೇಟು

ಬೆಂಗಳೂರು, ಮಾ. 14 (ಕೆಎಂಶಿ)–ಕೆಲಸ ಮಾಡದೇ



ಬಿಲ್ ಕೊಡುವುದು ಕಾಂಗ್ರೆಸ್ ಚಾಳಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲಸ ಹೇಗೆ ನಡೆಯುತ್ತದೆ ಎಂಬ ಕಲ್ಪನೆ ಇರಬೇಕು. ಅನುಮೋದನೆಯಾಗಿ ಸರ್ಕಾರಿ ಆದೇಶವಾಗಿ ಟೆಂಡರ್ ಆಗಿದೆ. ಅನಂತರ ಬಿಲ್ ಕೊಡುತ್ತಾರೆ ಎಂದರು. ಮಾಜಿ ಸಿಎಂ ಆಪ್ತರ ಆಡಿಯೋ ಬಗ್ಗೆ ಪ್ರತಿಕ್ರಿಯೆ ನೀಡಲಾಗುವುದಿಲ್ಲ. ಹೇಳಿಕೆ ಕೊಟ್ಟವರು ಅದಕ್ಕೆ ಜವಾಬ್ದಾರರು ಎಂದರು. ಸಚಿವ ವಿ.ಸೋಮಣ್ಣ ಅವರು ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಸ್ನೇಹಿತರು ಎಂದಿರುವ ಬಗ್ಗೆ ಉತ್ತರಿಸಿ ಅವರೊಂದಿಗೆ ಕೆಲಸ ಮಾಡಿದ್ದೇನೆ ಎಂದು ಹೇಳಿದ್ದಾರೆ. ಸೋಮಣ್ಣ ನಮ್ಮದು 35 ವರ್ಷಗಳ ಸಂಬಂಧ. ಅದು ಸತ್ಯ ಎಂದರು. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಬಳಸಲು ಟೋಲ್ ರದ್ದುಪಡಿಸಲು ಪ್ರತಿಭಟನೆ ಆಗುತ್ತಿರುವ ಬಗ್ಗೆ ಮಾತನಾಡಿ, ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿಯವರೊಂದಿಗೆ ಮಾತನಾಡಿದ್ದು, ವಿವರಗಳನ್ನು ಕೇಳಿದ್ದಾರೆ. ಪ್ರತಿ ಬಾರಿ ಟೋಲ್ ಪ್ರಾರಂಭವಾದಾಗ ಈ ವಿಚಾರ ಇದ್ದೇ ಇರುತ್ತದೆ. ವಿಚಾರಗಳನ್ನು ಜನರಿಗೆ ಹೇಳಿ ಸಮಾಧಾನ ಮಾಡಿ ಕ್ರಮ ವಹಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿದೆ ಎಂದರು.

ಲೋಕೋಪಯೋಗಿ, ನೀರಾವರಿ ಹಾಗೂ ಬಿಬಿಎಂಪಿಯಲ್ಲೇ ಪೂರ್ಣಗೊಳಿಸಿರುವ ಕಾಮಗಾರಿಗಳ ಬಾಕಿ ಮೊತ್ತವೇ ಸುಮಾರು 10 ಸಾವಿರ ಕೋಟಿ ರೂ. ಮೀರಿದೆ. ಲೋಕೋಪಯೋಗಿ ಇಲಾಖೆಯೊಂದರಲ್ಲೇ ಸುಮಾರು 5 ಸಾವಿರ ಕೋಟಿ ರೂ. ಇದೆ. ಇನ್ನು, ಬೃಹತ್ ಮತ್ತು ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆ ಸುಮಾರು 8 ಸಾವಿರ ಕೋಟಿ ರೂ. ಬಾಕಿ ಉಳಿಸಿಕೊಂಡಿದೆ ಎಂದು ವಿವರಿಸಿದರು. ಕಳೆದ ವರ್ಷ ಏಪ್ರಿಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದು, ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಈ ಸಂಬಂಧ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳಿಗೆ ನಿರಂತರವಾಗಿ ಪತ್ರವನ್ನು ಬರೆಯುತ್ತಲೇ ಇದ್ದರೂ ಕೇವಲ ಭರವಸೆ ಸಿಕ್ಕಿದೆಯೇ ಹೊರತು, ಬಾಕಿ ಮೊತ್ತ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಎಂ ನಿವಾಸಕ್ಕೆ ಮುತ್ತಿಗೆ ಹಾಕುವ ಎಚ್ಚರಿಕೆ: ಕೂಡಲೇ ಹಂತ ಹಂತವಾಗಿ ಹಿರಿತನದ ಆಧಾರದ ಮೇಲೆ ಬಾಕಿ ಮೊತ್ತ ಬಿಡುಗಡೆಗೆ ಮನವಿ ಮಾಡುತ್ತೇವೆ. ಒಂದು ವೇಳೆ ಸರ್ಕಾರ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳದಿದ್ದರೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು. ಮತ್ತು ಅಂತಿಮವಾಗಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

40 ಪರ್ಸೆಂಟ್ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಕಾರಣ ಈ ಪ್ರಕರಣ ನ್ಯಾಯಾಲಯದಲ್ಲಿದ್ದು, ಈ ವಿಷಯ ಕುರಿತು ತಡೆಯಾಜ್ಞೆ ಇದೆ. ಆದರೆ, ಈ ಬಗ್ಗೆ ನಿರಂತರ ಹೋರಾಟ ಮುಂದುವರೆಯುತ್ತದೆ. ಚುನಾವಣೆಗೆ ಯಾವುದೇ ಸಂದರ್ಭದಲ್ಲಿ ಅಧಿಸೂಚನೆ ಹೊರಡಿಸುವ ಸಾಧ್ಯತೆಗಳಿವೆ. ಒಮ್ಮೆ ಚುನಾವಣೆ ಘೋಷಣೆ ಆದರೆ ಸಬೂಬುಗಳನ್ನು ಹೇಳಲು ಸರ್ಕಾರಕ್ಕೆ ಅವಕಾಶಗಳು ಲಭ್ಯವಾಗುತ್ತವೆ. ಆದ್ದರಿಂದ ಚುನಾವಣೆಗೆ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನ ತ್ವರಿತವಾಗಿ ಗುತ್ತಿಗೆದಾರರ ಬಾಕಿ ಮೊತ್ತವನ್ನು ಹಿರಿತನದ ಆಧಾರದಲ್ಲಿ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಅವರು ಒತ್ತಾಯಿಸಿದರು.

ಮುಖ್ಯಮಂತ್ರಿಗಳೇ, ಗುತ್ತಿಗೆದಾರರ ಬಳಿ ಹಣದ ಮಂತ್ರದಂಡ ಇರುವುದಿಲ್ಲ. ಅವರೂ ಸಹ ಶ್ರೀಸಾಮಾನ್ಯರಲ್ಲಿ ಒಬ್ಬರಾಗಿರುತ್ತಾರೆ. ಎಲ್ಲ ಹುದ್ದೆಗಳಂತೆ ಗುತ್ತಿಗೆದಾರ ಕೆಲಸವೂ ಒಂದು ಹುದ್ದೆ ಅಷ್ಟೇ. ಗುತ್ತಿಗೆದಾರರು ಬ್ಯಾಂಕ್, ಮತ್ತು ಖಾಸಗಿಯವರಿಂದ ಸಾಲ ತಂದು ಬಡ್ಡಿ ಕಟ್ಟುತ್ತಿರುತ್ತಾರೆ. ಕಚ್ಚಾ ವಸ್ತುಗಳ ಪೂರೈಕೆದಾರರಿಗೆ, ಕಾರ್ಮಿಕರಿಗೆ ವೇತನ ಪಾವತಿಸಬೇಕಾಗಿರುತ್ತದೆ. ಎರಡು ಮೂರು ವರ್ಷಗಳ ಕಾಲ ಬಾಕಿ ಉಳಿಸಿಕೊಂಡರೆ ಗುತ್ತಿಗೆದಾರರು ಬದುಕುವುದಾದರೂ ಹೇಗೆ, ಸಾಲಗಾರರ ಕಾಟ ತಡೆಯಲಾರದೆ, ಕಮಿಷನ್ ಕೊಡಲಾಗದೆ ಸಮಾಜಕ್ಕೆ ಅಂಜಿ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಕಣ್ಣ ಮುಂದಿವೆ. ಮನೆ ಆಸ್ತಿ, ಪಾಸ್ತಿ ಮಾರಾಟ ಮಾಡಿಕೊಂಡು ಬೀದಿ ಪಾಲಾಗಿರುವ ಉದಾಹರಣೆಗಳು ಇವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಮಾಧ್ಯಮಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ.ರವೀಂದ್ರ, ಉಪಾಧ್ಯಕ್ಷ ಆರ್. ಅಂಬಿಕಾಪತಿ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವಿಜ್ಞಾನಿಗಳು ಅತ್ಯಂತ ತ್ಯಾಗಮಯಿಗಳು

ಡಿಆರ್‌ಡಿಒ ನಿವೃತ್ತ ಪಿಆರ್‌ಒ ಜಯಪ್ರಕಾಶ್ ರಾವ್ ಅಭಿಮತ



ಮೈಸೂರು, ಮಾ.14(ಎಂಕೆ)– ಸಂಶೋಧನೆಯು ವಿಜ್ಞಾನಿಗಳ ಪಾಲಿಗೆ ತಪಸ್ಸಾಗಿದೆ. ಗುರಿ ಸಾಧನೆಗಾಗಿ ವಿಜ್ಞಾನಿಗಳು ಹಲವು ವರ್ಷ ತ್ಯಾಗಮಯಿಗಳಾಗಿ ಬದುಕು ನಡೆಸುತ್ತಾರೆ ಎಂದು ಭಾರತ ಸರ್ಕಾರ ರಕ್ಷಣಾ ಸಚಿವಾಲಯ(ಡಿಆರ್‌ಡಿಒ)ದ ನಿವೃತ್ತ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ(ಪಿಆರ್‌ಒ) ಜಯಪ್ರಕಾಶ್ ರಾವ್ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ 'ಭಾರತೀಯ ರಕ್ಷಣಾ ಕ್ಷೇತ್ರದ ವಿಜ್ಞಾನ ಮತ್ತು ತಂತ್ರಜ್ಞಾನದ ಇತ್ತೀಚಿನ ಬೆಳವಣಿಗೆ' ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ತಂತ್ರಜ್ಞಾನ ಬೆಳವಣಿಗೆ ಅತೀ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕಲಾಂ ಅವರು, ಭಾರತವು ವಿಜ್ಞಾನ ಕ್ಷೇತ್ರದ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಕರೆ ನೀಡಿದ್ದರು ಎಂದು ಸ್ಮರಿಸಿದರು.

ಭದ್ರತೆಗೆ ಬೇಕಾದ ತಂತ್ರಜ್ಞಾನ ಪರಿಕರಗಳನ್ನು ಭಾರತದಲ್ಲೇ ನಿರ್ಮಿಸಲಾಗುತ್ತಿದೆ. ಈ ಬೆಳವಣಿಗೆಯನ್ನು ಕೆಲ ರಾಷ್ಟ್ರಗಳು ಸಹಿಸಿಕೊಳ್ಳುತ್ತಿಲ್ಲ. ಯಾವುದೇ ಕ್ಷಣದಲ್ಲಾದರೂ ಆತಂಕದ ಸನ್ನಿವೇಶಗಳು ಸೃಷ್ಟಿಯಾಗಬಹುದು. ಆದ್ದರಿಂದ ಆತಂಕವನ್ನು ಎದುರಿಸುವ ಶಕ್ತಿಯು ನಮ್ಮಲ್ಲಿ ಇರಬೇಕು. ಇಲ್ಲದಿದ್ದರೆ ನಾವು ಮತ್ತೆ ಗುಲಾಮರಾಗಬಹುದು ಎಂದರಲ್ಲದೆ ರಕ್ಷಣಾ ವಿಭಾಗದ ಶ್ರೇಷ್ಠತೆಯನ್ನು ಸದಾ ಕಾಪಾಡಿಕೊಂಡಿರಬೇಕಾಗುತ್ತದೆ ಎಂದು ತಿಳಿಸಿದರು.

ಹಣದ ಆಸೆಗೆ ವಲಸೆ: ಭಾರತದಲ್ಲಿ ಶಿಕ್ಷಣ ಪಡೆದ ಅನೇಕರು ಹಣದ ಆಸೆಗೆ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದ ಅವರು, ರಾಷ್ಟ್ರದ ರಕ್ಷಣೆಗಾಗಿ ಸೇವೆ ಸಲ್ಲಿಸುವಾಗ ದೊರೆಯುವ ನೆಮ್ಮದಿಯನ್ನು ಕಳೆದುಕೊಳ್ಳಬಾರದು. ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರು ಕೈ ಜೋಡಿಸಬೇಕು ಎಂದರು.

ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಬಾಬು, ಡಾ.ಆರ್.ದೀಪು, ಕೆ.ಬಿ.ಭಾಸ್ಕರ್ ಉಪಸ್ಥಿತರಿದ್ದರು.

ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆಯಲ್ಲಿ ಬಿಜೆಪಿ ಸರ್ಕಾರದಿಂದಲೇ ಲೂಟಿ

ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆರೋಪ



ಮೈಸೂರು, ಮಾ.14(ಎಂಟಿವೈ)– ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ನಿರ್ಮಾಣದಲ್ಲಿ ಬಿಜೆಪಿ ಸರ್ಕಾರವೇ ಲೂಟಿ ಹೊಡೆಯಲು ಮುಂದಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಪಥ ರಸ್ತೆ ಬಗ್ಗೆ ಸಾಮಾನ್ಯ ಜನರಿಗೆ ಸರಿಯಾದ ಮಾಹಿತಿ ನೀಡಿಲ್ಲ. 2009ರಿಂದ 2014ವರೆಗೆ ನಾನು ಮತ್ತು ಆರ್.ಧ್ರುವನಾರಾಯಣ್ ಸಂಸದರಾಗಿದ್ದೆವು. ಎರಡು ಪಥದ ರಸ್ತೆಯಾಗಿದ್ದ ಹೆದ್ದಾರಿಯನ್ನು ಎಸ್. ಎಂ.ಕೃಷ್ಣ ಅವರ ಕಾಲದಲ್ಲಿ ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಡಿಸಲಾಗಿತ್ತು ನಂತರ ರಾಜ್ಯದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಲೋಕೋಪಯೋಗಿ ಸಚಿವರಾಗಿದ್ದ ಡಾ.ಹೆಚ್.ಸಿ ಮಹಾದೇವಪ್ಪ ಅವಧಿಯಲ್ಲಿ ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಯಿತು. ಪ್ರಧಾನಿ ಡಾ.ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರದ ಯುಪಿಎ ಸರ್ಕಾರದಲ್ಲಿ ಹೆದ್ದಾರಿ ಸಚಿವರಾಗಿದ್ದ ಆಸ್ಕರ್ ಫರ್ನಾಂಡಿಸ್, ಎಕ್ಸ್‌ಪ್ರೆಸ್ ಹೈವೆ ನಿರ್ಮಾಣಕ್ಕೆ ಅನುಮೋದನೆ ನೀಡಿದರು. ಇದಾದ 4 ತಿಂಗಳ ಬಳಿಕ 2014ರ ಮೇ 26ರಂದು ಮೋದಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಹೀಗಿದ್ದರೂ ಬಿಜೆಪಿ ನಾಯಕರು ಹೆದ್ದಾರಿಯನ್ನು ನಾವು ಮಾಡಿಸಿದ್ದು ಎಂದು ಬೊಗಳೆ ಹೊಡೆಯುತ್ತಿದ್ದಾರೆ ಎಂದು ಹರಿಹಾಯ್ದರು.

ಬಿಜೆಪಿ ಸರ್ಕಾರದಿಂದಲೇ ಲೂಟಿ ನಡೆಯುತ್ತಿದೆ: ಯುಪಿಎ–2 ಸರ್ಕಾರದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ನಿರ್ಮಾಣಕ್ಕೆ ಅಂದಾಜು 3 ಸಾವಿರ ಕೋಟಿಗೆ ಅನುಮೋದನೆ ಸಿಕ್ಕಿತ್ತು. ನಂತರ ಬಂದ ಬಿಜೆಪಿ ಸರ್ಕಾರ 5270 ಕೋಟಿ ರೂ.ಗೆ ಹೆಚ್ಚಿಸಿತು. ಆ ನಂತರ 6420 ಕೋಟಿ ರೂ. ನಂತರ 9556 ಕೋಟಿ ರೂ.ಗೆ ಹೆಚ್ಚಳ ಮಾಡಿದ್ದಾರೆ. ರಸ್ತೆ ಸಂಪೂರ್ಣವಾಗಿ ಸಿದ್ಧವಾಗಲು ಒಟ್ಟಾರೆ 12 ಸಾವಿರ ಕೋಟಿ ರೂ. ವೆಚ್ಚವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಒಂದು ಯೋಜನೆಗೆ 5 ಬಾರಿ ಅದರ ಮೊತ್ತ ಹೆಚ್ಚಿಸಲಾಗಿದೆ. ಇದು ಲೂಟಿ ಹೊಡೆಯುವ ತಂತ್ರಗಾರಿಕೆಯಾಗಿದೆ. ಈ ಹೆದ್ದಾರಿ ಕಾಮಗಾರಿಯ ಟೆಂಡರ್ ದಿಲೀಪ್ ಕನ್ಸ್‌ಸ್ಟ್ರಕ್ಷನ್‌ಗೆ ನೀಡಲಾಗಿದೆ. ಈ ಕಂಪನಿ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಪುತ್ರನಿಗೆ ಸೇರಿದೆ.

18 ಸಾವಿರ ಕೋಟಿ ರೂ. ಲೂಟಿ: ಹೆದ್ದಾರಿ ನಿರ್ಮಾಣಕ್ಕೆ ಒಟ್ಟು 12 ಸಾವಿರ ಕೋಟಿ ಖರ್ಚಾಗಬಹುದು. ಸರ್ಕಾರ ಶೇ.40 ರಷ್ಟು ಹಣ ನೀಡಲಿದೆ. ಉಳಿದ 7500 ಕೋಟಿ ರೂ.ಅನ್ನು ಗುತ್ತಿಗೆ ಪಡೆದಿರುವ ಸಂಸ್ಥೆ ಹೂಡುತ್ತದೆ. ಆದರೆ, 10 ವರ್ಷದ ಅವಧಿಗೆ ಟೋಲ್ ಸಂಗ್ರಹಿಸಲು ಅವಕಾಶ ನೀಡಲಾಗಿದೆ. ಈಗಾಗಲೇ ಈ ರಸ್ತೆಯಲ್ಲಿ ದಿನವೊಂದಕ್ಕೆ 1ಲಕ್ಷ ವಾಹನ ಸಂಚರಿಸುತ್ತವೆ. ಒಂದು ವಾಹನಕ್ಕೆ 500 ರೂ. ಟೋಲ್ ಶುಲ್ಕ ಸಂಗ್ರಹಿಸಿದರೂ, ದಿನಕ್ಕೆ 5 ಕೋಟಿ, ತಿಂಗಳಿಗೆ 150 ಕೋಟಿ ರೂ. ಸಂಗ್ರಹವಾಗುತ್ತದೆ. ವರ್ಷಕ್ಕೆ 1800 ಕೋಟಿ ಟೋಲ್ ಸಂಗ್ರಹವಾದರೆ, 10 ವರ್ಷದ ಅವಧಿಯಲ್ಲಿ 18 ಸಾವಿರ ಕೋಟಿ ರೂ. ಸಂಗ್ರಹವಾಗಲಿದೆ. ಟೋಲ್ ಶುಲ್ಕದಲ್ಲೂ ಹೆಚ್ಚಳವಾಗುತ್ತಲೇ ಇರುತ್ತದೆ. ಹಾಗಾಗಿ ಜನರಿಂದ ಸುಲಿಗೆ ಮಾಡುವುದು ಸರ್ಕಾರವೇ ಮಾರ್ಗ ಕಂಡುಕೊಂಡಂತೆ ಕಾಣುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಿ.ಮೀಗೆ 1 ರೂ. ನಿಗದಿ ಮಾಡಲು ಆಗ್ರಹ: ಹೆದ್ದಾರಿಯಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಕೊಡಿ ಎಂದು ಕೇಳುವುದಿಲ್ಲ. ಕಿ.ಮೀಗೆ ಒಂದು ರೂ. ನಿಗದಿ ಮಾಡಬೇಕು. ಆಗ ಮೈಸೂರು–ಬೆಂಗಳೂರು ನಡುವೆ 118 ಕಿಮೀಗೆ 118 ರೂ. ಶುಲ್ಕ ಸಂಗ್ರಹಿಸಬಹುದು. ಇದರಿಂದ ಜನರಿಗೂ ಹೊರೆಯಾಗುವುದಿಲ್ಲ. ಟೋಲ್ ಸಂಗ್ರಹಿಸುವ ಸಂಸ್ಥೆಗೂ ನಷ್ಟವಾಗುವುದಿಲ್ಲ ಎಂದರು.

400 ಹೋಟೆಲ್, 91 ಬಂಕ್ ಮುಚ್ಚಿವೆ: ದಶಪಥ ಹೆದ್ದಾರಿ ನಿರ್ಮಾಣದಿಂದ ಈ ಹಿಂದೆ ರಸ್ತೆ ಬದಿ ಇದ್ದ 400 ಹೋಟೆಲ್ ಹಾಗೂ 91 ಪೆಟ್ರೋಲ್ ಬಂಕ್ ಮುಚ್ಚಿವೆ. ನೂರಾರು ಮಂದಿ ರಸ್ತೆಬದಿ ವ್ಯಾಪಾರಿಗಳಿಗೆ ನಷ್ಟವಾಗಿದೆ. ಸರ್ಕಾರ ಜನರ ಬದುಕಿನ ಜೊತೆ ಆಟವಾಡುತ್ತಿದೆ. ಇದುವರೆಗೆ ಅಪಘಾತದಲ್ಲಿ 91 ಮಂದಿ ಮೃತಪಟ್ಟಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್, ಮುಖಂಡರಾದ ರೇವಣ್ಣ ಬೀರೇಶ್ ಇದ್ದರು.

ಮಾ.17ರಂದು ಒಂದು ಗಂಟೆ ಪ್ರತಿಭಟನೆ

ಸಂಪೂರ್ಣವಾಗಿ ರಸ್ತೆ ಕಾಮಗಾರಿ ಪೂರ್ಣಗೊಳಿಸದೇ ಟೋಲ್ ಸಂಗ್ರಹಿಸುತ್ತಿರುವುದನ್ನು ವಿರೋಧಿಸಿ ಹಾಗೂ ನ್ಯೂನತೆ ಸರಿ ಮಾಡುವಂತೆ ಆಗ್ರಹಿಸಿ ಮಾ.17ರಂದು ಬೆಳಗ್ಗೆ 10.30ರಿಂದ 11.30ರವರೆಗೆ ಮಣಿಪಾಲ್ ಆಸ್ಪತ್ರೆಯ ಸರ್ಕಲ್ ಬಳಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ಕನ್ನಡಪರ ಸಂಘಟನೆಗಳು, ರೈತ ಸಂಘಟನೆ, ಮಹಿಳಾ ಸಂಘಟನೆ ಕಾರ್ಮಿಕ ಸಂಘಟನೆ ಹಾಗೂ ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಜನರ ಮೇಲೆ ಕಳಕಳಿ ಇದ್ದರೆ ಸಂಸದ ಪ್ರತಾಪ್‌ಸಿಂಹ ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬಹುದು ಎಂದು ಎ.ಹೆಚ್.ವಿಶ್ವನಾಥ್ ತಿಳಿಸಿದರು.

ಮಾ.21ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಬೆಂಗಳೂರು, ಮಾ.14– ಈ ಬಾರಿ ಯುಗಾದಿ ಹಬ್ಬಕ್ಕೆ ಊರಿಗೆ ಹೋಗುವವರಿಗೆ ರಾಜ್ಯ ಸಾರಿಗೆ ನೌಕರರ ಸಂಘ ಬಿಗ್ ಶಾಕ್ ಕೊಟ್ಟಿದೆ. ಯುಗಾದಿ ಹಬ್ಬಕ್ಕೂ ಮುನ್ನಾ ದಿನ, ಮಾರ್ಚ್ 21ರಂದು ರಾಜ್ಯಾದ್ಯಂತ ಮುಷ್ಕರಕ್ಕೆ ಕರೆ ಕೊಟ್ಟಿದೆ.

ಮಾಚ್ 21ರಂದು ಬೆಳಗ್ಗೆ 6 ಗಂಟೆಯಿಂದ ಮುಷ್ಕರ ಆರಂಭವಾಗಲಿದೆ ಎಂದು ರಾಜ್ಯ ಸಾರಿಗೆ ನೌಕರರ ಸಂಘದ ಅಧ್ಯಕ್ಷ ಅನಂತ್ ಸುಬ್ಬಾರಾವ್ ತಿಳಿಸಿದ್ದಾರೆ.

ಮುಂದಿನ ಮಂಗಳವಾರ ನಮ್ಮ ಮುಷ್ಕರ ನಡೆಯಲಿದೆ. 1 ಲಕ್ಷಕ್ಕೂ ಹೆಚ್ಚು ಸಿಬ್ಬಂದಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದು, ಸುಮಾರು 23 ಸಾವಿರ ಬಸ್‌ಗಳು ಸ್ಥಗಿತಗೊಳ್ಳಲಿವೆ. ಯಾವುದೇ ಕಾರಣಕ್ಕೂ ಡಿಪೋದಿಂದ ಬಸ್‌ಗಳನ್ನು ತೆಗೆಯಲ್ಲ ಎಂದು ಹೇಳಿದ್ದಾರೆ.

ಸರ್ಕಾರಿ ನೌಕರರ ಪ್ರತಿಭಟನೆ ನಡೆದಾಗ ಶೇ.17 ವೇತನ ಹೆಚ್ಚಳ ಮಾಡಿದ್ದರು. ಆದರೆ ನಮಗೆ ಇನ್ನೂ ವೇತನ ಹೆಚ್ಚಳದ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಸಾರಿಗೆ ಇಲಾಖೆ ಆಡಳಿತ ಮಂಡಳಿ ಬೇಡಿಕೆಗಳನ್ನೆಲ್ಲಾ ಮುಖ್ಯಮಂತ್ರಿಗಳ ಅಂಗಳಕ್ಕೆ ಹಾಕಿಬಿಟ್ಟಿದ್ದಾರೆ. ಇದರಿಂದ ಏನೇ ದುಷ್ಪರಿಣಾಮ ಆದರೂ ನೇರವಾಗಿ ಅವರೇ ಹೊಣೆಯಾಗುತ್ತಾರೆ ಎನ್ನುವಂತೆ ಮಾಡಿದೆ. ಈವರೆಗೆ ಪ್ರತಿಕ್ರಿಯಿಸದೇ ಇರುವುದರಿಂದ ಮುಷ್ಕರಕ್ಕೆ ಕರೆ ನೀಡುತ್ತಿದ್ದೇವೆ. ಜನ ನಮ್ಮನ್ನು ಕ್ಷಮಿಸಬೇಕು. ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

ರಾಜ್ಯಾದ್ಯಂತ ಮುಷ್ಕರ ಕೈಗೊಳ್ಳಲು ವಿವಿಧ ಸಂಘಟನೆಗಳಿಗೆ ಮನವಿ ಮಾಡಿದ್ದೇವೆ. ಕೆಲ ಸಂಘಟನೆಗಳು ಮುಷ್ಕರಕ್ಕೆ ಬೆಂಬಲ ನೀಡಿವೆ ಎಂದು ಹೇಳಿದ್ದಾರೆ.

ಸಾರಿಗೆ ನೌಕರರ ಬೇಡಿಕೆ ಏನು

- ಮೂಲವೇತನ ಶೇ.25ರಷ್ಟು ಹೆಚ್ಚಿಸಬೇಕು.
- ಬಾಟಾ/ಭತ್ಯೆಯನ್ನು 5 ಪಟ್ಟು ಹೆಚ್ಚಿಸಲು ಆಗ್ರಹ
- ಏಪ್ರಿಲ್ 2011 ರಂದು ವಜಾಗೊಂಡ ಸಿಬ್ಬಂದಿಯನ್ನು ಮರುನೇಮಕ ಮಾಡಬೇಕು
- ಸಿಬ್ಬಂದಿ ಮೇಲೆ ದಾಖಲಾಗಿರುವ ಕೇಸ್‌ಗಳನ್ನ ರದ್ದು ಮಾಡಬೇಕು.
- ಮುಷ್ಕರ ಸಮಯದಲ್ಲಿ ವರ್ಗಾವಣೆಯಾದ ನೌಕರರನ್ನು ಮೊದಲಿದ್ದ ಸ್ಥಳಕ್ಕೆ ಮತ್ತೆ ನಿಯುಕ್ತಿಗೊಳಿಸಬೇಕು.



ದಾವಣಗೆರೆಯಲ್ಲಿ ಇತ್ತೀಚೆಗೆ ನಡೆದ ಬಾಡಿ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಎಂ.ಡಿ.ಶ್ರೀನಿವಾಸ್ ಪ್ರಸಾದ್ (62ವರ್ಷ) ಚಿನ್ನ, ಪಿ.ಕೃಷ್ಣಮೂರ್ತಿ (54 ವರ್ಷ) ಚಿನ್ನ ಹಾಗೂ ಕೆ.ಮಂಜುನಾಥ್ (46 ವರ್ಷ) ಚಿನ್ನ ಹಾಗೂ ಬೆಳ್ಳಿ ಪದಕ ಗಳಿಸಿದ್ದಾರೆ. ಇವರು ಮೈಸೂರು ವಿದ್ಯಾರಣ್ಯಪುರಂನ ಅಪೋಲೋ ವ್ಯಾಯಾಮ ಶಾಲೆ ಪ್ರತಿನಿಧಿಸಿದ್ದರು.

ಧ್ರುವನಾರಾಯಣ್ ಪುತ್ರ ದರ್ಶನ್‌ಗೆ ನಂ.ಗೂಡು ಟಿಕೆಟ್ ನೀಡಿ

ಮೈಸೂರು,ಮಾ.14(ಎಂಟಿವೈ)– ಇತ್ತೀಚೆಗೆ ನಿಧನರಾದ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್‌ಗೆ ನಂಜನಗೂಡು ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡುವ ಮೂಲಕ ಆರ್.ಧ್ರುವನಾರಾಯಣ್ ಅವರಿಗೆ ಮರಣೋತ್ತರ ಗೌರವ ಸಲ್ಲಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ಬಾರಿ ಸಂಸದರಾಗಿ ಚಾಮರಾಜನಗರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕ್ಷೇತ್ರದಲ್ಲಿ ತಾವು ಮಾಡಿಸಬೇಕಾದ ಕೆಲಸಗಳನ್ನು ಪಟ್ಟಿ ಮಾಡಿಕೊಂಡು ದೆಹಲಿಗೆ ಬಂದು ಸಂಬಂಧಪಟ್ಟ ಅಧಿಕಾರಿಗಳಿಂದ ಕೆಲಸ ಮಾಡಿಸಿಕೊಂಡು ಬರುವವರೆಗೂ ಅಲ್ಲಿಯೇ ಇರುತ್ತಿದ್ದರು. ಬದ್ಧತೆಯಿಂದ ಕೆಲಸ ಮಾಡಿದ ಹಿನ್ನೆಲೆಯಲ್ಲಿ ಇಂದು ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ನಡೆದಿದೆ ಎಂದು.

ಆರ್.ಧ್ರುವನಾರಾಯಣ್ ಅವರು ಕಾಂಗ್ರೆಸ್ ಪಕ್ಷವನ್ನು ಸಂಘಟಿಸಲು ಶ್ರಮಿಸಿದ್ದಾರೆ. ಸಾವಿನ ಸಂದರ್ಭದಲ್ಲಿ ಅವರ ಮೇಲೆ ಜನರಿಗೆ ಎಷ್ಟು ಪ್ರೀತಿ, ಅಭಿಮಾನವಿತ್ತು ಎಂಬುದು ತಿಳಿಯಿತು. ಇಂತಹ ಸಂಕಷ್ಟ ಸಮಯದಲ್ಲಿ ಅವರ ತ್ಯಾಗವನ್ನು ಪರಿಗಣಿಸಿ, ನಂಜನಗೂಡು ಕ್ಷೇತ್ರದ ಟಿಕೆಟನ್ನು ಧ್ರುವ ನಾರಾಯಣ್ ಪುತ್ರ ದರ್ಶನ್‌ಗೆ ನೀಡಬೇಕು. ಆ ಮೂಲಕ ಧ್ರುವನಾರಾಯಣ್ ಅವರ ಕುಟುಂಬದ ಜೊತೆ ಕಾಂಗ್ರೆಸ್ ಪಕ್ಷ ಇದೆ ಎಂಬ ಸಂದೇಶ ರವಾನಿಸಬೇಕು. ಟಿಕೆಟ್ ನೀಡುವುದರಿಂದ ಧ್ರುವನಾರಾಯಣ್ ಕುಟುಂಬಕ್ಕೆ ಸಮಾಧಾನವಾಗಲಿದೆ. ಕಷ್ಟ ಕಾಲದಲ್ಲಿ ಕಾಂಗ್ರೆಸ್ ನಾಯಕರು ನಮ್ಮ ಕೈ ಹಿಡಿದರು, ಕ್ಷೇತ್ರದ ಜನ ನಮ್ಮ ಮೇಲೆ ಅಭಿಮಾನ ಇಟ್ಟಿದ್ದಾರೆ ಎಂದು ಸಮಾಧಾನ ಮಾಡಿಕೊಳ್ಳುತ್ತಾರೆ ಎಂದರು.

ಬ್ರಾಹ್ಮಣ ಅಪಹಾಸ್ಯ ಮಾಡುವವರು ಒಂದಲ್ಲ ಒಂದು ರೀತಿ ಅವರ ಸಹಕಾರ, ಆಶೀರ್ವಾದ ಪಡೆದೇ ಇರುತ್ತಾರೆ: ಶಾಸಕ ರಾಮದಾಸ್



ಮೈಸೂರು, ಮಾ.14(ಎಂಕೆ)– ಉಳುವವನೇ ಭೂಮಿ ಒಡೆಯ ಎಂಬ ಕರಾಳ ಕಾನೂನು ಜಾರಿಯಿಂದ ಆಸ್ತಿ ಕಳೆದುಕೊಂಡರೂ ಧೃತಿಗೆಡದ ವಿಪ್ರ ಸಮುದಾಯ ಸ್ವಾಭಿಮಾನದ ಬದುಕು ನಡೆಸುತ್ತಿದೆ ಎಂದು ಶಾಸಕ ಎಸ್.ಎ.ರಾಮದಾಸ್ ಅಭಿವ್ಯಕ್ತಪಡಿಸಿದರು.

ಮೈಸೂರಿನ ವಿದ್ಯಾಶಂಕರ ಮಠದಲ್ಲಿ ಆಯೋಜಿಸಿದ್ದ ಪುರೋಹಿತರಿಗೆ ಪಂಚಾಂಗ ವಿತರಣೆ ಹಾಗೂ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ 30 ಮಂದಿ ಫಲಾನುಭವಿಗಳಿಗೆ 1 ಲಕ್ಷ ರೂ.(ಸ್ವಯಂ ಉದ್ಯೋಗಕ್ಕಾಗಿ) ಅನುದಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಯತ್ರಿ ಮಾತೆ ಹಾಗೂ ಸಪ್ತ ಋಷಿಗಳ ಆಶೀರ್ವಾದ ವಿಪ್ರರ ಮೇಲಿರುವುದರಿಂದಲೇ ಆಸ್ತಿ–ಅಂತಸ್ತು ಇಲ್ಲದಿದ್ದರೂ ಸ್ವಾಭಿಮಾನದಿಂದ ಜೀವನ ನಡೆಸುತ್ತಿದ್ದಾರೆ. ಹಾಗೆಯೇ ಬ್ರಾಹ್ಮಣರನ್ನು ಕುರಿತು ಅಪಹಾಸ್ಯ ಮಾಡುವವರು ತಮ್ಮ ಜೀವನದಲ್ಲಿ ಒಂದು ಬಾರಿಯಾದರೂ ಬ್ರಾಹ್ಮಣರ ಸಹಕಾರ, ಆಶೀರ್ವಾದ ಪಡೆಯಲೇಬೇಕು ಎಂದರು.

ಸಾಬೀತು: ಸಮಾಜಕ್ಕೆ ವಿಪ್ರ ಸಮುದಾಯದ ಕೊಡುಗೆ ಏನೆಂಬುದು ಹಲವು ಬಾರೀ ಸಾಬೀತಾಗಿದೆ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿಯೂ ಶೇ.60 ರಷ್ಟು ಬ್ರಾಹ್ಮಣರು ಹೋರಾಟ ನಡೆಸಿದ್ದಾರೆ. ವಿಧಾನಸೌಧದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಪೈಕಿ ಶೇ.80 ರಷ್ಟು ಬ್ರಾಹ್ಮಣರೇ ಇದ್ದಾರೆ. ಕೇಂದ್ರ ಸರ್ಕಾರದ ಸಚಿವ ಸಂಪುಟದಲ್ಲಿ 11 ಮಂದಿ ಬ್ರಾಹ್ಮಣ ಸಮುದಾಯದ ಸಚಿವರಿದ್ದಾರೆ. ಒಟ್ಟಾರೆ ಸರ್ಕಾರದ ಆಡಳಿತದ ಭಾಗವೇ ಆಗಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ಹೇಳಿದರು.

ಹಿಂಜರಿಕೆ ಬೇಡ: ವಿಪ್ರ ಸಮುದಾಯಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಹತ್ತು–ಹಲವು ಯೋಜನೆಗಳನ್ನು ನೀಡಿದೆ. ಅವುಗಳ ಸದುಪಯೋಗಪಡಿಸಿಕೊಳ್ಳುವಲ್ಲಿ ಹಿಂಜರಿಕೆ ಬೇಡ ಎಂದು ಮನವಿ ಮಾಡಿದ ಶಾಸಕರು, ವಿಪ್ರರ ಸಂಖ್ಯೆ ದಿನೇ ದಿನೆ ಕ್ಷೀಣಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಆದ್ದರಿಂದ ಸಮುದಾಯದ ಸಂಘಟನೆಯಾಗಬೇಕು. ಇದಕ್ಕೆ ಎಂತಹ ಸಂದರ್ಭದಲ್ಲೂ ನೆರವು ನೀಡುತ್ತೇನೆ ಎಂದು ಭರವಸೆ ನೀಡಿದರು.

1.28 ಕೋಟಿ ರೂ. ಅನುದಾನ: ಇದೇ ವೇಳೆ ಕೆ.ಆರ್.ಕ್ಷೇತ್ರದಲ್ಲಿರುವ ದೇವಸ್ಥಾನಗಳ ಅಭಿವೃದ್ಧಿಗೆ ನೀಡಿರುವ 1.28 ಕೋಟಿ ರೂ. ಅನುದಾನದಲ್ಲಿ ಯಾವ್ಯಾವ ದೇವಸ್ಥಾನಗಳ ಅಭಿವೃದ್ಧಿಯಾಗಿದೆ ಎಂಬ ಪಟ್ಟಿಯನ್ನು ತಿಳಿಸಲಾಯಿತು. ಬಳಿಕ ಪುರೋಹಿತರಿಗೆ ಪಂಚಾಂಗ ಹಾಗೂ ಫಲಾನುಭವಿಗಳಿಗೆ ಅನುದಾನದ ಚೆಕ್ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಮುದಾಯದ ಪ್ರಮುಖರಾದ ನಾಗರಾಜ್, ಶ್ರೀಹರಿ, ಜಯಸಿಂಹ, ಓಂಶ್ರೀನಿವಾಸ್, ಬಾಲಕೃಷ್ಣ, ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿಮತ್ತಿತರು ಉಪಸ್ಥಿತರಿದ್ದರು.

ರಾಮನಗರದಿಂದ ಡಿ.ಕೆ.ಸುರೇಶ್ ಸ್ಪರ್ಧೆ; ಡಿ.ಕೆ.ಶಿವಕುಮಾರ್ ಮಹತ್ವದ ಸುಳಿವು



ರಾಮನಗರ, ಮಾ.14– ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ರಾಮನಗರದಲ್ಲಿ ಸಂಸದ ಡಿಕೆ ಸುರೇಶ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿಯೂ ಚರ್ಚೆ ಆಗಿರುವುದು ನಿಜ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ತಿಳಿಸಿದ್ದಾರೆ. ಡಿಕೆ ಸುರೇಶ್ ಸ್ಪರ್ಧಿಸಬೇಕು ಎಂದು ಬಹಳ ದಿನಗಳಿಂದ ಈ ಭಾಗದ ನಮ್ಮ ಕಾರ್ಯಕರ್ತರು ಒತ್ತಡ ಹೇರುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಒಂದು ಇತಿಹಾಸ ಇದೆ. ಪಕ್ಷ ಸೂಚಿಸಿದ ಮೇಲೆ ಏನೂ ಮಾಡಲಾಗದು. ನಾನು ಸಚಿವನಾಗಿದ್ದವನು ಜೆಡಿಎಸ್ ವರಿಷ್ಠ ದೇವೇಗೌಡರ ವಿರುದ್ಧ ಸ್ಪರ್ಧೆ ಮಾಡಿರಲಿಲ್ಲವೇ ರಾಜಕೀಯದಲ್ಲಿ ಕೆಲವು ಸಂದರ್ಭಗಳಲ್ಲಿ ಅನಿವಾರ್ಯ ಎದುರಾಗುತ್ತದೆ ಎಂದು ಅವರು ಹೇಳಿದ್ದಾರೆ.

ರಾಮನಗರದ ಸುಗ್ಗನಹಳ್ಳಿ ಗ್ರಾಮದಲ್ಲಿ ಮಾತನಾಡಿದ ಅವರು, ಡಿ.ಕೆ.ಸುರೇಶ್ ಯಾವತ್ತೂ ವೇದಿಕೆ ಏರಿರಲಿಲ್ಲ, ಮೈಕ್ ಹಿಡಿದಿರಲಿಲ್ಲ. ಹಿಂದೆ ಪಕ್ಷದ ಹಿರಿಯ ನಾಯಕಿ ಸೋನಿಯಾಗಾಂಧಿ ಸಂಸತ್ತಿಗೆ ಅವರ ಹೆಸರು ಘೋಷಣೆ ಮಾಡಿದ್ದರು. ಜನ ಏನು ಹೇಳುತ್ತಾರೆ ಅನ್ನುವುದನ್ನೂ ನಾವು ಕೇಳಬೇಕಲ್ಲವೇ ನಾವು ಏನಂದುಕೊಳ್ಳುತ್ತೇವೆಯೋ ಅದು ರಾಜಕೀಯ ಅಲ್ಲ. ಯಾವುದೂ ನಮ್ಮ ಕೈಯಲ್ಲಿಲ್ಲ. ಯಾವ ಸಂದರ್ಭದಲ್ಲಿ ಏನು ಆಗಬೇಕೋ ಅದು ಆಗುತ್ತದೆಎಂದು ಹೇಳಿದ್ದಾರೆ.

ಧ್ರುವನಾರಾಯಣ್ ಪುತ್ರ ದರ್ಶನ್‌ಗೆ ಟಿಕೇಟ್ ನೀಡುವ ವಿಚಾರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ. ಧ್ರುವನಾರಾಯಣ್ ಅಂತಿಮ ದರ್ಶನ ಪಡೆಯಲು ಖುದ್ದು ಮಲ್ಲಿಕಾರ್ಜುನ ಖರ್ಗೆ ಬಂದಿದ್ದರು. ಅಭಿಮಾನಿಗಳ ಆಕ್ರಂದನ ನೋಡಿದ್ದರು. ಅವರು ಹಾಗೂ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಧ್ರುವನಾರಾಯಣ ಅವರಿಗೆ ಪರ್ಯಾಯ ನಾಯಕ ಇಲ್ಲ. ಅವರು ಹಳೇ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಿದ್ದರು. ಅವರು ನನ್ನ ತಮ್ಮನ ಹಾಗೆ ಎಂದು ಡಿಕೆಶಿ ಹೇಳಿದ್ದಾರೆ.

ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್‌ಗೆ ವಿರೋಧ: ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಟೋಲ್ ಸಂಗ್ರಹಕ್ಕೆ ವಿರೋಧ ವ್ಯಕ್ತಪಡಿಸಿದ ಡಿಕೆಶಿ, ಸರ್ವೀಸ್ ರಸ್ತೆ ನೀಡದೇ ಟೋಲ್ ವಸೂಲಿ ಮಾಡಬಾರದು. ಸರ್ಕಾರ ಜನಸಾಮಾನ್ಯರ ಪಿಕ್ ಪಾಕೆಟ್ ಮಾಡುತ್ತಿದೆ. ಈಗ ನಾನೂ ಕೂಡಾ ಟೋಲ್ ಪಾವತಿಸಿ ಬಂದಿದ್ದೇನೆ. ನನ್ನ ಕಾರಿನಲ್ಲಿ ಫಾಸ್ಟ್ ಟ್ಯಾಗ್ ಇರಲಿಲ್ಲ. 500ರೂ ಕೊಟ್ಟಿದ್ದಕ್ಕೆ 230 ರೂ. ವಾಪಸ್ ಕೊಟ್ಟಿದ್ದಾರೆ. ಫಾಸ್ಟ್ ಟ್ಯಾಗ್ ಇಲ್ಲ ಎಂದು ದುಪ್ಪಟ್ಟು ಹಣ ತೆಗೆದುಕೊಂಡಿದ್ದಾರೆ. ಪ್ರತಿಭಟನೆ ನಡೆಸಿದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್–ಬಿಜೆಪಿ ಒಟ್ಟಾಗಿ ಸಂಚು: ನಿಖಿಲ್ ದೂರು



ರಾಮನಗರ, ಮಾ.14– ಜೆಡಿಎಸ್ ವಿರುದ್ಧ ರಾಮನಗರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಒಟ್ಟಾಗಿ ರಾಜಕೀಯ ಲೆಕ್ಕಾಚಾರ ಮಾಡುತ್ತಿವೆ. ಅಂತಿಮವಾಗಿ ಮತದಾರರು ತೀರ್ಮಾನಿಸುತ್ತಾರೆ ಎಂದು ರಾಮನಗರ ಕ್ಷೇತ್ರದ ಜೆಡಿಎಸ್ ಸಂಭಾವ್ಯ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದರು. ರಾಮನಗರ ಕ್ಷೇತ್ರದಿಂದ ಡಿ.ಕೆ.ಸುರೇಶ್ ಸ್ಪರ್ಧೆ ಕುರಿತು ಮಂಗಳವಾರ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು. ಮಂಡ್ಯದಲ್ಲಿ ಬಿಜೆಪಿ, ಕಾಂಗ್ರೆಸ್, ರೈತ ಸಂಘದವರು ಸೇರಿ ಚಕ್ರವ್ಯೂಹ ರಚಿಸಿ ನನ್ನನ್ನು ಸೋಲಿಸಿದ್ದರು. ಆದರೆ 5 ಲಕ್ಷಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದೆ. ಅಭ್ಯರ್ಥಿಗಳನ್ನು ಹಾಕುವುದು ಆಯಾ ಪಕ್ಷಕ್ಕೆ ಬಿಟ್ಟ ವಿಚಾರ. ಅದನ್ನು ಅವರ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಪ್ರಜಾಪ್ರಭುತ್ವದಲ್ಲಿ ಯಾರು ಎಲ್ಲಿ ಬೇಕಾದರೂ ನಿಲ್ಲಬಹುದು ಎಂದರು

ಆದಿಶಕ್ತಿ ಗೃಹ ನಿರ್ಮಾಣ ಸಹಕಾರ ಸಂಘದ ನೋಂದಣಿ ರದ್ಧತಿಯ ಆಕ್ಷೇಪಣೆಗೆ ಆಹ್ವಾನ

ಮೈಸೂರು, ಮಾ.14– ಆದಿಶಕ್ತಿ ಗೃಹ ನಿರ್ಮಾಣ ಸಹಕಾರ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸಲಾಗಿದ್ದು, ಸಂಘವನ್ನು ಪುನಶ್ಚೇತನಗೊಳಿಸಿಕೊಂಡು ಹೋಗುವ ಉದ್ದೇಶವಿದ್ದಲ್ಲಿ ಅಂತಹ ಸಂಘದ ಸದಸ್ಯರು ಅಥವಾ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಘದ ಸದಸ್ಯರು ಅಥವಾ ಸಾರ್ವಜನಿಕರು ತಮ್ಮ ಆಕ್ಷೇಪಣೆಗಳನ್ನು ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಬಹುದು. ಒಂದು ವೇಳೆ 15 ದಿವಸದೊಳಗೆ ಸಮಾಪನಾಧಿಕಾರಿಗಳನ್ನು ಸಂಪರ್ಕಿಸದಿದ್ದಲ್ಲಿ, ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಸಂಘದ ನೋಂದಣಿ ರದ್ದತಿಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಆದಿಶಕ್ತಿ ಗೃಹ ನಿರ್ಮಾಣ ಸಹಕಾರ ಸಂಘದ ಸಮಾಪನಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಯ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ನಾಪತ್ತೆ

ಮೈಸೂರು, ಮಾ.14– ಬೀರಿಹುಂಡಿಯ ಬೀರಪ್ಪ ಬಿನ್ ಲೇಟ್ ಯಳಯಪ್ಪ ಎಂಬ 46 ವರ್ಷದ ವ್ಯಕ್ತಿ ಮಾ.5 ರಂದು ಕಾಣೆಯಾಗಿದ್ದಾರೆ.

ಕಾಣೆಯಾಗಿರುವ ವ್ಯಕ್ತಿಯು 6 ಅಡಿ ಎತ್ತರವಿದ್ದು ದೃಢಕಾಯ ಶರೀರ, ಎಣ್ಣೆಗೆಂಪು ಬಣ್ಣ, ಕಪ್ಪು ಕೂದಲು ಹಾಗೂ ಎಡಗೈ ಡೊಂಕು ಆಗಿರುತ್ತದೆ. ವ್ಯಕ್ತಿಯು ಕಾಣೆಯಾದಾಗ ತುಂಬುತೋಳಿನ ಕಾಫಿ ಕಲರ್ ಶರ್ಟ್, ನೀಲಿ ಹಳದಿ ಮಿಶ್ರಿತ ಕಲರಿನ ಲುಂಗಿ ತೊಟ್ಟಿರುತ್ತಾರೆ.

ಮತ್ತೊಬ್ಬ ಕಡಕೊಳ ಗ್ರಾಮದ ಮಂಜುನಾಥ ಬಂಡಿ ಬಿನ್ ಬಸವರಾಜು ಎಂಬ 29 ವರ್ಷದ ವ್ಯಕ್ತಿ ಮಾ.6 ರಂದು ಕಾಣೆಯಾಗಿದ್ದಾರೆ. ಕಾಣೆಯಾಗಿರುವ ವ್ಯಕ್ತಿಯು ಸಾಧಾರಣ ಮೈ ಕಟ್ಟು ಗೋಧಿ ಮೈ ಬಣ್ಣವನ್ನು ಹೊಂದಿದ್ದು, ಬಲ ಕೈ ಮೇಲೆ O-ONE ಟ್ಯಾಟೂ ಮತ್ತು ಎಡ ಎದೆಯ ಮೇಲೆ ಶಿವಾನಿ ಎಂಬ ಹೆಸರಿನ ಟ್ಯಾಟೂಗಳು ಇರುತ್ತವೆ. ಕಾಣೆಯಾದವರು ಜೀನ್ಸ್ ಪ್ಯಾಂಟ್ ಹಾಗೂ ಟಿ–ಶರ್ಟ್ ಧರಿಸಿದ್ದು, ಕನ್ನಡ, ತೆಲುಗು, ಹಿಂದಿ ಮತ್ತು ತಮಿಳು ಭಾಷೆಯನ್ನು ಮಾತನಾಡುತ್ತಾರೆ.

ಮೇಲೆ ತಿಳಿಸಿದ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಜಿಲ್ಲೆಯ ಎಸ್.ಪಿ ಕಛೇರಿ ದೂ.ಸಂ:0821–2520040, ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ:0821–2444800 ಅಥವಾ ಸೌತ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರ ಕಚೇರಿ ದೂ.ಸಂ:0821 2444955 ಸಂಪರ್ಕಿಸಬಹುದು ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು, ಮಾ.14(ಎಸ್‌ಬಿಡಿ)– ಮೈಸೂರು ಭಾಗದಲ್ಲಿ ಐದು ದಿನ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ನಾಳೆ(ಮಾ.15)ಯಿಂದ ಮಾ.19ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗಲಿದೆ. ಈ ವೇಳೆ ಗುಡುಗು–ಮಿಂಚು ಸಾಧ್ಯತೆಯೂ ಇದೆ. ಕೊಡಗಿನ ಹಲವೆಡೆ ಮಂಗಳವಾರ ಮಳೆಯಾಗಿರುವುದು ವರದಿಯಾಗಿದೆ.

ತಾರಕಕ್ಕೆ ತಾಪಮಾನ: ಮೈಸೂರು ಹಾಗೂ ಕೊಡಗು ಜಿಲ್ಲೆಯ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ಗಡಿ ತಲುಪುವ ಸಾಧ್ಯತೆ ಇದೆ. ಹವಾಮಾನ ಇಲಾಖೆ ಮಾಹಿತಿಯನ್ವಯ ಮೈಸೂರು ಜಿಲ್ಲೆಯಲ್ಲಿ ನಾಳೆ (ಮಾ.15) 37, ಮಾ.16ರಂದು 39, ಮಾ. 17ರಂದು 37, ಮಾ.18ರಂದು 33, ಮಾ.19 ರಂದು 32 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ವಿರಲಿದೆ. ಕೊಡಗು ಜಿಲ್ಲೆಯಲ್ಲಿ ಈ ಐದು ದಿನಗಳಲ್ಲಿ ಕ್ರಮವಾಗಿ 38, 39, 37, 34, 34 ಡಿಗ್ರಿ ಸೆಲ್ಸಿಯಸ್, ಮಂಡ್ಯದಲ್ಲಿ 31ರಿಂದ 33 ಡಿಗ್ರಿ ಸೆಲ್ಸಿಯಸ್ ಹಾಗೂ ಚಾಮರಾಜನಗರದಲ್ಲಿ 34ರಿಂದ 36 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದ ಮುನ್ಸೂಚನೆ ಇದ್ದು, ತಾಪಮಾನ ತಾರಕ್ಕೇರುವ ಸಾಧ್ಯತೆ ದಟ್ಟವಾಗಿದೆ.

ರಸ್ತೆ ಬಣ ಬಣ: ಮೈಸೂರಿನಲ್ಲಿಂದು 33 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು. ಬೇಸಿಗೆ ಬಿಸಿಲಿನ ತಾಪ ತಾಳಲಾಗದೆ ಜನ ಮಧ್ಯಾಹ್ನದ ವೇಳೆ ಓಡಾಟಕ್ಕೆ ಬ್ರೇಕ್ ಹಾಕಿದ್ದಾರೆ. ಪ್ರೇಕ್ಷಣೀಯ ಸ್ಥಳಗಳಲ್ಲೂ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆ. ಪರಿಣಾಮ ರಸ್ತೆಗಳಲ್ಲಿ ವಾಹನ ಸಂಚಾರವೂ ಕಡಿಮೆಯಾಗಿದೆ ಮೃಗಾಲಯದ ಬಳಿ ರಸ್ತೆ ಬಣಗುಡುತ್ತಿತ್ತು ಮೃಗಾಲಯಕ್ಕೆ ರಜೆ ಇರುವುದರಿಂದ ಮಂಗಳವಾರ ಈ ಭಾಗದಲ್ಲಿ ವಾಹನ ದಟ್ಟಣೆ ಇರುವುದಿಲ್ಲ. ಆದರೆ ಇಂದು ಪ್ರತಿ ಮಂಗಳವಾರಕ್ಕಿಂತ ಭಿನ್ನವಾಗಿತ್ತು ಅಲ್ಲೊಂದು ಇಲ್ಲೊಂದು ವಾಹನ ಓಡಾಡುತ್ತಿದ್ದವು. ಜನರೂ ರಸ್ತೆಯಲ್ಲಿ ಓಡಾಡುತ್ತಿರಲಿಲ್ಲ ಬಹುತೇಕ ಎಲ್ಲಾ ರಸ್ತೆಗಳ ಸ್ಥಿತಿಯೂ ಇದೇ ರೀತಿ ಇತ್ತು.

ಫ್ಯಾನ್–ಕೂಲರ್ ಮೊರೆ: ಬಿಸಿಲ ಬೇಗೆಯಿಂದ ಬಚಾವಾಗಲು ಸಾರ್ವಜನಿಕರು ಫ್ಯಾನ್ ಮೊರೆ ಹೋಗಿದ್ದಾರೆ. ಅನುಕೂಲಸ್ಥರು ಏರ್‌ಕೂಲರ್, ಎಸಿ ಬಳಸುತ್ತಿದ್ದಾರೆ. ಬೀದಿ ಬದಿ ವ್ಯಾಪಾರಿಗಳು ದೊಡ್ಡ ಛತ್ರಿಗಳ ಆಶ್ರಯ ಪಡೆದಿದ್ದಾರೆ. ಅನಿವಾರ್ಯವಾಗಿ ಬಿಸಿಲಲ್ಲೇ ಓಡಾಡಬೇಕಾದವರು ಛತ್ರಿ, ಕ್ಯಾಪ್ ಧರಿಸಲು ಶುರು ಮಾಡಿದ್ದಾರೆ. ಎಳನೀರು ಇನ್ನಿತರ ತಂಪು ಪಾನೀಯಗಳ ಮೊರೆ ಹೋಗಿದ್ದಾರೆ.

ಆರೋಗ್ಯ ಕಾಳಜಿ ಅಗತ್ಯ

ಬಿಸಿಲ ಝಳಕ್ಕೆ ದೇಹದಲ್ಲಿ ತೇವಾಂಶ ಕಡಿಮೆಯಾಗುವುದರಿಂದ ದ್ರವಾಹಾರ ಹೆಚ್ಚು ಸೇವಿಸುವುದು ಒಳ್ಳೆಯದು. ಬರೀ ನೀರು ಕುಡಿಯದೆ ನೀರಿನ ಅಂಶವಿರುವ ಹಣ್ಣುಗಳನ್ನು ಸೇವಿಸಬೇಕು. ಮಧುಮೇಹಿಗಳು ಮಜ್ಜಿಗೆ, ಗಂಜಿಯಂತಹ ದ್ರವಾಹಾರ ಸೇವಿಸುವುದು ಉತ್ತಮ. ಧೂಳಿನಿಂದ ಕಾಯಿಲೆ ಉಂಟಾಗುವುದರಿಂದ ಈ ಬಗ್ಗೆ ಎಚ್ಚರ ವಹಿಸಬೇಕು. ಹೊರ ಹೋಗುವಾಗ ಸನ್‌ಸ್ಕ್ರೀನ್ ಲೋಷನ್ ಹಚ್ಚಿಕೊಳ್ಳಬೇಕು. ಮನೆಯಲ್ಲಿ ತಯಾರಿಸಿದ ಆಹಾರ ಸೇವನೆ ಮಾಡುವುದು ಒಳ್ಳೆಯದು. ಬೇಸಿಗೆಯಲ್ಲಿ ಅನಿರೀಕ್ಷಿತ ಮಳೆ ಬಂದು ನಿಂತರೆ ಡೆಂಗಿ ಮತ್ತು ಮಲೇರಿಯಾ ಹರಡುವ ಸಾಧ್ಯತೆ ಹೆಚ್ಚಿರುತ್ತದೆ. ಇದರಿಂದ ಇನ್‌ಫ್ಲೂಯೆನ್ಸ್‌ಜಾ ನಿಮೋನಿಯಾ ಕೂಡ ಬಾಧಿಸಬಹುದು. ಹಾಗಾಗಿ ಬೇಸಿಗೆಯಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

'ಜಾಗತಿಕ ಯುವ ನಾಯಕ' ಪಟ್ಟಿ: ಆದಿತ್ಯ ಠಾಕ್ರೆ ಸೇರಿ 6 ಮಂದಿಗೆ ಸ್ಥಾನ

ನವದೆಹಲಿ: ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ನಾಯಕ ಆದಿತ್ಯ ಠಾಕ್ರೆ ಹಾಗೂ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಮಧುಕೇಶ್ವರ್ ದೇಸಾಯಿ ಸೇರಿದಂತೆ ಭಾರತದ ಒಟ್ಟು ಆರು ಮಂದಿ 2023ನೇ ಸಾಲಿನ 'ಭರವಸೆಯ ಜಾಗತಿಕ ಯುವ ನಾಯಕರು' ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ.

ವಿಶ್ವ ಆರ್ಥಿಕ ವೇದಿಕೆ (ಡಬ್ಲ್ಯುಇಎಫ್) ಮಂಗಳವಾರ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಟಿವಿಎಸ್ ಮೋಟರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ವೇಣು, ಜಿಯೊ ಹ್ಯಾಪ್ಟಿಕ್ ಟೆಕ್ನಾಲಜೀಸ್ ಸಿಇಒ ಆಕ್ರಿತ್ ವೈಶ್, ಬಿಯೊಜೀನ್ ಸಿಇಒ ವಿಬಿನ್ ಬಿ.ಜೋಸೆಫ್ ಮತ್ತು ಪಾಲಿಸಿ 4.0 ರಿಸರ್ಚ್ ಫೌಂಡೇಷನ್ ಸಿಇಒ ತನ್ವಿ ರತ್ನ ಅವರೂ ಸ್ಥಾನ ಪಡೆದಿದ್ದಾರೆ.

'ಭರವಸೆಯ ರಾಜಕೀಯ ನಾಯಕರು, ನವೋದ್ಯಮಿಗಳು, ಸಂಶೋಧಕರು, ಸಮುದಾಯ, ದೇಶ ಹಾಗೂ ಜಗತ್ತಿನಲ್ಲಿ ಮಹತ್ತರ ಬದಲಾವಣೆಯನ್ನು ತರಲು ಮುಂದಾಗಿರುವ, ದೂರದೃಷ್ಟಿಯುಳ್ಳ ಸಾಮಾಜಿಕ ಹೋರಾಟಗಾರರು ಸೇರಿದಂತೆ ಒಟ್ಟು 100 ಮಂದಿ ಈ ಬಾರಿಯ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಇವರೆಲ್ಲರೂ 40 ವರ್ಷದೊಳಗಿನವರು' ಎಂದು ಸ್ವಿಟ್ಜರ್ಲೆಂಡ್‌ನ ಜಿನಿವಾ ಮೂಲದ ಡಬ್ಲ್ಯುಇಎಫ್ ತಿಳಿಸಿದೆ.

ಯಂಗ್ ಗ್ಲೋಬಲ್ ಲೀಡರ್ಸ್ (ವೈಜಿಎಲ್) ವೇದಿಕೆಯು 2004ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸದ್ಯ ಈ ವೇದಿಕೆಯು 120ಕ್ಕೂ ಅಧಿಕ ದೇಶಗಳ 1,400ಕ್ಕೂ ಹೆಚ್ಚು ಸದಸ್ಯರನ್ನು ಒಳಗೊಂಡಿದೆ.

ಮೈಸೂರು ಮಿತ್ರ ಬುಧವಾರ 15 ಮಾರ್ಚ್ 2023



ಕೆ.ಆರ್.ಪೇಟೆಯಲ್ಲಿ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡಿಗರು ಎಲ್ಲಿದ್ದರೂ ಕನ್ನಡ ಪ್ರೇಮ ಮರೆಯಬಾರದು

ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ

ಕೆ.ಆರ್.ಪೇಟೆ, ಮಾ.14– ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಎಲ್ಲಾದರೂ ಇರು ಎಂಥಾದರು ಇರು ಎಂದೆಂದಿಗೂ ನೀ ಕನ್ನಡಿಗನಾಗಿರು ಎನ್ನುವಂತೆ ಕನ್ನಡಿಗರು ಎಲ್ಲಿದ್ದರೂ ಕನ್ನಡ ಪ್ರೇಮ ಮರೆಯಬಾರದು. ಮಾತೆ, ಮಾತೃ, ಮಾತೃತ್ವವನ್ನು ಪೂಜಿಸುವ ಗುಣಗಳನ್ನು ಹೊಂದಿ ಕನ್ನಡ, ಕನ್ನಡಿಗ, ಕನ್ನಡ ನಾಡಿನ ಉಳಿವಿಗೆ ಕೈ ಜೋಡಿಸೋಣ ಎಂದು ಪ್ರೊ.ಕೆ.ಚಿದಾನಂದಗೌಡ ತಿಳಿಸಿದರು.

ಪಟ್ಟಣದ ಹೊರವಲಯದ ಅಗ್ರಹಾರ ಬಾಚಹಳ್ಳಿ ಗೇಟ್ ಬಳಿಯ ಜಯಮ್ಮ ರಾಮಸ್ವಾಮಿ ಸಮುದಾಯ ಭವನದಲ್ಲಿ ನಡೆದ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆಗೆ ತನ್ನದೇ ಆದ ಗೌರವವಿದ್ದು, ಸಂಸ್ಕೃತ ಮತ್ತು ಹಳೆಗನ್ನಡದ ಸಂಗಮವಾಗಿ ಬೆಳೆದು ಬಂದಿದೆ ಎಂದರು.

ಪಂಪ ಕವಿ ಕನ್ನಡ ಸಾಹಿತ್ಯದಲ್ಲಿ 2 ಗ್ರಂಥ ಬರೆದಿದ್ದಾರೆ ಎಂದ ಅವರು, ಕನ್ನಡದ ಪ್ರಥಮ ರಾಷ್ಟ್ರಕವಿ ಗೋವಿಂದ ಪೈ ಕನ್ನಡದ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡಿದ್ದಾರೆ ಎಂದರು. ಮಂಡ್ಯ ಜಿಲ್ಲಾ ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಮಾತನಾಡಿ, ಸ್ಥಳೀಯ ಸಾಹಿತ್ಯಾಭಿಮಾನಿಗಳನ್ನು ಗುರ್ತಿಸಿ ಅವರ ಪ್ರತಿಭೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲಾಗುತ್ತಿದೆ. ಕಲೆ, ಸಾಹಿತ್ಯ, ಕ್ರೀಡೆ ಇತರ ಕ್ಷೇತ್ರಗಳ ಸಾಧಕರನ್ನು, ಕವಿತೆ, ಕವನ ಬರೆಯುವ ಯುವ ಪ್ರತಿಭೆಗಳನ್ನು ಸಮ್ಮೇಳನದ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಶ್ರೀಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಮಾತನಾಡಿ, ಕನ್ನಡ ನಾಡಿನಲ್ಲಿ ಕನ್ನಡ ಬೆಳೆಸುವ, ಪೋಷಿಸುವ, ಸಂಪನ್ನಗೊಳಿಸುವ ಕೆಲಸವನ್ನು ಕನ್ನಡಿಗರು ಮಾಡಬೇಕು ಎಂದರು.

6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನಿವೃತ್ತ ಪ್ರಾಂಶುಪಾಲ ಹಾಗೂ ಸಾಹಿತಿ ಕುಮಾರಸ್ವಾಮಿ ಮಾತನಾಡಿ, ಎಲ್ಲಾದರೂ ಇರು ಎಂಥಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು. ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬ ಕುವೆಂಪು ಆಶಯದಂತೆ ನಾನು ಸಾಹಿತಿಯಲ್ಲ ಸಾಹಿತ್ಯದ ಓದುಗ. ನನ್ನ ಬಾಲ್ಯ ಜೀವನದ ಅನುಭವಗಳೇ ನನ್ನನ್ನು ಸಾಹಿತ್ಯದ ಕಡೆ ವಾಲುವಂತೆ ಮಾಡಿತು. ಇದುವರೆಗೂ 12 ಕೃತಿಗಳನ್ನು ರಚಿಸಿದ್ದೇನೆ ಎಂದರು.

ಇಂದು ನಮ್ಮ ನಾಡು ನುಡಿಗೆ ಆತಂಕ ಎದುರಾಗುತ್ತಿದೆ. ಇದಕ್ಕೆ ಕಾರಣ ಪರಭಾಷೆಗಳಲ್ಲ. ಬದಲಾಗಿ ನಮ್ಮವರು ನಮ್ಮ ಭಾಷೆ ಬಳಸದಿರುವುದೇ ಆಗಿದೆ. ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಅಪಾಯ ಗ್ಯಾರಂಟಿ. ಮಂಡ್ಯ ಜಿಲ್ಲೆ ಸಾಹಿತ್ಯ ಕೃಷಿಗೆ ಉತ್ತಮ ಅವಕಾಶಗಳಿವೆ. ನಮ್ಮ ತಾಲೂಕು ಅನೇಕ ಸಾಹಿತ್ಯದ ನಿರ್ಮಾತೃಗಳನ್ನು ಕೊಡುಗೆ ನೀಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ನಮ್ಮ ತಾಲೂಕಿನ ಜನತೆ ಅಭಿವೃದ್ಧಿ, ಸಾಹಿತ್ಯ, ಪರಂಪರೆಗೆ ಅಡಿಪಾಯ ಹಾಕಿಕೊಟ್ಟರು ಎಂದ ಅವರು, 1975 ರಿಂದ ತಾಲೂಕು ಕಸಾಪ ಯಶಸ್ವಿಯಾಗಿ ರಚನಾತ್ಮಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ ನಾವು ನೀವೆಲ್ಲರೂ ಕನ್ನಡ ಭಾಷೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳೋಣ. ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಬೆಳಗ್ಗೆ 8 ಗಂಟೆಗೆ ರಾಷ್ಟ್ರ ಧ್ವಜಾರೋಹಣವನ್ನು ತಹಸೀಲ್ದಾರ್ ನಿಸರ್ಗಪ್ರಿಯ, ನಾಡಧ್ವಜವನ್ನು ಪುರಸಭಾಧ್ಯಕ್ಷೆ ಮಹಾದೇವಿ ನಂಜುಂಡ, ಕಸಾಪ ಧ್ವಜವನ್ನು ಮಂಡ್ಯ ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ್ ನೆರವೇರಿಸಿದರು.

ತಡವಾಗಿ ಮೆರವಣಿಗೆ, ಸಮ್ಮೇಳನ ಪ್ರಾರಂಭ


ಬೆಳಗ್ಗೆ 9.30ಕ್ಕೆ ಆರಂಭವಾಗಬೇಕಿದ್ದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಸಚಿವ ನಾರಾಯಣಗೌಡರ ಆಗಮನಕ್ಕಾಗಿ ಕಾದು 11 ಗಂಟೆಗೆ ಆರಂಭವಾಯಿತು. ಮೆರವಣಿಗೆಗೆ ಸಚಿವರ ಬದಲು ಮೂಡಾ ಅಧ್ಯಕ್ಷ ಶ್ರೀನಿವಾಸ್ ಚಾಲನೆ ನೀಡಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾ ತಂಡಗಳೊಂದಿಗೆ ಮಿನಿ ವಿಧಾನ ಸೌಧದವರೆಗೆ ಸಾಗಿತು. ನಂತರ ಸಮ್ಮೇಳನದ ಸ್ಥಳಕ್ಕೆ ಖಾಸಗಿ ಶಾಲಾ ಬಸ್‌ಗಳಲ್ಲಿ ತೆರಳಲಾಯಿತು. ಬೆಳಗ್ಗೆ 10 ಗಂಟೆಗೆ ಆರಂಭವಾಗಬೇಕಿದ್ದ ಸಮ್ಮೇಳನ ಉದ್ಘಾಟನೆ ಮಧ್ಯಾಹ್ನ 1.15ಕ್ಕೆ ಆರಂಭವಾಯಿತು.

ಸಮ್ಮೇಳನದಲ್ಲಿ ಸಚಿವ ನಾರಾಯಣಗೌಡ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ್, ತಾಲೂಕು ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಉಪಾಧ್ಯಕ್ಷ ಆರ್.ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ, ಸಮಾಜ ಸೇವಕ ಹಾಗೂ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್, ಸಾಹಿತಿ ಸತ್ಯನಾರಾಯಣಗೌಡ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಎಲ್.ಎಸ್.ಧರ್ಮಪ್ಪ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಎಂ.ಬಸವರಾಜು, ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಪ್ರಧಾನ ಕಾರ್ಯದರ್ಶಿ ರಾಜೇಗೌಡ, ಕಸಾಪ ಮಾಜಿ ಅಧ್ಯಕ್ಷರಾದ ಡಾ.ಶ್ರೀನಿವಾಸ ಶೆಟ್ಟಿ, ಎಂ.ಕೆ.ಹರಿಚರಣ ತಿಲಕ್, ಕೆ.ಆರ್. ನೀಲಕಂಠ, ಕಾಮಿಡಿ ಕಿಲಾಡಿ ಖ್ಯಾತಿ ಕಲಾವಿದ ಮನೋಹರ್‌ಗೌಡ, ತಾಲೂಕು ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ, ಸಾಹಿತಿ ಮಂಜುನಾಥ್, ತಾಲೂಕು ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಹೆಚ್.ಕೆ.ಮಂಜುನಾಥ್, ಮಹೇಶ್, ಕರವೇ ಅಧ್ಯಕ್ಷ ವೇಣು, ಜಯಕರ್ನಾಟಕ ಸಂಘಟನೆ ಅಧ್ಯಕ್ಷ ಸೋಮಶೇಖರ್ ಸೇರಿದಂತೆ ಸಾವಿರಾರು ಕನ್ನಡಾಭಿಮಾನಿಗಳು ಹಾಜರಿದ್ದರು.





ಪಾಂಡವಪುರದಲ್ಲಿ ವಿಜಯಾಮೃತ ಗ್ರಂಥ ಲೋಕಾರ್ಪಣೆ



ಪಾಂಡವಪುರ, ಮಾ.14– ಪಟ್ಟಣದ ವಿಜಯ ವಿದ್ಯಾಸಂಸ್ಥೆ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ್ದು, ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಇದಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಇ.ಎಸ್.ಇಂದಿರೇಶ್ ಪ್ರತ್ಯಕ್ಷ ಸಾಕ್ಷಿ ಎಂದು ಶ್ರೀಶಿವರಾತ್ರಿ ದೇಶಿಕೇಂದ್ರ ಶಿವಯೋಗಿಸ್ವಾಮೀಜಿ ತಿಳಿಸಿದರು.

ಪಟ್ಟಣದಲ್ಲಿ ವಿಜಯ ವಿದ್ಯಾ ಪ್ರಚಾರ ಸಂಘದ ಕಾರ್ಯದರ್ಶಿ ಕೆ.ವಿ.ಬಸವರಾಜ್ ಅವರ 75ನೇ ವರ್ಷದ ಅಂಗವಾಗಿ ನಡೆದ ವಿಜಯಾಮೃತ ಗ್ರಂಥ ಲೋಕಾರ್ಪಣೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, 1946 ಆರಂಭವಾದ ಸಂಸ್ಥೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಲು ನೆರವಾಗಿದೆ. ಈ ಹಿನ್ನೆಲೆ ಸಂಸ್ಥೆ ಬೆಟ್ಟದಷ್ಟು ಹೆಸರುವಾಸಿಯಾಗಿದ್ದು, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಂಡಿದೆ ಎಂದರು.

ವಿಜಯಾಮೃತ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಎಚ್.ಎಸ್.ಇಂದಿರೇಶ್, ಪ್ರಪಂಚದಲ್ಲೇ ಮೈಸೂರು ವಿವಿ ಹೆಸರು ವಾಸಿಯಾಗಿದೆ. ವಿದ್ಯಾರ್ಥಿಗಳ ಜೀವನ ರೂಪಿಸಲು ವಿದ್ಯಾಸಂಸ್ಥೆ ಪಾತ್ರ ಬಹುಮುಖ್ಯ ವಿದ್ಯಾರ್ಥಿಗಳಿಗೆ ವಿದ್ಯೆ ಜೊತೆಗೆ ಸಮಾನತೆ, ಸಹಾನುಭೂತಿ, ಪ್ರಾಮಾಣಿಕತೆ, ಸಭ್ಯತೆ, ಸ್ವಯಂ ನಿಯಂತ್ರಣ, ಸಹಬಾಳ್ವೆ, ಸಮಗ್ರತೆ, ಪರಿಶ್ರಮದಂತಹ ನೈತಿಕ ಮೌಲ್ಯಗಳು ಸಿಗುವಂತಹ ವಿದ್ಯಾ ಸಂಸ್ಥೆಗಳು ಬೇಕು. ನನಗೆ ಇದೆಲ್ಲ ವಿಜಯ ಸಂಸ್ಥೆಯಿಂದ ಲಭ್ಯವಾಯಿತು. ಇದೆಲ್ಲ ಅರಿತವರಿಗೆ ನೋಬಲ್ ಪ್ರಶಸ್ತಿ ಲಭ್ಯವಾಗಲಿದೆ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಸ್ವತಂತ್ರ ಪೂರ್ವದಲ್ಲಿ ಆರಂಭವಾದ ಈ ಸಂಸ್ಥೆ ಗ್ರಾಮೀಣ ಭಾಗದ ಲಕ್ಷಾಂತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಿದೆ. ಇಲ್ಲಿ ವಿದ್ಯಾಭ್ಯಾಸ ಮಾಡಿದ ಸಾವಿರಾರು ವಿದ್ಯಾರ್ಥಿಗಳು, ನ್ಯಾಯಾಧೀಶರಾಗಿ, ವಕೀಲರಾಗಿ, ವೈದ್ಯರಾಗಿ, ದೇಶದ ಉನ್ನತ ಹುದ್ದೆಯಲ್ಲಿ ದ್ದಾರೆ. ನನಗೆ ಈ ಸಂಸ್ಥೆಯಲ್ಲಿ ವಿದ್ಯಾ ಭ್ಯಾಸ ಮಾಡಲು ಅವಕಾಶ ಸಿಗಲಿಲ್ಲ ವೆಂದು ಬೇಸರವಿದೆ. ಆದರೆ ಈ ಸಂಸ್ಥೆ ಯಲ್ಲಿ ನಾನು ಮತ್ತೆ ಕೆ.ಎಸ್.ಪುಟ್ಟಣ್ಣಯ್ಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೇವೆ. ಆದರೆ ಹೆಚ್ಚಿನ ಜವಾಬ್ದಾರಿ ಸಂಸ್ಥೆ ಆಡಳಿತ ಮಂಡಳಿಯದ್ದೇ. ನಾವು ಹೆಸರಿಗೆ ಮಾತ್ರ ಅಧ್ಯಕ್ಷರಾಗಿ ಸೇವೆ ಮಾಡುತ್ತಿದ್ದೇವೆ. ಕಾರ್ಯದರ್ಶಿಗಳ ಪರಿಶ್ರಮದಿಂದ ಸಂಸ್ಥೆ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಬೆಳೆದು ಲಕ್ಷಾಂತರ ವಿದ್ಯಾರ್ಥಿಗಳ ಜೀವನ ರೂಪಿಸಿದೆ ಎಂದರು.

ಇದೇ ವೇಳೆ ವಿಜಯ ವಿದ್ಯಾ ಪ್ರಚಾರ ಸಂಘದ ಕಾರ್ಯದರ್ಶಿ ಕೆ.ವಿ.ಬಸವರಾಜ್ ಹಾಗೂ ವರಲಕ್ಷ್ಮಿ ಬಸವರಾಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕೊಮ್ಮೇರಹಳ್ಳಿ ಮಠದ ಪೀಠಾಧ್ಯಕ್ಷ ಪುರುಷೋತ್ತಮನಾಥ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಹೆಚ್.ಎಲ್ ನಾಗರಾಜು, ಪ್ರೊ.ಎಂ.ಕೃಷ್ಣೇಗೌಡ, ಜಿ.ಪಿ.ಶಿವರಾಜು, ಡಾ.ಪಿ.ಬೆಟ್ಟೇಗೌಡ, ಕೆ.ಸೋಮೇಗೌಡ, ಡಾ.ಎಂ.ಮಾಯೀಗೌಡ, ಎಲ್.ಡಿ ರವಿ, ಡಾ.ಹೆಚ್.ಬಿ.ಕುಮಾರಸ್ವಾಮಿ, ಸುನೀತಾ ಪುಟ್ಟಣ್ಣಯ್ಯ, ಮರಿಸ್ವಾಮಿಗೌಡ, ಸಿ.ಬಿ.ಚಂದ್ರಶೇಖರ್, ಎಲ್.ಸಿ.ಮಂಜುನಾಥ್, ಡಾ.ಹೆಚ್.ಪಿ.ಗೀತಾ, ಎಂ.ರಮೇಶ್, ಸ್ವಾಮಿಗೌಡ, ಎಲ್.ಸಿ.ಪುರುಷೋತ್ತಮ, ವೆಂಕರಾಜು, ಡಾ.ವೆಂಕಟಪ್ಪ, ಧನ್ಯಕುಮಾರ್, ವರಲಕ್ಷ್ಮೀ ಬಸವರಾಜ್ ಸೇರಿದಂತೆ ಅನೇಕರಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಕಿರಂಗೂರು ಗ್ರಾಮದಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ 60 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಗ್ರಾಮದ ಮುಖಂಡರು, ಜೆಡಿಎಸ್ ಕಾರ್ಯಕರ್ತರು ಇದ್ದರು.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಯುವಕ ಸಾವು

ಮದ್ದೂರು, ಮಾ.14– ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಹೊರವಲಯದ ಬಾಲಾಜಿ ಕಲ್ಯಾಣ ಮಂಟಪದ ಬಳಿ ಮಂಗಳವಾರ ಬೆಳಗ್ಗೆ ನಡೆದಿದೆ. ಮಂಡ್ಯದ ಆಲಹಳ್ಳಿ ಗ್ರಾಮದ ನಿವಾಸಿ ಕೃಷ್ಣಮೂರ್ತಿ ಅವರ ಪುತ್ರ ಸುಹಾಸ್(27) ಮೃತಪಟ್ಟವರು. ಈತ ಇಂದು ಬೆಳಗ್ಗೆ ಮಂಡ್ಯದಿಂದ ಬೆಂಗಳೂರಿಗೆ ತೆರಳುತ್ತಿದ್ದ ವೇಳೆ ಟಿಪ್ಪರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸುಹಾಸ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಮದ್ದೂರು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಪೌರಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚೆ

ಮಾ.21ರಂದು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ನಾನಿಂದು ಇಲ್ಲಿಗೆ ಬಂದಿದ್ದು ಅನುಕೂಲವಾಯಿತು. ಪೌರಕಾರ್ಮಿಕ ಸಮುದಾಯದ ಸಮಸ್ಯೆಗಳ ಬಗ್ಗೆ ನನಗೆ ಅರಿವಿದೆ. ನಾನು ಪುರಸಭಾ ಸದಸ್ಯನಾಗಿ ಕೆಲಸ ಮಾಡುವಾಗ

ಪೌರಕಾರ್ಮಿಕರನ್ನು ಹತ್ತಿರದಿಂದ ಕಂಡಿದ್ದೇನೆ. ಮೊದಲು ಪುರಸಭಾ ಸದಸ್ಯನಾಗಿ ನಂತರ ಶಾಸಕನಾದೆ. ಬಳಿಕ ಮಂತ್ರಿ, ಸಂಸದನಾಗಿ ಇದೀಗ ಮಂತ್ರಿ ಆಗಿದ್ದೇನೆ. ರಾಜ್ಯ ಮತ್ತು ಕೇಂದ್ರದ ಮಟ್ಟದಲ್ಲಿ ಪೌರಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪೌರಕಾರ್ಮಿಕರಿಗೆ ಸಂಬಂಧಿಸಿದ ಸಮಿತಿಗೆ ಜಿಲ್ಲಾ ನ್ಯಾಯಾಧೀಶರು ಅಧ್ಯಕ್ಷರಾಗಿರಬೇಕು. ಜಿಲ್ಲಾ ದಂಡಾಧಿಕಾರಿಗಳು ಕಾರ್ಯದರ್ಶಿಯಾಗಿರಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ಪಷ್ಟ ನಿರ್ದೇಶನವಿದೆ. ಆದರೆ ಪೌರಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಎಲ್ಲಾ ಇಲಾಖೆಗಳು ನಿರ್ಲಕ್ಷ್ಯ ವಹಿಸಿವೆ. ಮ್ಯಾನ್‌ವೋಲ್‌ನಲ್ಲಿ ಬಿದ್ದು ಸತ್ತಂತಹ ಘಟನೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಳ್ಳಬೇಕೆಂದು ಯಾವ ನ್ಯಾಯಾಧೀಶರು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಿದ ನಿದರ್ಶನ ದೇಶದ ಇತಿಹಾಸದಲ್ಲೇ ಇಲ್ಲ. ಯಾವುದೇ ಜಿಲ್ಲಾ ನ್ಯಾಯಾಧೀಶರು ತನಿಖೆ ಮಾಡಿ, ವರದಿ ಪಡೆದಿಲ್ಲ ಎಂದು ದೂರಿದರು.

ಮಾನವೀಯತೆ ಇದ್ದರೆ ಮಾತ್ರ ಸಮಾಜ ಸಮೃದ್ಧವಾಗಿ ಬೆಳೆಯಲು ಸಾಧ್ಯ. ಪೌರಕಾರ್ಮಿಕರು, ಶೋಷಿತರ ವಿಚಾರಗಳನ್ನು ಮಾನವೀಯತೆಯಿಂದ ನೋಡಿ ಸಂಬಂಧಪಟ್ಟ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಇತ್ತೀಚೆಗೆ ಗ್ರಾಪಂಗಳಲ್ಲಿ ಗುತ್ತಿಗೆಯಡಿ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅವರಿಗೆ ಖಾಯಂ ಉದ್ಯೋಗ ನೀಡಬೇಕೆಂದು ಯಾವ ಶಾಸಕರು, ಸಂಸದರು ಸದನದಲ್ಲಿ ಮಾತನಾಡುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯಾರೋ ನಾಲ್ಕು ಜನರು ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ಮಾಡಿದರೆ, ಅದು ಸದನದಲ್ಲಿ ಚರ್ಚೆ ಆಗುತ್ತದೆ. ದಿನವೆಲ್ಲಾ ಮಾಧ್ಯಮದಲ್ಲಿಯೂ ಚರ್ಚೆ ಆಗುತ್ತದೆ. ಆದರೆ ಮ್ಯಾನ್‌ವೋಲ್‌ನಲ್ಲಿ ಬಿದ್ದು ನಮ್ಮ ಬಂಧುಗಳು ಸತ್ತರೆ ಒಂದೇ ನಿಮಿಷ ಪ್ರಸಾರ ಮಾಡಿ ಮರೆಮಾಚುತ್ತಾರೆ. ಮ್ಯಾನ್‌ವೋಲ್‌ನಲ್ಲಿ ಉಸಿರುಗಟ್ಟಿ ಸತ್ತ ಸಂದರ್ಭದಲ್ಲಿ ಸ್ಥಳಕ್ಕೆ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ ನೀಡುವುದಿಲ್ಲ. ಒಂದು ದಿನವೂ ನ್ಯಾಯಾಧೀಶರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವುದಿಲ್ಲ ಎಂದು ದೂರಿದರು.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಸಮೀಪದಲ್ಲಿದ್ದು, ಇಂತಹ ಸಂದರ್ಭದಲ್ಲಿ ರಾಜ್ಯದ ಜನತೆ ಸಮಸ್ಯೆಗಳು ಚರ್ಚೆಯೇ ಆಗುತ್ತಿಲ್ಲ. ಶೋಷಿತ ವರ್ಗದ ಸಮಸ್ಯೆಗಳ ಬಗ್ಗೆ ಯಾವ ಮಾಧ್ಯಮಗಳೂ ಚರ್ಚೆ ಮಾಡುತ್ತಿಲ್ಲ. ಯಾವ ಮುದ್ರಣ ಮಾಧ್ಯಮವೂ ಶೋಷಿತ ವರ್ಗದ ಸಮಸ್ಯೆ ಬಗ್ಗೆ ಬರೆಯುತ್ತಿಲ್ಲ. ಯಾರೋ ಒಬ್ಬ ಶಾಸಕರ ಬಗ್ಗೆ ಮತ್ತೊಬ್ಬರು ಟೀಕಿಸಿದರೆ ಅದಕ್ಕೆ ಆದ್ಯತೆ ನೀಡಲಾಗುತ್ತಿದೆ. ಹೀಗಾದರೆ, ಸಮಸ್ಯೆಗಳು ಪರಿಹಾರ ಆಗಲು ಸಾಧ್ಯವೇ? ಬಹಳ ವರ್ಷಗಳಿಂದ ರಾಜ್ಯದಲ್ಲಿ ಐಪಿಡಿ ಸಾಲಪ್ಪನವರ ವರದಿ ಚರ್ಚೆ ಆಗುತ್ತಿದ್ದು, ಇದರ ಜಾರಿಗೆ ರಾಜ್ಯ ಸರ್ಕಾರ ಒತ್ತು ನೀಡಬೇಕು ಎಂದು ಹೇಳಿದರು.

ನಾರಾಯಣ ಅವರ ನೇತೃತ್ವದಲ್ಲಿ ಪೌರಕಾಮಿಕರು ಬೆಂಗಳೂರಿನಲ್ಲಿ ಧರಣಿ ಮಾಡಿದಾಗ ಮುಖ್ಯಮಂತ್ರಿಗಳು ಪೌರಕಾರ್ಮಿಕರ ಖಾಯಮಾತಿಗೆ ಸಮ್ಮತಿಸಿದ್ದಾರೆ. ಇದರ ಜೊತೆಗೆ 12 ಸಾವಿರ ಪೌರಕಾರ್ಮಿಕರನ್ನು ಖಾಯಂ ಮಾಡುವ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ದೇಶದ 50 ಲಕ್ಷ ಪೌರಕಾರ್ಮಿಕರನ್ನು ಪ್ರತಿನಿಧಿಸುವ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸಂವಿಧಾನಬದ್ಧವಾದ ಅಧಿಕಾರ ಕೊಡಬೇಕು. ಅಂತಹ ಅಧಿಕಾರ ಇದ್ದಾಗ ಮಾತ್ರ ಸುಧಾರಣೆ ಸಾಧ್ಯ. ಕಳೆದ 75 ವರ್ಷಗಳಲ್ಲಿ ಸುಧಾರಣೆ ಆಗಿಲ್ಲ. ಒಬ್ಬ ಪೌರಕಾರ್ಮಿಕರ ತನ್ನ ಕೆಲಸದಲ್ಲಿದ್ದಾಗ ಏನೇನು ಸೌಲಭ್ಯಗಳೊಂದಿಗೆ ಕೆಲಸ ಮಾಡಬೇಕೋ ಅದರಂತೆ ಆಗುತ್ತಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಶೇ.90ರಷ್ಟು ಪರಿಸ್ಥಿತಿ ಇದೇ ರೀತಿ ಇದೆ ಎಂದು ವಿಷಾದಿಸಿದರು. ಇದಕ್ಕೂ ಮುನ್ನ ಪೌರಕಾರ್ಮಿಕರ ಬದುಕು–ಬವಣೆ ಕಥಾವಸ್ತು ಇರುವ 'ಧಾತ್ರಿ' ಸಾಕ್ಷ್ಯಚಿತ್ರ, ಆಯೋಗದ ಅಧ್ಯಕ್ಷರಾಗಿ ಕೋಟೆ ಎಂ.ಶಿವಣ್ಣ ಅವರ ಸೇವೆ ಕುರಿತ ಪುಸ್ತಕ, ಪೌರಕಾರ್ಮಿಕರ ವಿಶ್ರಾಂತಿಗೃಹದ ವಿನ್ಯಾಸ ಕುರಿತ ಮಾರ್ಗಸೂಚಿ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು. ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ವೆಂಕಟೇಶನ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ.ವೆಂಕಟೇಶ್, ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿ ಚಂದ್ರಕಲಾ, ಮಾಜಿ ಅಧ್ಯಕ್ಷರಾದ ನಾರಾಯಣ, ಎಂ.ಆರ್.ವೆಂಕಟೇಶ್, ಎಂ.ಎನ್.ಶ್ರೀರಾಮುಲು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯರಾದ ಗೀತಾರಾಜು ವಾಡೇಕರ್, ಬೇಬಿ ಲಂಕೆಪ್ಪ ಮೇತ್ರಿ, ಎಂ.ವಿ.ವೆಂಕಟೇಶ್, ನಾಗರಾಜ ಶಿವಶಂಕರ್ ಸೇರಿದಂತೆ ಪೌರಕಾರ್ಮಿಕರು ಹಾಜರಿದ್ದರು. ಮಾನ್ಯುಯಲ್ ಸ್ಕ್ಯಾವೆಂಜರ್ಸ್ ವೃತ್ತಿ ನಿಷೇಧ ಹಾಗೂ ಅವರ ಪುನರ್ವಸತಿ ಅನುಷ್ಠಾನ ಜಾಗೃತಿ ಸಮಿತಿಯ ರಾಜ್ಯದ ಜಿಲ್ಲಾ ಮಟ್ಟದ ಸಮಿತಿ ಸದಸ್ಯರು ಹಾಗೂ ಪಾಲಿಕೆ ಪೌರ ಕಾರ್ಮಿಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಕಾಸು ಕೊಟ್ಟರೆ ಓಟು; ಪ್ರಜಾಪ್ರಭುತ್ವಕ್ಕೆ ಗೌರವ ತರಲ್ಲ

ಮೈಸೂರು,ಮಾ.14(ಪಿಎಂ)–ಕಾಸು ಕೊಟ್ಟರೆ ಓಟು ಹಾಕುತ್ತಾರೆ ಎಂಬ ಮಾನಸಿಕತೆ ದೇಶದಲ್ಲಿ ಇರುವವರೆಗೆ ನಮ್ಮ ಪ್ರಜಾಪ್ರಭುತ್ವಕ್ಕೆ ಗೌರವ ಬರುವುದಿಲ್ಲ ಎಂದು ಸಚಿವ ಎ.ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು. ಪಾರದರ್ಶಕ ಮತದಾನ ನಡೆದು ಪ್ರತಿನಿಧಿಗಳು ಆಯ್ಕೆಯಾದರೆ ಮಾತ್ರ ಪ್ರಜಾಪ್ರಭುತ್ವಕ್ಕೆ ಗೌರವ ಬರಲಿದೆ. ಅಂತಹ ಪರಿಸರ ಇತ್ತೀಚಿನ ದಿನಗಳಲ್ಲಿ ಇಲ್ಲವಾಗಿದೆ. ಇದು ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ. ನನ್ನ ಇಲಾಖೆಯಲ್ಲಿ ಅನುದಾನ ಸಾಕಷ್ಟು ಇದ್ದು, ಶೇ.10ರಷ್ಟು ಉಪಯೋಗಿಸಿಕೊಳ್ಳುವುದಿಲ್ಲ. ವಿದ್ಯಾವಂತರು, ಜಿಲ್ಲಾ ಮಟ್ಟದ ಅಧಿಕಾರಿಗಳು ಇಲಾಖೆ ವೆಬ್‌ಸೈಟ್ ನೋಡುವುದಿಲ್ಲ. ಅಲ್ಲಿರುವ ಯೋಜನೆಗಳ ಸೌಲಭ್ಯದ ಬಗ್ಗೆ ತಿಳಿದುಕೊಳ್ಳುವುದಿಲ್ಲ ಎಂದರು.



ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದ ಆವರಣದಲ್ಲಿ ಮಂಗಳವಾರ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಹಾಗೂ ಅಭಿವೃದ್ಧಿ ನಿಗಮದ ವತಿಯಿಂದ ಪೌರಕಾರ್ಮಿಕ ಫಲಾನುಭವಿಗಳಿಗೆ ಕಾರ್, ಮೋಟಾರ್ ಬೈಕ್, ಸ್ಕೂಟರ್‌ಗಳನ್ನು ಹಸ್ತಾಂತರಿಸಲಾಯಿತು.

ನಾನು ಬಿಜೆಪಿ ಬಿಡೆನು! ಸಚಿವ ಸೋಮಣ್ಣ

ಹಂತದಲ್ಲಿ ಭಾವೋದ್ವೇಗಕ್ಕೆ ಒಳಗಾಗಿ ಕಣ್ಣೀರು ಹಾಕಿದ ಸಚಿವ ಸೋಮಣ್ಣ, ದೇವೇಗೌಡರು ರಾಜಕೀಯವಾಗಿ ನನ್ನ ಕೈ ಹಿಡಿದಿದ್ದಾರೆ, ಯಡಿಯೂರಪ್ಪ ಅವರು ನನ್ನನ್ನು ಎಂಎಲ್‌ಸಿ ಮಾಡಿ ಮಂತ್ರಿ ಮಾಡಿದ್ದಾರೆ. ನಾನು ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸಹಿಸುವುದಿಲ್ಲ ಎಂದರು.

ನಾನು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರುತ್ತೇನೆ ಎಂದು ಹೇಳಿಯೇ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಎಲ್ಲ ರಾಜಕೀಯ ಪಕ್ಷಗಳಲ್ಲೂ ನನಗೆ ಆಪ್ತರಿದ್ದಾರೆ. ಅವರ ಜತೆ ಮಾತನಾಡಿದ ಮಾತ್ರಕ್ಕೆ ನಾನು ಬಿಜೆಪಿ ತೊರೆಯುತ್ತೇನೆ ಎಂಬುದು ಸರಿ ಅಲ್ಲ ಎಂದು ನುಡಿದರು. ನಾನು ಜನತಾ ಪರಿವಾರದಲ್ಲಿ ಇದ್ದೆ,ಕಾಂಗ್ರೆಸ್ ಪಕ್ಷಕ್ಕೆ ಹೋಗಿ ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೆ. ಈಗ ಬಿಜೆಪಿಯಲ್ಲಿ ಇದ್ದೇನೆ, ನಾನು ಎಲ್ಲಿರುತ್ತೇನೋ ಆ ಪಕ್ಷವನ್ನು ತಾಯಿ ಎಂದು ಭಾವಿಸುತ್ತೇನೆ.

ನಾನು ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಚಿತಾವಣೆ ಮಾಡುವ ವ್ಯಕ್ತಿಯಲ್ಲ. ಇವತ್ತು ಪ್ರಧಾನಿ ನರೇಂದ್ರಮೋದಿ ನಮ್ಮ ನಾಯಕರು, ನಡ್ಡಾ ಅವರು ನಮ್ಮ ನಾಯಕರು ಎಂದರಲ್ಲದೆ, ಪಕ್ಷ ಟಿಕೆಟ್ ಕೊಟ್ಟರೆ ಸ್ಪರ್ಧಿಸುತ್ತೇನೆ. ಇಲ್ಲವಾದರೆ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡಿರುತ್ತೇನೆ ಎಂದು ನುಡಿದರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ಅವರ ವಿರುದ್ಧ ತಮ್ಮ ಪುತ್ರ ಅರುಣ್ ಸೋಮಣ್ಣ ಅವರು ವಾಗ್ದಾಳಿ ಮಾಡಿದ್ದಾರೆ ಎಂಬ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಒಂದು ವೇಳೆ ಹಾಗಾಗಿದ್ದರೆ ಅದು ತಪ್ಪು.ತಪ್ಪು ಮಾಡಿದವರ ವಿರುದ್ಧ ಪಕ್ಷ ಶಿಸ್ತುಕ್ರಮ ಕೈಗೊಳ್ಳಬಹುದು ಎಂದರು.

ರಾಜಕೀಯದಲ್ಲಿ ಯಾರಿಗೆ ಯಾರೂ ಶತ್ರುವಲ್ಲ,ಆ ರೀತಿ ಬದುಕಲೂ ಬಾರದು ಎಂದು ತಮ್ಮನ್ನು ದ್ವೇಷಿಸುವವರಿಗೆ ಪರೋಕ್ಷವಾಗಿ ಟಾಂಗ್ ನೀಡಿದ ಸೋಮಣ್ಣ,ಪಕ್ಷ ಟಿಕೆಟ್ ಕೊಟ್ಟರೆ ಮುಂದಿನ ಚುನಾವಣೆಯನ್ನು ಬೊಮ್ಮಾಯಿ ಅವರ ನೇತೃತ್ವದಲ್ಲಿ ಎದುರಿಸುವುದಾಗಿ ನುಡಿದರು. ಅನವಶ್ಯಕವಾಗಿ ತೇಜೋವಧೆ ಮಾಡುವುದು ಒಳ್ಳೆಯದಲ್ಲ ಎಂದು ಪಕ್ಷದೊಳಗಿನ ತಮ್ಮ ವಿರೋಧಿಗಳಿಗೆ ಸೂಚ್ಯವಾಗಿ ಕಿವಿಮಾತು ಹೇಳಿದ ಸಚಿವ ವಿ.ಸೋಮಣ್ಣ ಈ ಹಂತದಲ್ಲಿ ಭಾವುಕರಾಗಿ ಕಣ್ಣೀರಿಟ್ಟರು.

ಯಾರು ನನ್ನಿಂದ ಬೆಳೆದರೋ ಅವರೇ ನನಗೆ ತೊಂದರೆ ಕೊಡುತ್ತಿದ್ದಾರೆ ಎಂದ ಸೋಮಣ್ಣ, ಪಕ್ಷ ತೊರೆಯುವ ವದಂತಿಗಳು ಹಬ್ಬಿದ ನಂತರ ಪಕ್ಷದ ರಾಷ್ಟ್ರೀಯ ನಾಯಕರಾದ ಧರ್ಮೇಂದ್ರ ಪ್ರಧಾನ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನನ್ನ ಬಳಿ ಮಾತನಾಡಿದ್ದಾರೆ. ಹೀಗಾಗಿ ಎಲ್ಲ ಊಹಾಪೋಹಗಳಿಗೂ ಇತಿಶ್ರೀ ಹಾಡಲು ನಿರ್ಧರಿಸಿದ್ದೇನೆ. ನಾನು ಪಕ್ಷದಲ್ಲೇ ಮುಂದುವರಿಯುತ್ತೇನೆ ಎಂದರು. ತಮ್ಮ ವಿರುದ್ಧ ಷಡ್ಯಂತ್ರ ಮಾಡುತ್ತಿರುವವರು ತಣ್ಣಗಿರಲಿ ಎಂದ ಅವರು, ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಸಿಕ್ಕರೆ ಸ್ಪರ್ಧಿಸುತ್ತೇನೆ. ಇಲ್ಲವಾದರೆ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡಿರುತ್ತೇನೆಂದು ಪುನಃ ಹೇಳಿದರು.

ಟೋಲ್ ಬಿಸಿ

ಬಳಿ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಮೈಸೂರಿನಿಂದ ಬೆಂಗಳೂರಿಗೆ ಸಾಗುವ ವಾಹನಗಳಿಗೆ ರಾಮನಗರ ತಾಲೂಕಿನ ಶೇಷಗಿರಿಹಳ್ಳಿ ಪ್ಲಾಜಾ ಬಳಿ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಬಸ್‌ಗಳ ಏಕಮುಖ ಸಂಚಾರಕ್ಕೆ 460 ರೂ. ಎರಡು ಕಡೆ ಸಂಚಾರಕ್ಕೆ 690 ರೂ., ತಿಂಗಳ ಟೋಲ್ ಪಾಸ್ ದರ 15,325 ರೂ. ನಿಗದಿಯಾಗಿದೆ. ಇದೀಗ ಈ ಹೊರೆಯನ್ನು ಕೆಎಸ್‌ಆರ್‌ಟಿಸಿ ಪ್ರಯಾಣಿಕರಿಗೆ ವರ್ಗಾಯಿಸಿದೆ. ಏನೇ ಆದರೂ ಅಂತಿಮವಾಗಿ ಹೊರೆ ಬೀಳುವುದು ಸಾಮಾನ್ಯರ ಮೇಲೆ ಎನ್ನುವುದಕ್ಕೆ ಇದೊಂದು ಸಾಕ್ಷಿ.

ಜಾಗೃತಿ ಕಾರ್ಯಕ್ರಮ

ಟ್ರಸ್ಟಿ ಅಶ್ವಿನಿರಂಜನ್ ಆಶಯ ಭಾಷಣ ಮಾಡಲಿದ್ದಾರೆ. 'ಹಣ ಮತ್ತು ತೋಳ್ಬಲ' ಕುರಿತು ಕ್ಯಾಬಿನೆಟ್‌ನ ಮಾಜಿ ಕಾರ್ಯದರ್ಶಿ ರವಿ ಜೋಶಿ, 'ಸುಧಾರಣೆಗಳ ಅಗತ್ಯತೆ' ಕುರಿತು ವೇದಿಕೆ ಸಂಚಾಲಕ ಪ್ರೊ.ಎಂ.ಉಮಾಪತಿ ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಚುನಾವಣಾ ಭ್ರಷ್ಟಾಚಾರ ನಿರ್ಮೂಲನೆ ಮತ್ತು ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಲು ಸಾರ್ವಜನಿಕರು ತಮ್ಮ ಸಲಹೆಗಳನ್ನು ನೀಡಬಹುದಾಗಿದೆ. ಅಲ್ಲದೆ, ವಿಷಯ ತಜ್ಞರೊಂದಿಗೆ ಸಂವಾದ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 94498–19536 ಅನ್ನು ಸಂಪರ್ಕಿಸಬಹುದು.

ಸಂಗ್ರಹ ಆರಂಭ

ಕೈಕೊಟ್ಟ ಫಾಸ್ಟ್ಯಾಗ್: ಮೊದಲ ದಿನವೇ ಟೋಲ್ ಪ್ಲಾಜಾದಲ್ಲಿ ಅಳವಡಿಸಿರುವ ಫಾಸ್ಟ್ಯಾಗ್ ಉಪಕರಣ ಕೈಕೊಟ್ಟ ಹಿನ್ನೆಲೆಯಲ್ಲಿ ಸಾರ್ವಜನಿಕರು ಟೋಲ್ ದಾಟಲು ಹೆಣಗಾಡಬೇಕಾಯಿತು. ಫಾಸ್ಟ್ಯಾಗ್ ನೋಂದಣಿ ಮಾಡಿಸಿರುವ ವಾಹನ ಮಾಲೀಕರು ಆನ್‌ಲೈನ್‌ನಲ್ಲಿ ಟೋಲ್ ಫೀ ಕಡಿತವಾಗುತ್ತದೆ ಎಂದು ಹಣ ತಂದಿರದವರೂ ಪ್ಲಾಜಾ ಸಿಬ್ಬಂದಿಗಳ ಮೇಲೆ ಹರಿಹಾಯ್ದರು. ನಿಮ್ಮ ಉಪಕರಣ ಕೆಲಸ ಮಾಡದಿದ್ದರೆ ನಾವೇಕೆ ಹಣ ಕೊಡಬೇಕೆಂದು ಅಸಮಾಧಾನ ವ್ಯಕ್ತಪಡಿಸಿದ ಕಾರಣ ಸ್ಥಳದಲ್ಲಿ ಮಾತಿನ ಚಕಮಕಿ, ಗೊಂದಲ, ಗದ್ದಲದ ನಡುವೆಯೂ ಟೋಲ್ ಸಂಗ್ರಹಿಸುವುದನ್ನು ಮುಂದುವರಿಸಿದ್ದಾರೆ.

ಹಸಿರು ನಮ್ಮ ಉಸಿರು

ಹಾಸನ ಕ್ಷೇತ್ರದಿಂದ ಕೆ.ಎಂ. ರಾಜೇಗೌಡ ಜೆಡಿಎಸ್ ಅಭ್ಯರ್ಥಿ?

ಹಾಸನ: ಹಾಸನ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ವಿಚಾರದಲ್ಲಿ ಗೊಂದಲ ಮುಂದುವರಿದಿದ್ದು, ಇದೀಗ ಕ್ಷೇತ್ರದಲ್ಲಿ ಹೊಸ ಹೆಸರು ಭಾರಿ ಸದ್ದು ಮಾಡುತ್ತಿದೆ.

ಎಚ್.ಪಿ.ಸ್ವರೂಪ್ ಅವರ ಉಮೇದುವಾರಿಕೆಯನ್ನು ಸರಿದೂಗಿಸಲು ಒಕ್ಕಲಿಗ ಸಮುದಾಯದ ಉಪಜಾತಿಯಾದ ದಾಸವೊಕ್ಕಲಿಗದಿಂದ ಪಕ್ಷದ ಹಿರಿಯ ನಾಯಕ ಕೆ.ಎಂ.ರಾಜೇಗೌಡ ಅವರನ್ನು ಕಣಕ್ಕಿಳಿಸಲು ಜೆಡಿಎಸ್ ಮುಖಂಡರು ಮುಂದಾಗಿದ್ದಾರೆ ಎನ್ನಲಾಗಿದೆ. ಈಗ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕೆ.ಎಂ.ರಾಜೇಗೌಡ ಅವರ ಬಗ್ಗೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಮಾತನಾಡುತ್ತಿದ್ದಾರೆ. ವಾಣಿಜ್ಯ ಸಂಸ್ಥೆಗಳು, ಉದ್ಯಾನವನಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾಜೇಗೌಡ ಬಗ್ಗೆ ಚರ್ಚೆ ನಡೆಯುತ್ತಿದೆ.

ಹಾಸನದ ಅಭ್ಯರ್ಥಿಯನ್ನು ಅಂತಿಮಗೊಳಿಸಬೇಕಿರುವ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರು ಬದಲಾದ ಸನ್ನಿವೇಶದಲ್ಲಿ ಕೆ.ಎಂ.ರಾಜೇಗೌಡ ಅವರನ್ನು ಹಾಸನದಿಂದ ಕಣಕ್ಕಿಳಿಸಲು ಮುಂದಾಗಿದ್ದಾರೆ. ಎಚ್.ಡಿ.ರೇವಣ್ಣ ಅವರು ಕೆ.ಎಂ.ರಾಜೇಗೌಡ ಅವರೊಂದಿಗೆ ಈಗಾಗಲೇ ಎರಡು ಬಾರಿ ಗೌಪ್ಯವಾಗಿ ಚರ್ಚಿಸಿದ್ದಾರೆ ಎನ್ನಲಾಗಿದೆ

ಇನ್ನು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಒಪ್ಪಿದ ಕೆ.ಎಂ.ರಾಜೇಗೌಡ ಅವರು ಹಾಸನದಲ್ಲಿ ತಮ್ಮ ಬೆಂಬಲಿಗರೊಂದಿಗೆ ಟೆಂಪಲ್ ರನ್ ಆರಂಭಿಸಿದ್ದಾರೆ. ನೀರುಬಾಗಿಲು ಆಂಜನೇಯ, ಹಾಸನಾಂಬ, ಹಾಸನದ ಸಿದ್ದೇಶ್ವರ ದೇವಸ್ಥಾನ ಹಾಗೂ ಹಾಸನದ ಬೈಲಹಳ್ಳಿಯ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಮಂಗಳವಾರ ವಿಶೇಷ ಪೂಜೆ ಸಲ್ಲಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಪ್ರಚಾರ ಆರಂಭಿಸಿದ್ದಾರೆ.

ಎಚ್.ಡಿ.ರೇವಣ್ಣ ಪ್ರಸ್ತಾಪಿಸಿದ ರಾಜೇಗೌಡ ಅವರ ಉಮೇದುವಾರಿಕೆಗೆ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಸಿರು ನಿಶಾನೆ ತೋರಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರ ಬಳಿಯೂ ಕೆ.ಎಂ.ರಾಜೇಗೌಡರ ಸಾಧಕ–ಬಾಧಕಗಳ ಬಗ್ಗೆ ಎಚ್.ಡಿ.ರೇವಣ್ಣ ಚರ್ಚೆ ನಡೆಸಿದ್ದಾರೆ. ಈಗಾಗಲೇ ಚುನಾವಣಾ ಪ್ರಚಾರ ಆರಂಭಿಸಿದ್ದ ಪ್ರಬಲ ಟಿಕೆಟ್ ಆಕಾಂಕ್ಷಿಗಳಾದ ಭವಾನಿ ರೇವಣ್ಣ ಮತ್ತು ಎಚ್‌ಪಿ ಸ್ವರೂಪ ಗೌಡ ಇಬ್ಬರೂ ಎಚ್‌ಡಿ ಕುಮಾರಸ್ವಾಮಿ ಅವರ ಕಟ್ಟುನಿಟ್ಟಿನ ಸೂಚನೆ ಮೇರೆಗೆ ಪಕ್ಷದ ಕಾರ್ಯಕರ್ತರ ಸಭೆ ಮತ್ತು ಟೆಂಪಲ್ ರನ್ ಅನ್ನು ದಿಢೀರ್ ನಿಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಮಾಜ ಸೇವಾ ಸಂಘಟನೆಗಳಿಂದ ಸಂತ್ರಸ್ತರಿಗೆ ಮನೆಗಳ ಹಸ್ತಾಂತರ



ಸಿದ್ದಾಪುರ, ಮಾ.14– ಪ್ರವಾಹ ಸಂತ್ರಸ್ತರಿಗೆ ನೆಲ್ಯ ಹುದಿಕೇರಿ ಗ್ರಾಮದ ನಲ್ವತ್ತೇಕರೆ ಬಳಿ ಪೀಪಲ್ಸ್ ಫೌಂಡೇಷನ್, ಜಮಾಅತೆ ಇಸ್ಲಾಮೀ ಹಿಂದ್, ಹೆಚ್.ಆರ್.ಎಸ್ ಸಂಘಟನೆಗಳ ಸಹಯೋಗದಲ್ಲಿ ನಿರ್ಮಿಸಲಾದ 25 ಮನೆಗಳನ್ನು ಸಂತ್ರಸ್ತರಿಗೆ ಹಸ್ತಾಂತರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಯು.ಟಿ.ಖಾದರ್ ಮಾತನಾಡಿ ಪ್ರವಾಹ ಸಂತ್ರಸ್ತರಿಗೆ ನಾಲ್ಕು ವರ್ಷ ಕಳೆದರೂ ಸರ್ಕಾರ ಇಂದಿಗೂ ಜಾಗ, ಮನೆ, ಪರಿಹಾರ ನೀಡದೇ ಎಲ್ಲಾ ರೀತಿಯಲ್ಲೂ ಕಡಗಣಿಸಿದೆ ಎಂದು ಆರೋಪಿಸಿದರಲ್ಲದೆ, ಸರ್ಕಾರ ಮಾಡಬೇಕಾದ ದ್ದನ್ನು ಸಮಾಜ ಸೇವಾ ಸಂಘಟನೆಗಳು ದಾನಿಗಳ ಮೂಲಕ ಮನೆಗಳನ್ನು ನಿರ್ಮಿಸಿ ಮಾನವೀಯತೆ ತೋರಿದೆ ಎಂದರು.

ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಂತ್ರಸ್ತರಿಗಾಗಿ ಮನೆ ನಿರ್ಮಿಸಲಾಗಿರುವ 'ಪೀಪಲ್ಸ್ ವಿಲೇಜ್' ಅನ್ನು ಉದ್ಘಾಟಿಸಿ ಮಾತನಾಡಿ, ಪ್ರವಾಹ ಸಂದರ್ಭದಲ್ಲಿ ಮನೆ ಕಳೆದುಕೊಂಡು ಸಂಕಷ್ಟದಲ್ಲಿದ್ದ ಕುಟುಂಬಗಳಿಗೆ ನೆರವಾಗುವ ಮೂಲಕ 25 ಮನೆಗಳನ್ನು ನಿರ್ಮಿಸಿ ಜಾತಿ ಮತ ಬೇದವಿಲ್ಲದೆ ನೀಡಿರುವುದು ಪುಣ್ಯದ ಕೆಲಸ ಎಂದರು.

ಜಮಾಅತೆ ಇಸ್ಲಾಮೀ ಹಿಂದ್ ಕೇರಳ ರಾಜ್ಯಾಧ್ಯಕ್ಷ ಎಂ.ಈ. ಅಬ್ದುಲ್ ಅಝೀಝ್ ಮಾತನಾಡಿ, ಮನೆ ಇಲ್ಲದೆ ಲಕ್ಷಾಂತರ ಜನರು ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಕೊಡಗಿನ ಸಂತ್ರಸ್ತರಿಗೆ ಜಾತಿ ಮತ ಬೇದವಿಲ್ಲದೆ 25 ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ಎಲ್ಲರೂ ಶಾಂತಿ ಸಹ ಬಾಳ್ವೆಯೊಂದಿಗೆ ಸೌಹಾರ್ದ ಜೀವನ ನಡೆಸುವಂತಾಗಲಿ ಎಂದರು.

ಶಾಂತಿ ಪ್ರಕಾಶನ ವ್ಯವಸ್ಥಾಪಕ ಎಂ.ಹೆಚ್. ಮುಹಮ್ಮದ್ ಕುಂಞ, ಜಮಾಅತೆ ಇಸ್ಲಾಮೀ ಹಿಂದ್ ಮಂಗಳೂರು ವಲಯ ಸಂಚಾಲಕ ಅಬ್ದುಸ್ಸಲಾಂ ಮಾತನಾಡಿದರು.

ಈ ಸಂದರ್ಭ ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕ ರಾಜ್ಯಾಧ್ಯಕ್ಷ ಡಾ. ಬೆಗ್ಗಾಮಿ ಮಹಮ್ಮದ್ ಸಾದ್, ಕೇರಳ ರಾಜ್ಯದ ಉಪಾಧ್ಯಕ್ಷ ಪಿ. ಮುಜೀಬುರ ಹ್ಮಾನ್, ಕರ್ನಾಟಕ ರಾಜ್ಯ ಕಾರ್ಯದರ್ಶಿ ಅಕ್ಬರ್ ಆಲಿ, ಪೀಪಲ್ಸ್ ಫೌಂಡೇಷನ್ ಅಧ್ಯಕ್ಷ ಎಂ.ಕೆ. ಮಹಮ್ಮದ್ ಆಲಿ, ಕಾಂಗ್ರೆಸ್ ಮುಖಂಡ ಡಾ. ಮಂತರ್ ಗೌಡ, ಮಡಿಕೇರಿ ನಗರಸಭಾ ಸದಸ್ಯ ಅಮೀನ್ ಮೊಹಿಸಿನ್, ನೆಲ್ಯಹುದಿಕೇರಿ ಗ್ರಾ.ಪಂ. ಅಧ್ಯಕ್ಷ ಎ.ಕೆ. ಹಕೀಂ, ಪಿ.ಡಿ.ಓ ಅನಿಲ್ ಕುಮಾರ್, ಪ್ರಮುಖರಾದ ಬಾಳೆಯಡ ದಿವ್ಯ ಮಂದಪ್ಪ, ಪ್ರಗತಿಪರ ವೇದಿಕೆ ಸಂಚಾಲಕ ವಿ.ಪಿ. ಶಶಿಧರ್, ಪವನ್ ಪೆಮ್ಮಯ ಕೆ.ಯು. ಮಜೀದ್ ಸೇರಿದಂತೆ ಇನ್ನಿತರರು ಇದ್ದರು.

ಹಾಕಿ ಹಬ್ಬಕ್ಕೆ ಸರ್ಕಾರದ ಅನುದಾನ ಅನುಮಾನ

ಕೊಡವ ಹಾಕಿ ಅಕಾಡೆಮಿ ಮಹಾಸಭೆಯಲ್ಲಿ ಮನು ಮುತ್ತಪ್ಪ ಬೇಸರ



ವಿರಾಜಪೇಟೆ, ಮಾ.14– ಮುಂಬರುವ ದಿನಗಳಲ್ಲಿ ನಡೆಯುವ ಹಾಕಿ ಹಬ್ಬಕ್ಕೆ ಒಂದು ಕೋಟಿ ರೂ. ಅನುದಾನ ನೀಡುವುದಾಗಿ ಸರ್ಕಾರ ಘೋಷಿಸಿದ್ದು, ಆ ಅನುದಾನ ನಮ್ಮ ಕೈ ಸೇರುವುದು ಅನುಮಾನ ಎಂದು ಹಾಕಿ ಹಬ್ಬ ಆಯೋಜಕರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಬೇಸರದಿಂದ ನುಡಿದಿದ್ದಾರೆ.

ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ನಡೆದ ಕೊಡವ ಹಾಕಿ ಅಕಾಡೆಮಿಯ ಮಹಾಸಭೆಯಲ್ಲಿ ಅಪ್ಪಚೆಟ್ಟೋಳಂಡ ಕುಟುಂಬದ ಪರವಾಗಿ ಮಾತನಾಡಿದ ಅವರು, ನಾವು ಹಾಕಿ ಹಬ್ಬವನ್ನು ಯಶಸ್ವಿಯಾಗಿ ನಡೆಸಲು ಕಳೆದ ಆರು ತಿಂಗಳಿಂದ ಸಿದ್ಧತೆ ನಡೆಸುತ್ತಿದ್ದೇವೆ. ಸರ್ಕಾರದ ಅನುದಾನ ಕೈ ಸೇರುವುದು ಅನುಮಾನವಾಗಿರುವುದರಿಂದ ಕುಟುಂಬದ ಸದಸ್ಯರೇ ಹಣವನ್ನು ಹಾಕಿ ಹಬ್ಬವನ್ನು ಆಚರಿಸಲು ತಯಾರಿ ನಡೆಸಿದ್ದೇವೆ ಎಂದರು.

ಹಾಕಿ ಹಬ್ಬದಲ್ಲಿ 336 ತಂಡಗಳು ಭಾಗವಹಿಸುತ್ತಿವೆ. ಇದಕ್ಕಾಗಿ ಸಾಕಷ್ಟು ಶ್ರಮ ವಹಿಸಿದ್ದೇವೆ. ಕೊಡವ ಕುಟುಂಬಗಳು ಸ್ವಯಂ ಪ್ರೇರಿತರಾಗಿ ಹೆಸರು ನೊಂದಾಯಿಸಿ ಹಾಕಿ ಹಬ್ಬದಲ್ಲಿ ಭಾಗವಹಿಸುವಂತಾಗಬೇಕು. ಹಾಕಿ ಹಬ್ಬದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ ಎಂದ ಅವರು, ಮೆರವಣಿಗೆಯಲ್ಲಿ ನಾಡಿನ ಜನತೆ ಭಾಗವಹಿಸುವಂತೆ ಮನವಿ ಮಾಡಿದರು. ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಅವರು ಮಾತನಾಡಿ, ಕೊಡವ ಹಾಕಿ ಅಕಾಡೆಮಿ ವತಿಯಿಂದ ಗ್ರಾಮೀಣ ಭಾಗದ ಯುವಕರಿಗೂ ಕೊಡಗಿನ ಇತರೆಡೆಗಳಲ್ಲಿ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಅಕಾಡೆಮಿ ವತಿಯಿಂದ ಅಪ್ಪಚೆಟ್ಟೋಳಂಡ ಹಾಕಿ ಹಬ್ಬದಲ್ಲಿ ಕೊಡವ ಕುಟುಂಬಗಳ ಹಾಕಿ ಜನಕ ಪಾಂಡಂಡ ಕುಟ್ಟಪ್ಪನವರ ಹೆಸರಿನಲ್ಲಿ ಒಂದು ಕೆ.ಜಿ ತೂಕದ ಬೆಳ್ಳಿಯ ಟ್ರೋಫಿಯನ್ನು ವಿಜೇತ ತಂಡಕ್ಕೆ ನೀಡಲಾಗುವುದು ಎಂದು ಇದೇ ವೇಳೆ ತಿಳಿಸಿದರು. ಹಾಕಿ ಹಬ್ಬದಂದು ಅಕಾ ಡೆಮಿಯ ನೂತನ ಧ್ವಜವನ್ನು ಸಹ ಪರಿಚಯಿಸಲಾಗುತ್ತಿದೆ. ಈವರೆಗೆ ಆಡಿದ 22 ಕೊಡವ ಕುಟುಂಬಗಳ ಹಾಕಿ ಹಬ್ಬದಲ್ಲಿ ಉತ್ತಮ ಆಟಗಾರರನ್ನು ಹಾಕಿ ಚಾಂಪಿಯನ್ ಶಿಪ್ ಆಟಗಾರರನ್ನಾಗಿ ರೂಪಿಸುವ ಮೂಲಕ ಪಾಂಡಂಡ ಕುಟ್ಟಪ್ಪನವರ ಕನಸನ್ನು ನನಸು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಬಾವಲಿ ಗ್ರಾಮದ ಮುಕ್ಕಾಟಿರ ಹರೀಶ್, ಅಕಾಡೆಮಿ ಕಾರ್ಯದರ್ಶಿ ರವಿ ಪೆಮ್ಮಯ್ಯ, ಮುಂದಿನ ಹಾಕಿ ಪಂದ್ಯಾಟ ಆಯೋಜಕರಾದ ಕುಂಡ್ಯಳೋಂಡ ರಮೇಶ್ ಮುದ್ದಯ್ಯ ಸಭೆಯಲ್ಲಿ ಮಾತನಾಡಿದರು. ಇದೇ ಸಂದರ್ಭ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಅಕಾಡೆಮಿಯ ನೂತನ ಧ್ವಜನ್ನು ಹಾಕಿ ಹಬ್ಬ ಆಯೋಜಕ ಕುಟುಂಬದ ಅಪ್ಪಚೆಟ್ಟೋಳಂಡ ಮನುಮುತ್ತಪ್ಪ ಅವರಿಗೆ ಹಸ್ತಾಂತರಿಸಿದರು.

ಸಭೆಯಲ್ಲಿ ಮಡಿಕೇರಿ ವಿಭಾಗದ ಉಪಾಧ್ಯಕ್ಷ ದೀನಾ ಪೂವಯ್ಯ, ಸೋಮವಾರಪೇಟೆ ವಿಭಾಗದ ಉಪಾಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ, ವಿರಾಜಪೇಟೆ ವಿಭಾಗದ ಉಪಾಧ್ಯಕ್ಷ ಮಾದಂಡ ಪೂವಯ್ಯ, ಗೌ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಜಂಟಿ ಕಾರ್ಯದರ್ಶಿ ಮುಕ್ಕಾಟಿರ ಭೀಮಯ್ಯ, ಅಕಾಡೆಮಿ ನಿರ್ದೇಶಕರಾದ ಚೇನಂಡ ಸುರೇಶ್ ನಾಣಯ್ಯ, ಕುಲ್ಲೇಟಿರ ಅರುಣ್‌ಬೇಬಿ, ಕಲಿಯಂಡ ಅಯ್ಯಪ್ಪ, ಚೇಯಂಡ ಸತ್ಯ ಗಣಪತಿ, ನೆರವಂಡ ಹರ್ಷ ಮಂದಣ್ಣ ಕಂಬಿರಂಡ ರಾಖಿ, ಮಾರ್ಚಂಡ ಗಣೇಶ್ ಪೊನ್ನಪ್ಪ ಸಭೆಯಲ್ಲಿ ಉಪಸ್ಥಿತರಿದ್ದರು.

ಮೇಲಾಧಿಕಾರಿಯ ನಿರಂತರ ಕಿರುಕುಳ ತಾಳಲಾರದೆ ಚೆಸ್ಕಾಂ ಮಹಿಳಾ ಉದ್ಯೋಗಿ ಆತ್ಮಹತ್ಯೆ



ಸೌಮ್ಯ

ಮಡಿಕೇರಿ, ಮಾ.14– ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರೊಬ್ಬರ ಕಿರುಕುಳ ತಾಳಲಾರದೆ ಚೆಸ್ಕಾಂ ಮಹಿಳಾ ಸಿಬ್ಬಂದಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸಂಭವಿಸಿದೆ.

ಮಡಿಕೇರಿಯ ಚೆಸ್ಕಾಂ ಕಂಪ್ಯೂಟರ್ ಆಪರೇಟರ್ ಸೌಮ್ಯ ಎಂಬುವರೇ ಆತ್ಮಹತ್ಯೆಗೆ ಶರಣಾದರಾಗಿದ್ದಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ವಿನಯ್‌ಕುಮಾರ್ ಎಂಬಾತ ಸೌಮ್ಯಳಿಗೆ ನಿರಂತರ ಕಿರುಕುಳ ನೀಡುತ್ತಿದ್ದ. ಮೆಸೇಜ್ ಮಾಡಿ ತನಗೆ ಕರೆ ಮಾಡುವಂತೆ ನಿರಂತರ ಒತ್ತಡ ಹೇರುತ್ತಿದ್ದ. ಇದರಿಂದ ಮನನೊಂದ ಸೌಮ್ಯ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತ ಸೌಮ್ಯ ಅವರ ತಾಯಿ ಭವಾನಿ ದೂರು ದಾಖಲಿಸಿದ್ದಾರೆ. ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಇಂಜಿನಿಯರ್ ವಿನಯ್ ಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿ ನಾಪತ್ತೆಯಾಗಿದ್ದಾನೆ. ಆತನ ಪತ್ತೆಗಾಗಿ ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದಾರೆ.

ಕಾಫಿ ತೋಟಕ್ಕೆ ಬೆಂಕಿ: ಅಪಾರ ಪ್ರಮಾಣದ ಹಾನಿ

ನಾಪೋಕ್ಲು, ಮಾ.14– ಕಾಫಿ ತೋಟಕ್ಕೆ ಬೆಂಕಿ ಬಿದ್ದ ಪರಿಣಾಮ ಅಪಾರ ಪ್ರಮಾಣದಲ್ಲಿ ನಷ್ಟ ಸಂಭವಿಸಿದ ಘಟನೆ ಸಮೀಪದ ಕಕ್ಕಬೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಮರಂದೋಡ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಮಾಜಿ ಸೈನಿಕ ಬಿಲ್ಲವರ ಪೂವಪ್ಪ ಅವರ ಕಾಫಿ ತೋಟ ಬೆಂಕಿ ಆಹುತಿಯಾಗಿದ್ದು ಬಾರಿ ಪ್ರಮಾಣದಲ್ಲಿ ನಷ್ಟವಾಗಿದೆ.

ಬಿಲ್ಲವರ ಪೂವಪ್ಪ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದು ನಿವೃತ್ತಿಯ ನಂತರ ಮರಂದೊಡ ಗ್ರಾಮದಲ್ಲಿ ಕಾಫಿ ತೋಟ ಮಾಡಿಕೊಂಡಿದ್ದರು. 15 ವರ್ಷದ ಗಿಡಗಳು ಇಳುವರಿ ನೀಡುತ್ತಿದ್ದವು. ನಾಲ್ಕೈದು ವರ್ಷಗಳಿಂದ ಉತ್ತಮ ಇಳುವರಿ ನೀಡುತ್ತಿದ್ದು, ಕಳೆದೆರಡು ದಿನಗಳ ಹಿಂದೆ ಆಕಸ್ಮಿಕವಾಗಿ ಬೆಂಕಿ ತಗುಲಿ ಗಿಡಗಳು ಸುಟ್ಟು ಭಸ್ಮವಾಗಿವೆ. ಲಕ್ಷಾಂತರ ರೂ.ಖರ್ಚು ಮಾಡಿ ನಿರ್ಮಿಸಿದ ಕಾಫಿ ತೋಟದ ಗಿಡಗಳು ಬೆಂಕಿಗೆ ಆಹುತಿಯಾಗಿದ್ದು ಅಪಾರ ಪ್ರಮಾಣದಲ್ಲಿ ನಷ್ಟ ಸಂಭವಿಸಿದೆ. ಎಲ್ಲಿಂದಲೋ ಬಿದ್ದ ಬೆಂಕಿ ಇವರ ತೋಟಕ್ಕೆ ವ್ಯಾಪಿಸಿದ್ದು ಸುಮಾರು ಮೂರು ಎಕರೆಯಷ್ಟು ತೋಟ ನಾಶವಾಗಿದೆ. ಕಿಡಿಗೇಡಿಗಳು ಈ ಕೃತ್ಯವನ್ನು ನಡೆಸಿರಬಹುದು ಶಂಕಿಸಲಾಗಿದೆ

ರಸ್ತೆ ಕಾಮಗಾರಿ ಪರಿಶೀಲಿಸಿದ ಶಾಸಕ ಬೋಪಯ್ಯ

ಅಭಿವೃದ್ಧಿ ಕಾರ್ಯ ಸಹಿಸದೆ ಕಾಂಗ್ರೆಸ್‌ನಿಂದ ಅಪಪ್ರಚಾರ



ಮಡಿಕೇರಿ, ಮಾ.14– ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಆನೆಹಳ್ಳದಿಂದ ದಬ್ಬಡ್ಕದವರೆಗಿನ ರಸ್ತೆ ಕಾಮಗಾರಿ ನಡೆಯುತ್ತಿದೆ. ಆದರೆ ಅಭಿವೃದ್ಧಿ ಕಾರ್ಯಗಳನ್ನು ಸಹಿಸದ ಕಾಂಗ್ರೆಸ್ ವಿನಾಕಾರಣ ಕಾಮಗಾರಿ ಬಗ್ಗೆ ಅಪಪ್ರಚಾರ ಮಾಡುತ್ತಿದೆ ಎಂದು ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಸ್ತೆ ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿದ ಅವರು ರಸ್ತೆ ಕಾಮಗಾರಿ ನಡೆಸುವ ಸಂದರ್ಭ ಗ್ರಾಮಸ್ಥರು ಹಾಗೂ ಸ್ಥಳೀಯ ಯುವಕರು ಸ್ಥಳದಲ್ಲೇ ಹಾಜರಿದ್ದು, ಗುಣಮಟ್ಟದ ಕಾಮಗಾರಿ ನಡೆಯುವಂತೆ ನೋಡಿಕೊಂಡಿದ್ದಾರೆ. ಹೀಗಿದ್ದರೂ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ರಸ್ತೆಯ ಗುಣಮಟ್ಟದ ಕುರಿತಂತೆ ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವುದು ಹಾಸ್ಯಸ್ಪದ ಎಂದರು.

ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸದ ಕಾಂಗ್ರೆಸ್‌ನವರು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಇದೊಂದು ಚುನಾವಣಾ ಗಿಮಿಕ್ ಅಷ್ಟೇ. ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಯಾರನ್ನೋ ಮೆಚ್ಚಿಸುವ ಸಲುವಾಗಿ ದುರುದ್ದೇಶಪೂರಿತವಾಗಿ ಕಾಮಗಾರಿ ಬಗ್ಗೆ ಆರೋಪ ಮಾಡಲಾಗುತ್ತಿದೆ. ತಪ್ಪುಗಳಾದಾಗ ಅವುಗಳನ್ನು ಸರಿಪಡಿಸಿಕೊಳ್ಳಬಹುದು, ಆದರೆ ಪ್ರಚಾರಕ್ಕಾಗಿ ಈ ರೀತಿ ಮಾಡುವುದು ಸಣ್ಣತನದ ಪ್ರವೃತ್ತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಮಾಧ್ಯಮ ಪ್ರಮುಖ್ ಸುಬ್ರಮಣ್ಯ ಉಪಾಧ್ಯಯ, ಪಯಸ್ವಿನಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅನಂತೇಶ್ವರ, ನಿರ್ದೇಶಕ ಸಣ್ಣಮನೆ ದಿನೇಶ್, ಗ್ರಾ.ಪಂ ಸದಸ್ಯರಾದ ರಮೇಶ್, ಉರುಬೈಲು ವಸಂತ, ಪಕ್ಷದ ಬೂತ್ ಸಮಿತಿ ಅಧ್ಯಕ್ಷ ನಡುಬೆಟ್ಟು ಪ್ರಶಾಂತ್ ಹಾಗೂ ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು.

ಇದೇ ಸಂದರ್ಭ ಚೆಂಬು ಗ್ರಾ.ಪಂ ವ್ಯಾಪ್ತಿಯ ದಬ್ಬಡ್ಕದಲ್ಲಿ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ರೂ.1 ಕೋಟಿ ವೆಚ್ಚದ ಶುದ್ಧ ಕುಡಿಯುವ ನೀರಿನ ಕಾಮಗಾರಿಗೆ ಶಾಸಕ ಕೆ.ಜಿ.ಬೋಪಯ್ಯ ಭೂಮಿಪೂಜೆ ನೆರವೇರಿಸಿದರು.

ಮಾಜಿ ಸಚಿವ ಈಶ್ವರಪ್ಪ ವಿರುದ್ಧ ದೂರು

ಮಡಿಕೇರಿ, ಮಾ.14– ಗೋಣಿಕೊಪ್ಪದಲ್ಲಿ ಮಾ.11ರಂದು ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಬಿಜೆಪಿ ಮುಖಂಡ, ಶಾಸಕ ಕೆ.ಎಸ್.ಈಶ್ವರಪ್ಪ ಅವರು ಒಂದು ಕೋಮಿನ ವಿರುದ್ಧ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಂ.ಗಣೇಶ್ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಈಶ್ವರಪ್ಪ ಅವರ ಭಾಷಣದಿಂದ ಒಂದು ಕೋಮಿನ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ. ಹೀಗಾಗಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮಾತ್ರವಲ್ಲದೇ ಕಾರ್ಯಕ್ರಮದ ಪ್ರಚಾರಕ್ಕಾಗಿ ಬಿಜೆಪಿ ನಾಯಕರ ಫ್ಲೆಕ್ಸ್ ಅನ್ನು ರಸ್ತೆ ಬದಿಯಲ್ಲಿ ಅಳವಡಿಸುವ ಸಂದರ್ಭ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಲಾಗಿದೆ ಎಂದು ಜಿಲ್ಲಾ ಜೆಡಿಎಸ್ ದೂರು ನೀಡಿದೆ. ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಕಾರ್ಯಕ್ರಮ ಆಯೋಜಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜೆಡಿಎಸ್ ಪ್ರಮುಖರು ಆಗ್ರಹಿಸಿದ್ದಾರೆ.

ದಿವ್ಯಲಿಂಗೇಶ್ವರ ವಿಜೃಂಭಣೆ ರಥೋತ್ಸವ



ಚಾಮರಾಜನಗರ, ಮಾ. 14– ಭಕ್ತಾದಿಗಳ ಜಯಘೋಷದೊಡನೆ ಇತಿಹಾಸ ಪ್ರಸಿದ್ಧ ತಾಲೂಕಿನ ಹರದನಹಳ್ಳಿಯ ಕಾಮಾಕ್ಷಾಂಭ ಸಮೇತ ದಿವ್ಯಲಿಂಗೇಶ್ವರ ರಥೋತ್ಸವವು ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಕಳೆದ ಮೂರ್‍ನಾಲ್ಕು ದಿನಗಳಿಂದಲೇ ದೇವಸ್ಥಾನದಲ್ಲಿ ವಿವಿಧ ಪೂಜಾ ಮಹೋತ್ಸವಗಳು ನಡೆದಿದ್ದವು. ಸೋಮವಾರ ಸಂಜೆ ಗಿರಿಜ ಕಲ್ಯಾಣ ಮಹೋತ್ಸವವು ಅದ್ಧೂರಿಯಿಂದ ನಡೆಯಿತು.

ಮಂಗಳವಾರ ಬೆಳಗ್ಗೆಯಿಂದಲೇ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು. ದೇವರ ದರ್ಶನ ಮಾಡಿ ಬಂದ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು.

ಮಂಗಳವಾರ ಬೆಳಗ್ಗೆ 11–30 ಗಂಟೆಯ ನಂತರ ಕಾಮಾಕ್ಷಾಂಬ ಸಮೇತ ದಿವ್ಯಲಿಂಗೇಶ್ವರರ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ, ದೇವಸ್ಥಾನದ ಸುತ್ತ ಮೂರು ಪ್ರದಕ್ಷಿಣಿ ಹಾಕಿ 12–30 ಗಂಟೆಯ ನಂತರ ರಥದಲ್ಲಿ ಬಿಜಂಗೈಯಿಸಲಾಯಿತು. ಮಹಾ ಮಂಗಳಾರತಿ ನಂತರ ಗ್ರಾಮದ ವಿವಿಧ ಕೋಮಿನ ಯಜಮಾನರುಗಳು ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆಯುತ್ತಿದ್ದಂತೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ವಿವಿಧ ಜಾನಪದ ಕಲಾತಂಡಗಳಾದ, ನಂದಿಧ್ವಜ, ನಾದಸ್ವರ, ಡೊಳ್ಳು ಕುಣಿತ, ಗೊರವರ ಕುಣಿತ, ಕಂಸಾಳೆ ತಂಡ, ದೊಣ್ಣೆ ವರಸೆ, ಹುಲಿವೇಷ ಕುಣಿತ ಸೇರಿದಂತೆ ವಿವಿಧ ತಂಡಗಳು ರಥೋತ್ಸವಕ್ಕೆ ಮೆರುಗು ತಂದವು.

ಕಲಾ ತಂಡಗಳೊಂದಿಗೆ ಯುವಕರ ತಂಡ ಕುಣಿಯುತ್ತ ಸಾಗಿದರೆ, ರಥೋತ್ಸವ ಸಾಗುವ ರಸ್ತೆಯುದ್ದಕ್ಕೂ ಮಹಿಳೆಯರು ಪೂಜಾ ಸಾಮಗ್ರಿ ಹಿಡಿದು, ರಥಕ್ಕೆ ಪೂಜೆ ಸಲ್ಲಿಸಿದರು, ಬೀದಿಯುದ್ದಕ್ಕೂ ಭಕ್ತರು ಪಾನಕ, ಮಜ್ಜಿಗೆ, ಕೋಸುಂಬರಿ, ಪಂಚಾಮೃತವನ್ನು ವಿತರಿಸಿದರು. ರಾಜ್ಯದ ಮೂಲೆಗಳಿಂದ ಮತ್ತು ತಮಿಳನಾಡಿನಿಂದ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದು ರಥೋತ್ಸವದಲ್ಲಿ ಪಾಲ್ಗೊಂಡರು. ಚಾಮರಾಜಗರದಿಂದ ಅರ್ಚ ಕರ ತಂಡ ಪೂಜೆ ಕೈಕಂರ್ಯಗಳನ್ನು ನೆರವೇರಿಸಿದರು, ರಥೋತ್ಸವದ ಅಂಗವಾಗಿ ದೇವಸ್ಥಾನ ಮತ್ತು ಆವರಣವನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಗ್ರಾಮದ ವಿವಿಧ ಕೋಮಿನ ಯಜಮಾನರು, ಮುಜರಾಯಿ ಇಲಾಖೆಯವರು ಮುಂದೆ ನಿಂತು ರಥೋತ್ಸವವನ್ನು ಯಶಸ್ವಿಗೊಳಿಸಿದರು.

ಧೃವನಾರಾಯಣ್ ಕಳೆದುಕೊಂಡು ಕಾಂಗ್ರೆಸ್ ಅನಾಥ

ಶ್ರದ್ಧಾಂಜಲಿ ಸಭೆಯಲ್ಲಿ ಹೆಚ್.ಎಂ.ಗಣೇಶ್‌ಪ್ರಸಾದ್

ಗುಂಡ್ಲುಪೇಟೆ, ಮಾ.14– ಸರಳ ಸಜ್ಜನಿಕೆ ಹಾಗೂ ಪ್ರಾಮಾಣಿಕ ಹಿರಿಯ ರಾಜಕಾರಣಿ ಧೃವನಾರಾಯಣ್ ಅವರನ್ನು ಕಾಂಗ್ರೆಸ್ ಕಳೆದುಕೊಂಡು ಅನಾಥವಾಗಿದೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ಎಂ. ಗಣೇಶ್‌ಪ್ರಸಾದ್ ಅಭಿಪ್ರಾಯಪಟ್ಟರು.

ಇತ್ತೀಚಿಗೆ ನಿಧನರಾದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಿಗೆ ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್ ವತಿಯಿಂದ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸದರಾಗಿ ಅತ್ಯುತ್ತಮ ಸಂಸದೀಯಪಟು ಎಂದು ಹೆಸರಾಗಿದ್ದ ಧ್ರುವನಾರಾಯಣ್ ಅಜಾತಶತ್ರುವಾಗಿದ್ದರು. ಜಿಲ್ಲೆ ಹಾಗೂ ರಾಜ್ಯದಲ್ಲಿ ಪ್ರಭಾವಿ ನಾಯಕರಾಗಿದ್ದ ಮಾಜಿ ಸಚಿವ ಮಹದೇವಪ್ರಸಾದ್ ಆಕಸ್ಮಿಕ ನಿಧನದಿಂದ ಕಾಂಗ್ರೆಸ್‌ಗೆ ದೊಡ್ಡ ಆಘಾತವುಂಟಾಗಿತ್ತು. ಆ ಕೊರತೆಯನ್ನು ತುಂಬಲು ಧ್ರುವನಾರಾಯಣ್ ಹಗಲಿರುಳು ಶ್ರಮಿಸುತ್ತಿದ್ದರು. ಆದರೆ ಅವರ ಅಕಾಲಿಕ ಮರಣ ಕಾಂಗ್ರೆಸ್ ಪಾಲಿಗೆ ದೊಡ್ಡ ನಷ್ಟವಾಗಿದೆ. ಯಾವ ಕಾಯಿಲೆಗಳು ಇಲ್ಲದೆ ಯಾವಾಗಲು ಶಿಸ್ತಿನಿಂದ ಧ್ರುವನಾರಾಯಣ್ ಇದ್ದರು. ಅವರ ನಿಧನ ನಂಬಲು ಸಾಧ್ಯವಿಲ್ಲ



ಯಾವಾಗಲೂ ಕಾರ್ಯಕರ್ತರು, ಪಕ್ಷ ಮುಖ್ಯ ಎನ್ನುತ್ತಿದ್ದರು ಎಂದು ಸ್ಮರಿಸಿದರು.

ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್, ಹೆಚ್.ಎಸ್.ನಂಜಪ್ಪ, ಮಾಜಿ ಸಂಸದ ಎ.ಸಿದ್ದರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಎಂ.ಮುನಿರಾಜು, ಪಿ.ಬಿ.ರಾಜಶೇಖರ್, ಪ್ರಧಾನ ಕಾರ್ಯದರ್ಶಿ ಬಿ.ಕುಮಾರಸ್ವಾಮಿ, ಸುರೇಂದ್ರ ಮುಖಂಡರಾದ ಹಾಲಹಳ್ಳಿ ಬಸವರಾಜು, ಕೆರೆಹಳ್ಳಿ ನವೀನ್, ಚನ್ನಪ್ಪ, ಬೊಮ್ಮಯ್ಯ ಸೇರಿದಂತೆ ವಿವಿಧ ಘಟಕಗಳ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಿದ್ದರು.

ಆನೆ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಪಾರಾದ ಸವಾರ





ಚಾಮರಾಜನಗರ, ಮಾ.14– ಬೈಕ್ ಸವಾರರೊಬ್ಬರು ಆನೆ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಪಾರಾಗಿರುವ ಘಟನೆ ತಾಲೂಕಿನ ಗಡಿಭಾಗ ತಾಳವಾಡಿ–ತಲೆಮಲೆ–ದಿಂಬಂ ರಸ್ತೆಯಲ್ಲಿ ಸಂಭವಿಸಿದೆ. ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸೋಮವಾರ ಸಂಜೆ ಈ ಘಟನೆ ನಡೆದಿದೆ ಎಂದು ಹೇಳಲಾಗಿದ್ದು, ಅದೇ ರಸ್ತೆಯಲ್ಲಿ ಹೋಗುತ್ತಿದ್ದ ಕಾರೊಂದರಲ್ಲಿದ್ದವರು ಘಟನೆಯನ್ನು ವೀಡಿಯೋ ಮಾಡಿದ್ದಾರೆ. ಪ್ರಾಣಾಪಾಯದಿಂದ ಪಾರಾದ ಸವಾರರನ್ನು ತಾಳವಾಡಿ ಸಮೀಪದ ನೈತಾಳಪುರದ ರಾಮಸ್ವಾಮಿ ಎಂದು ಗುರುತಿಸಲಾಗಿದೆ.

ವಿಡಿಯೊದಲ್ಲೇನಿದೆ?: ರಾಮಸ್ವಾಮಿ ಅವರು ಬೈಕ್‌ನಲ್ಲಿ ತಾಳವಾಡಿಯತ್ತ ಬರುತ್ತಿದ್ದರು. ರಸ್ತೆಯ ತಿರುವಿನಲ್ಲಿ ಆನೆಯೊಂದು ಎದುರಾಗಿದ್ದು, ಅದರಿಂದ ಪಾರಾಗಲು ಬೈಕ್‌ನ್ನು ತಿರುಗಿಸಿಕೊಂಡು ಮುಂದೆ ಬಂದಾಗ ಗಾಬರಿಗೊಂಡು ರಸ್ತೆ ಬದಿಯಲ್ಲಿ ಉರುಳಿ ಬಿದ್ದರು. ಆನೆ ಅವರತ್ತ ನುಗ್ಗಲು ಮುಂದಾಯಿತು.

ಈ ಸಂದರ್ಭದಲ್ಲಿ ಕಾರಿನಲ್ಲಿದ್ದವರು ಜೋರಾಗಿ ಹಾರನ್ ಮಾಡಿ, ಚೀರಾಡಿದರು. ಗದ್ದಲದಿಂದಾಗಿ ಆನೆ ನಿಂತಲ್ಲೇ ನಿಂತಿತು. ಕಾರಿನಿಂದ ಇಳಿದ ವ್ಯಕ್ತಿಯೊಬ್ಬರು ರಾಮಸ್ವಾಮಿಯವರನ್ನು ಕರೆದುಕೊಂಡು ಬಂದು ತಮ್ಮ ಕಾರಿನಲ್ಲಿ ಕೂರಿಸಿದರು. ಸ್ವಲ್ಪ ಹೊತ್ತಿನ ನಂತರ ಆನೆ ಅಲ್ಲಿಂದ ಹೊರಟು ಹೋಗುವ ದೃಶ್ಯ ವಿಡಿಯೊದಲ್ಲಿದೆ.

ಧ್ರುವನಾರಾಯಣಗೆ ಶ್ರದ್ಧಾಂಜಲಿ



ಚಾಮರಾಜನಗರ, ಮಾ.14– ಧ್ರುವನಾರಾಯಣ ಅವರ ಅಕಾಲಿಕ ಮರಣ ಜಿಲ್ಲೆಗೆ ದೊಡ್ಡ ದುರಂತವಾಗಿದೆ ಎಂದು ಪಿಯು ಡಿಡಿ ಮಂಜುನಾಥ ಪ್ರಸನ್ನ ತಿಳಿಸಿದರು.

ನಗರದ ನ್ಯಾಯಾಲಯ ರಸ್ತೆಯಲ್ಲಿ ಇರುವ ಶ್ರೀ ರಾಮಚಂದ್ರ ವಿದ್ಯಾಸಂಸ್ಥೆಯ ಆವರಣದಲ್ಲಿ ಚಾಮರಾಜನಗರ ಜಿಲ್ಲಾ ಪರಿಶಿಷ್ಠ ಜಾತಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಜಿಲ್ಲೆಯ ಅಭಿವೃದ್ದಿಗೆ ಧ್ರುವನಾರಾಯಣ ಅವರ ಕೊಡುಗೆ ಅಪಾರವಾಗಿದೆ. ಶೈಕ್ಷಣಿಕವಾಗಿ ಬದ್ದತೆ ಹಾಗೂ ಇತಾಶಕ್ತಿಯನ್ನು ಹೊಂದಿದ್ದವರು ಕೇಂದ್ರೀಯ ವಿದ್ಯಾಲಯ ಶಾಲೆ, ಕೃಷಿ ವಿಶ್ವ ವಿದ್ಯಾನಿಲಯ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಕಲಾ ಕಾಲೇಜು ಈಗೆ ಅನೇಕ ಶೈಕ್ಷಣಿಕ ಬೆಳವಣಿಗೆಗೆ ಒತ್ತಾಸೆಯಾಗಿದ್ದರು. ಶ್ರೀಯುತ ಸ್ವಭಾವ ಗುಣ ನಡವಳಿಕೆಗಳು ಸಾರ್ವಜನಿಕ ಜೀವನದಲ್ಲಿರುವವರಿಗೆ ಮಾದರಿಯಾಗಿದೆ ಎಂದು ತಿಳಿಸಿದರು. ಉಪನ್ಯಾಸಕ ಶ್ರೀಕಂಠಸ್ವಾಮಿ ಮಾತನಾಡಿ, ಧ್ರುವನಾರಾಯಣ ಅವರು ಬಾಲ್ಯದಿಂದಲು ಶಿಸ್ತು ಬದ್ದ ಜೀವನ ನಡೆಸಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಕಾರ್ಯದರ್ಶಿ ಮಹದೇವಸ್ವಾಮಿ, ನೌಕರರ ಸಂಘದ ಎಂ.ಡಿ. ಮಹದೇವಯ್ಯ, ರಾಚಯ್ಯ, ಪ.ಜ.ಶಿಕ್ಷಕರ ಕ್ಷೇಮಾಭಿವೃದ್ದಿ ಸಂಘದ ಜಿಲ್ಲಾಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ನಂಜುಂಡಸ್ವಾಮಿ, ಕೃಷ್ಣಮೂರ್ತಿ, ನಂಜುಂಡಯ್ಯ, ಎನ್.ಎಸ್. ಮಹದೇವಸ್ವಾಮಿ, ಲೋಕೇಶ್, ಶಿವರಾಜು, ಸೋಮಶೇಖರ್, ತ್ಯಾಗರಾಜು, ನಂದಿನಿ, ಪುಟ್ಟಸ್ವಾಮಿ, ರಾಜು.ಎಸ್.ಜಿ, ಶಾಂತರಾಜು, ಮುರುಗೇಶ್‌ಕುಮಾರ್, ಶಿವಮೂರ್ತಿ, ಮಹದೇವಸ್ವಾಮಿ, ರವಿ ಅರಸು, ಈಶ್ವರ್ ಹಾಗೂ ಮುಂತಾದವರು ಹಾಜರಿದ್ದರು.

ಕಟಾವು ಕಬ್ಬನ್ನು ತೂಕ ಹಾಕಲು ಒತ್ತಾಯಿಸಿ ಪ್ರತಿಭಟನೆ




ಚಾಮರಾಜನಗರ, ಮಾ.14– ಕಟಾವು ಮಾಡಿರುವ ಕಬ್ಬನ್ನು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಿಂದ ತುರ್ತು ತೂಕ ಹಾಕಬೇಕು. ಕಟಾವು ಆಗಿರುವ ದಿನದಿಂದ ಇಂದಿನ ತೂಕದವರಗೆ ಆಗುವ ನಷ್ಟ ಭರಿಸ ಬೇಕು ಎಂದು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆ ಗಾರರ ಸಂಘ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯ ಗೇಟ್ ಮುಂಭಾಗದಲ್ಲಿ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಅವರ ನೇತೃತ್ವದಲ್ಲಿ ಜಮಾಯಿಸಿದ್ದ ರೈತರು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನದ ಮುಂಭಾಗಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಂತರ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ಮಾಲೀಕರ ಹೋರಾಟದಲ್ಲಿ ರೈತರ ಕಟಾವು ಆಗಿರುವ ಸುಮಾರು ಎಂಟು ಸಾವಿರ ಟನ್ ಕಬ್ಬು ರಸ್ತೆ ಬೀದಿ, ಜಮೀನುಗಳಲ್ಲಿ, ಕಾರ್ಖಾನೆ ಪ್ರಾಂಗಣದಲ್ಲಿ ಬಿದ್ದಿದೆ. ಇದು ತುರ್ತು ತೂಕ ಹಾಕಬೇಕು. ಕಟಾವಾಗಿ ರುವ ದಿನದಿಂದ ಇಂದಿನ ತೂಕದವರಗೆ ಆಗುವ ನಷ್ಟದ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಕಬ್ಬಿನ ತೂಕದ ನಷ್ಟಕ್ಕೆ ವೈಜ್ಞಾನಿಕ ಪರಿಹಾರವನ್ನು ಕಾರ್ಖಾನೆ ಭರಿಸಬೇಕು. ಕಟಾವಿಗೆ ಬಂದಿರುವ ಸುಮಾರು ನಾಲ್ಕರಿಂದ ಐದು ಸಾವಿರ ಎಕರೆ ಕಬ್ಬು ಪ್ರದೇಶ ಬಾಕಿಯಿದ್ದು, ಇದರ ವಿಳಂಬ ಕಟಾವಿಗೆ ನಷ್ಟ ಪರಿಹಾರ ಭರಿಸಲು ಕ್ರಮಕೈಗೊಳ್ಳಬೇಕು. ತಕ್ಷಣವೇ ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಹಾಲಿ ಇರುವ ಕಬ್ಬನ್ನು ಬೇರೆ ಕಾರ್ಖಾನೆಗಳಿಗೆ ಅರೆಯಲು ಕ್ರಮವಹಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಹಾಲಿನ ನಾಗರಾಜು, ಹಾಡ್ಯರವಿ, ಹೊಮ್ಮದ ಎಚ್.ಬಿ. ಬಸವಣ್ಣ, ಕುರುಬೂರು ಸಿದ್ದೇಶ್, ಗೌರಿಶಂಕರ್, ಗುರುಸ್ವಾಮಿ, ತೆಳ್ಳನೂರು ನಾಗೇಂದ್ರ, ನಂಜುಂಡ ಶೆಟ್ಟಿ, ಸತೀಶ್, ಬಾಣಹಳ್ಳಿ ಪ್ರಭುಸ್ವಾಮಿ, ಕುಮಾರ್, ಅಂಬಳೆ ಮಂಜುನಾಥ್, ಮುದ್ದಹಳ್ಳಿ ಶಿವಣ್ಣ ಮಲೆಯೂರು ಬಸವರಾಜಪ್ಪ ಹರ್ಷ, ಪ್ರಕಾಶ್ ಉಡಿಗಾಲ, ರೇವಣ್ಣ ಇದ್ದರು.




ಬಡಗಲಪುರ ಬಳಿ ಹುಲಿ ದಾಳಿ: ಎತ್ತಿಗೆ ಗಾಯ

ಚಾಮರಾಜನಗರ, ಮಾ.14– ತಾಲೂಕಿನ ಬಡಗಲಪುರ ಗ್ರಾಮ ಸಮೀಪದ ಎಣ್ಣೆಹೊಳೆ ಬೆಟ್ಟದಲ್ಲಿ ಸೋಮವಾರ ಸಂಜೆ ಹುಲಿಯೊಂದು ಎತ್ತಿನ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. ಎತ್ತಿನ ಎಡಕಾಲಿಗೆ ತೀವ್ರ ಗಾಯವಾಗಿದೆ.

ಗ್ರಾಮದ ಮಹದೇವೇಗೌಡರಿಗೆ ಸೇರಿದ ಎತ್ತನ್ನು ಎಣ್ಣೆಹೊಳೆಬೆಟ್ಟದ ಬಳಿ ಎತ್ತನ್ನು ಮೇಯಲು ಬಿಡಲಾಗಿತ್ತು. ಸಂಜೆ ಎಷ್ಟು ಹೊತ್ತಾದರೂ ಎತ್ತು ವಾಪಸ್ ಬಾರದೇ ಇದ್ದುದರಿಂದ ಹೋಗಿ ನೋಡಿದಾಗ ದಾಳಿ ನಡೆದಿರುವುದು ಗೊತ್ತಾಗಿದೆ. ಈ ಪ್ರದೇಶದಲ್ಲಿ ಹುಲಿಯೊಂದು ಆಗಾಗ ಗ್ರಾಮಸ್ಥರ ಕಣ್ಣಿಗೆ ಬೀಳುತ್ತಿದ್ದು, ಅದುವೇ ಎತ್ತಿನ ಮೇಲೆ ದಾಳಿ ನಡೆಸಿದೆ ಎಂದು ಗ್ರಾಮಸ್ಥ ವಿಶ್ವನಾಥ್ ತಿಳಿಸಿದರು.

ನಗರಸಭಾ ಮಾಜಿ ಉಪಾಧ್ಯಕ್ಷ ಸನಾಉಲ್ಲಾ ನಿಧನ



ಚಾಮರಾಜನಗರ, ಮಾ.14– ನಗರದ 12ನೇ ಕೆ.ಪಿ.ಮೊಹಲ್ಲಾದ ನಿವಾಸಿ, ನಗರಸಭಾ ಮಾಜಿ ಉಪಾಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡ ಸನಾಉಲ್ಲಾ (65) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಅನಾರೋಗ್ಯದಿಂದ ಬಳಲುತ್ತಿದ್ದು ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ ಕೊನೆಯುಸಿರುಳೆದಿದ್ದಾರೆ. ಮೃತರು ಆರು ಮಂದಿ ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮಂಗಳವಾರ ಸಂಜೆ ನಗರದ ಮೂಡಲಪುರ ರಸ್ತೆಯಲ್ಲಿರುವ ಖಬರ್ ಸ್ಥಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ವಿಶ್ವ ಮಹಿಳಾ ದಿನಾಚರಣೆ



ಮೈಸೂರು, ಮಾ.14(ಎಸ್‌ಪಿಎನ್)– ಮೈಸೂರಿನ ನೀಲಗಂಗಾ ಮಹಿಳಾ ಬಳಗದ ವತಿಯಿಂದ 'ವಿಶ್ವ ಮಹಿಳಾ ದಿನಾಚರಣೆ' ಯನ್ನು ಆಚರಣೆ ಮಾಡಲಾಯಿತು.

ಮೈಸೂರು ನ್ಯೂ ಕಾಂತ ರಾಜೇ ಅರಸ್ ರಸ್ತೆಯ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ ನೀಲಗಂಗಾ ಮಹಿಳಾ ಬಳಗದ ವತಿಯಿಂದ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಮಹಿಳಾ ಪದವಿ ಕಾಲೇಜು ಪ್ರಾಂಶುಪಾಲರಾದ ಪ್ರೊ.ರಾಜೇಶ್ವರಿ ಪಾಲ್ಗೊಂಡರು.

ಪ್ರತಿನಿತ್ಯ ಮಹಿಳೆಯರು ಹೊರಗೆ, ಒಳಗೆ ನಿರಂತರವಾಗಿ ದುಡಿಯುತ್ತಿದ್ದಾರೆ. ಪ್ರಸ್ತುತ ದಿನಗಳಲ್ಲಿ ತಮ್ಮ ಸಾಧನೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಹಾಗಾಗಿ ಎಲ್ಲಾ ಮಹಿಳೆಯರ ಸಾಧನೆಯನ್ನು ಗುರುತಿಸುವ ಜವಾಬ್ದಾರಿ ಮಹಿಳಾ ಸಂಘಟನೆಗಳದ್ದು ಎಂದರು.

ನಂತರ ಪ್ರಾಂಶುಪಾಲರಾದ ಪ್ರೊ.ರಾಜೇಶ್ವರಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ನೀಲಗಂಗಾ ಮಹಿಳಾ ಬಳಗದ ಅಧ್ಯಕ್ಷೆ ಮಂಗಳಾ ಮುದ್ದುಮಾದಪ್ಪ, ರಾಧ ನೀಲಕಂಠ, ಜಯಗೌಡ ಸೇರಿದಂತೆ ಇತರರಿದ್ದರು.

ಬೇಸಿಗೆ ಶಿಬಿರದಲ್ಲಿ ಕ್ರೀಡಾ ಚಟುವಟಿಕೆ

ಮೈಸೂರು, ಮಾ.14(ಎಸ್‌ಪಿಎನ್)–ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ಮತ್ತು ಜಿಲ್ಲಾ ಅಥ್ಲೇಟಿಕ್ಸ್, ಬಾಸ್ಕಟ್‌ಬಾಲ್, ಫುಟ್‌ಬಾಲ್ ಅಸೋಸಿಯೇಷನ್ ಸಹಯೋಗದೊಂದಿಗೆ 28ನೇ ಬೇಸಿಗೆ ಶಿಬಿರವನ್ನು ಏ.5ರಿಂದ ಮೇ.4 ರವರೆಗೆ ಹಮ್ಮಿಕೊಂಡಿದ್ದು, ಯುವ ವಿದ್ಯಾರ್ಥಿಗಳಿಗೆ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಯುವ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ಹನ್ನೆರಡು ಕ್ರೀಡಾ ಚಟುವಟಿಕೆಗಳನ್ನು ಒಂದು ತಿಂಗಳ ಅವಧಿಗೆ (ಬಾಲಕ–ಬಾಲಕಿಯರು) ಪರಿಣಿತ ತರಬೇತುದಾರರಿಂದ ಬೇಸಿಗೆ ಶಿಬಿರಗಳಲ್ಲಿ ಪ್ರೋತ್ಸಾಹಿಸಲಾಗುವುದು. ಆಸಕ್ತಿಯುಳ್ಳ ವಿದ್ಯಾರ್ಥಿಗಳು ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್ ಕಚೇರಿಯಿಂದ ಅರ್ಜಿಗಳನ್ನು ಮಾ.20ರಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅರ್ಹ ವೈದ್ಯಕೀಯ ತಪಾಸಣಾ ದೃಢೀಕರಣ ಪತ್ರದೊಂದಿಗೆ ನಿಗಧಿತ ಶುಲ್ಕದೊಂದಿಗೆ ಏ.3ರೊಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳು ಏ.5ರಂದು ಬೆಳಗ್ಗೆ 7 ಗಂಟೆಗೆ ಕ್ರೀಡಾ ಸಮವಸ್ತ್ರದೊಂದಿಗೆ ಹಾಜರಿರಬೇಕು.

ವಯೋಮಿತಿ ಮತ್ತು ಕ್ರೀಡೆಗಳ ವಿವರ: ಜಿಮ್ನಾಸ್ಟಿಕ್ಸ್‌ಗೆ 8ರಿಂದ 15ನೇ ವಯಸ್ಸಿನವರೆಗೆ, ಬ್ಯಾಡ್ಮಿಂಟನ್‌ಗೆ 12ರಿಂದ 16ನೇ ವಯಸ್ಸಿನವರೆಗೆ, ಇತರೆ ಕ್ರೀಡಾ ಚಟುವಟಿಕೆಗಳಿಗೆ 10ರಿಂದ 18ನೇ ವಯಸ್ಸಿನವರು ಅರ್ಜಿ ಸಲ್ಲಿಸಬಹುದು. ಅಲ್ಲದೆ ಈ ಶಿಬಿರದಲ್ಲಿ ಅಥ್ಲೇಟಿಕ್ಸ್, ಬ್ಯಾಡ್ಮಿಂಟನ್(ಷಟಲ್), ಬ್ಯಾಸ್ಕೆಟ್‌ಬಾಲ್, ಕ್ರಿಕೆಟ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕಬಡ್ಡಿ, ವಾಲಿಬಾಲ್, ಕುಸ್ತಿ, ಯೋಗ, ಕಿಕ್‌ಬಾಕ್ಸಿಂಗ್ ಕ್ರೀಡೆಗಳ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು–ಬೆಂಗಳೂರು ಹೆದ್ದಾರಿ ಲೋಕಾರ್ಪಣೆಗೆ ತೆರಳುವ ಮುನ್ನ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ಟಿ.ರಮೇಶ್, ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಮೇಶ್, ಮೈಸೂರು ಜಿಲ್ಲಾ ಕಾರ್ಯಾಲಯದ ಕಾರ್ಯದರ್ಶಿ ಪಾಪಣ್ಣ, ರಾಜ್ಯ ಸಹಕಾರ ಪ್ರಕೋಷ್ಟ ಸದಸ್ಯ ಎಸ್.ಶ್ರೀನಿವಾಸ್ ಸ್ವಾಗತಿಸಿದರು.

ಮಗನಿಗಾಗಿ ಶಿಕಾರಿಪುರ ಕ್ಷೇತ್ರ ತ್ಯಾಗ: ಬಿಎಸ್‌ವೈ ಹೇಳಿಕೆಗೆ ಸಿ.ಟಿ.ರವಿ ಕೆಂಡ

ವಿಜಯಪುರ, ಮಾ.14– ಶಿಕಾರಿಪುರ ವಿಧಾನಸಭಾ ಕ್ಷೇತ್ರವನ್ನು ತನ್ನ ಮಗನಿಗಾಗಿ ಬಿಟ್ಟು ಕೊಡುವುದಾಗಿ ಬಿ.ಎಸ್.ಯಡಿಯೂರಪ್ಪ ಘೋಷಿಸಿರುವುದನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಆಕ್ಷೇಪಿಸಿದ್ದಾರೆ. ಚುನಾವಣೆಯಲ್ಲಿ



ಯಾರಿಗೆ ಟಿಕೆಟ್ ನೀಡಬೇಕು ಎಂಬುದು ಮನೆಯಲ್ಲಿ ನಿರ್ಧಾರವಾಗಲ್ಲ ಎಂದಿದ್ದಾರೆ.

ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಟಿ.ರವಿ, ಟಿಕೆಟ್ ನೀಡುವ ಬಗ್ಗೆ ಕುಟುಂಬದಲ್ಲಿ ತೀರ್ಮಾನ ವಾಗುವುದಿಲ್ಲ, ಸಂಸದೀಯ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗುತ್ತದೆ.ನಮ್ಮ ಪಕ್ಷದಲ್ಲಿ ಕಿಚನ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಲ್ಲ. ನಾಯಕರ ಮಕ್ಕಳೆಂದ ಕಾರಣಕ್ಕೆ ಅವರಿಗೆ ಟಿಕೆಟ್ ಸಿಕ್ಕಲ್ಲ. ಈಗ ವಿಜಯೇಂದ್ರ ಬಗ್ಗೆ ಕೇಳಿದ್ದೀರಿ. ಅವರಿಗೆ ಟಿಕೆಟ್ ನೀಡುವ ನಿರ್ಧಾರವನ್ನು ಸಂಸದೀಯ ಮಂಡಳಿ ತೆಗೆದುಕೊಳ್ಳುತ್ತದೆ. ಸಮೀಕ್ಷೆಯ ಆಧಾರದ ಮೇಲೆ ಗೆಲ್ಲುವ ಮಾನದಂಡದ ಆಧರಿಸಿ ಟಿಕೆಟ್ ನೀಡುವ ಕುರಿತು ನಿರ್ಧರಿಸಲಾಗುತ್ತದೆ. ಆದರೆ ಕುಟುಂಬದಲ್ಲಿ ಸಮೀಕ್ಷೆ ನಡೆಯುವುದಿಲ್ಲ ಎಂದರು. ಇಡೀ ಪಕ್ಷ ಮತ್ತು ಇಡೀ ಸರ್ಕಾರವನ್ನು ಮನವರಿಕೆ ಮಾಡಿ ಟಿಕೆಟ್ ಪಡೆಯಲು ಸಾಧ್ಯವಿಲ್ಲ, ಇಂದಿರಾ ಗಾಂಧಿ ಅವರ ಮಗ ರಾಜೀವ್ ಗಾಂಧಿ ಹೇಗೆ ಪ್ರಧಾನಿಯಾದರೋ, ಅಂತಹ ಅವಕಾಶ ಇಲ್ಲಿ ನಡೆಯುವುದಿಲ್ಲ, ಟಿಕೆಟ್ ನೀಡುವ ನಿರ್ಧಾರ ಕುಟುಂಬದಲ್ಲಿ ಆಗಲ್ಲ ಎಂದು ಸಿಟಿ ರವಿ ಹೇಳಿದರು.

ಇತ್ತೀಚೆಗೆ ವಾಹಿನಿಯೊಂದಕ್ಕೆ ನೀಡಿದ ವಿಶೇಷ ಸಂದರ್ಶದಲ್ಲಿ ತಾನು ಚುನಾವಣಾ ರಾಜಕೀಯದಿಂದ ನಿವೃತ್ತರಾದ ನಂತರ ತಮ್ಮ ಕಿರಿಯ ಪುತ್ರ ವಿಜಯೇಂದ್ರ ಅವರು 2023 ರ ಚುನಾವಣೆಯಲ್ಲಿ ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ ಬಿಎಸ್ ಯಡಿಯೂರಪ್ಪ ಹೇಳಿದ್ದರು.



ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸುರಕ್ಷತಾ ಅಧಿಕಾರಿ ಮಮತಾ ಅವರನ್ನು ಸನ್ಮಾನಿಸಲಾಯಿತು ಈ ಸಂದರ್ಭದಲ್ಲಿ ಮುಖಂಡರಾದ ನಾಗೇಶ್, ಶ್ರೀನಿವಾಸ್, ವಿಜ್ಞೇಶ್ವರ ಭಟ್, ಮಂಜುನಾಥ್, ಕಾಂತಿಲಾಲ್, ನವೀನ್ ಇತರರು ಉಪಸ್ಥಿತರಿದ್ದರು.

ಮೈಸೂರು ಲಕ್ಷ್ಮೀ ಟಾಕೀಸ್ ಕಟ್ಟಡ ನೆಲಸಮ ಕಾರ್ಯ ಆರಂಭ

ಒಂದೊಂದಾಗಿ ಇತಿಹಾಸದ ಪುಟ ಸೇರುತ್ತಿರುವ ಮೈಸೂರಿನ ಸಿನಿಮಾ ಮಂದಿರಗಳು

ನಾರಾಯಣಶಾಸ್ತ್ರಿ ರಸ್ತೆಯ ಶಾಂತಲ, ಸರಸ್ವತಿಪುರಂನ ಸರಸ್ವತಿ, ಮಂಡಿ ಮೊಹಲ್ಲಾದ ಶ್ರೀ ನಾಗರಾಜ ಟಾಕೀಸ್‌ಗಳಲ್ಲಿ ಚಿತ್ರ ಪ್ರದರ್ಶನ ಸ್ಥಗಿತಗೊಂಡಿದೆ. ಶ್ರೀ ಹರ್ಷ ರಸ್ತೆಯ ಒಪೇರಾ, ಬಿ.ಎನ್.ರಸ್ತೆಯ ರಣಜಿತ್ ಚಿತ್ರಮಂದಿರಗಳ ಕಟ್ಟಡವನ್ನೇ ನೆಲಸಮಗೊಳಿಸಲಾಗಿದೆ. ತಂತ್ರಜ್ಞಾನ ಬೆಳೆಯುತ್ತಿದ್ದಂತೆಯೇ ಅಂಗೈನಲ್ಲೇ ಸಿನೆಮಾ ನೋಡುವ ಅವಕಾಶ ಲಭಿಸಿರುವುದರಿಂದ ಥಿಯೇಟರ್‌ಗಳಿಗೆ ಬಂದು ಗಂಟೆಗಟ್ಟಲೆ ಕುಳಿತು ಸಿನೆಮಾ ನೋಡಲು ಜನರು ಮನಸ್ಸು ಮಾಡದೇ ಇರುವುದರಿಂದ ಸಿನೆಮಾ ಮಂದಿರಗಳು ಬಂದ್ ಆಗುತ್ತಿವೆ.



ಕೋವಿಡ್ ಎರಡನೇ ಅಲೆಯಲ್ಲಿ ಲಾಕ್‌ಡೌನ್ ಆಗಿದ್ದಾಗ ನಿಂತಿದ್ದ ಚಿತ್ರ ಪ್ರದರ್ಶನ ಮತ್ತೆ ಆರಂಭಿಸಲಾಗಲಿಲ್ಲ. ಇನ್ನು ಮುಂದೆಯೂ ಸಿನೆಮಾ ಪ್ರದರ್ಶಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮನಗಂಡು ಕಟ್ಟಡವನ್ನು ಬೇರೆ ಉದ್ದೇಶಕ್ಕೆ ಬಳಸಬಹುದೇ ಎಂಬುದರ ಬಗ್ಗೆ ಯೋಚಿಸುತ್ತಿದ್ದೇನೆ.
-ಜಯಂತ್ ಸುಬ್ರಹ್ಮಣ್ಯಂ, ಲಕ್ಷ್ಮೀ ಟಾಕೀಸ್ ಮಾಲೀಕ





ಮೈಸೂರು, ಮಾ.14(ಆರ್‌ಕೆ)–ಸುಮಾರು 76 ವರ್ಷಗಳ ಇತಿಹಾಸವಿರುವ ಮೈಸೂರಿನ ಲಕ್ಷ್ಮೀ ಟಾಕೀಸ್ ಕಟ್ಟಡ ನೆಲಸಮಗೊಳಿಸುವ ಕಾರ್ಯ ಆರಂಭವಾಗಿದೆ

ಸಾಂಸ್ಕೃತಿಕ ನಗರಿ ಮೈಸೂರಿನ ಹೃದಯ ಭಾಗದ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸುಪ್ರಸಿದ್ಧ ಲಕ್ಷ್ಮೀ ಟಾಕೀಸ್, ಕೋವಿಡ್ ಎರಡನೇ ಅಲೆಯಲ್ಲಿ 2021ರ ಜೂನ್ ತಿಂಗಳಿಂದ ಚಿತ್ರ ಪ್ರದರ್ಶನ ಸ್ಥಗಿತಗೊಂಡಿತ್ತು

1949ರ ಏಪ್ರಿಲ್ 15ರಂದು ಉದ್ಘಾಟನೆಗೊಂಡಿದ್ದ ಲಕ್ಷ್ಮೀ ಚಿತ್ರಮಂದಿರದಲ್ಲಿ ಕನ್ನಡ, ತಮಿಳು, ತೆಲುಗು ಚಿತ್ರಗಳು ಪ್ರದರ್ಶನವಾಗಿದ್ದವು. 'ರಾಜ ನನ್ನ ರಾಜ' ಕನ್ನಡ ಸಿನೆಮಾ ಶತದಿನೋತ್ಸವ ಆಚರಿಸಿದ ಸಂದರ್ಭ ವರನಟ ಡಾ. ರಾಜಕುಮಾರ್ ಅವರು ಲಕ್ಷ್ಮೀ ಚಿತ್ರಮಂದಿರಕ್ಕೆ ಭೇಟಿ ನೀಡಿ ಅಭಿಮಾನಿಗಳ ಸಂತಸಕ್ಕೆ ಕಾರಣರಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ತಂದೆ ಶ್ರೀಕಂಠನ ನಂತರ ಮಗ ಜಯಂತ್ ಸುಬ್ರಹ್ಮಣ್ಯಂ ಅವರು ಚಿತ್ರಮಂದಿರವನ್ನು ಮುನ್ನಡೆಸಿಕೊಂಡು ಬಂದಿದ್ದರು. ಡಾ. ರಾಜ್‌ಕುಮಾರ್ ಅಭಿನಯದ ಸನಾದಿ ಅಪ್ಪಣ್ಣ, ನಾನೊಬ್ಬ ಕಳ್ಳ, ರಾಜ ನನ್ನ ರಾಜ, ಬಡವರ ಬಂಧು, ವಸಂತ ಗೀತ, ಜ್ವಾಲಾಮುಖಿ, ಜೀವನ ಚೈತ್ರ, ಡಾ. ವಿಷ್ಣುವರ್ಧನ್ ಅಭಿನಯದ ಬಂಧನ, ಆಪ್ತಮಿತ್ರ, ಆಪ್ತ ರಕ್ಷಕ, ಸಿಂಹಾದ್ರಿಯ ಸಿಂಹ, ಕೋಟಿಗೊಬ್ಬ, ಯಜಮಾನ, ಕಟ್ಟು-ಪಟ್ಟು, ಸೇರಿದಂತೆ ಹಲವು ಚಿತ್ರಗಳ ಪ್ರದರ್ಶನ ನೀಡಿದ್ದ ಲಕ್ಷ್ಮಿ ಟಾಕೀಸ್ ಈಗ ನೆನಪು ಮಾತ್ರ.

ಇದೀಗ ಲಕ್ಷ್ಮೀ ಟಾಕೀಸ್ ಕಟ್ಟಡದ ಛಾವಣಿ, ಪರದೆ, ಆಸನಗಳು, ಗೋಡೆಯ ಮರದ ಬೀಡಿಂಗ್‌ಗಳು, ಫ್ಯಾನ್, ಪ್ರೊಜೆಕ್ಟರ್ ಸೇರಿದಂತೆ ಅಳವಡಿಸಿರುವ ಎಲ್ಲಾ ವಸ್ತುಗಳನ್ನು ತೆರವುಗೊಳಿಸಲಾಗುತ್ತಿದ್ದು, ಅದನ್ನು ಬೇರೆ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಮಾಲೀಕರು ಮುಂದಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಟಾಕೀಸ್ ಉದ್ದೇಶಕ್ಕೆ ಅಳವಡಿಸಿರುವ ಪರದೆ, ಪ್ರೊಜೆಕ್ಷನ್ ಆಸನಗಳು, ಮರದ ಬೀಡಿಂಗ್, ಬಾಗಿಲು-ಕಿಟಕಿ, ಛಾವಣಿ ಸೇರಿದಂತೆ ಇನ್ನಿತರ ವಸ್ತುಗಳನ್ನು ತೆಗೆದು ಗುಜರಿಗೆ ಹಾಕುತ್ತಿದ್ದೇವೆ. ಕಟ್ಟಡವನ್ನು ಮಾತ್ರ ಯಥಾಸ್ಥಿತಿ ಉಳಿಸಿ ತಜ್ಞರ ಅಭಿಪ್ರಾಯ ಪಡೆದು ಅದನ್ನು ಪುನರುಜ್ಜೀವನಗೊಳಿಸಬೇಕೇ ಅಥವಾ ಕೆಡವಿ ಬೇರೆ ಕಟ್ಟಡ ನಿರ್ಮಿಸಬೇಕೇ ಎಂಬುದನ್ನು ನಿರ್ಧರಿಸುತ್ತೇವೆ ಎಂದರು.



ಮೈಸೂರಿನ ರಮ್ಮನಹಳ್ಳಿ ಗ್ರಾಮದಲ್ಲಿ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಗೆ ಮೈಸೂರು ನಗರಪಾಲಿಕೆ ಸದಸ್ಯೆ ಶೋಭ ಮೋಹನ್ ಹಾಗೂ ಮುಖಂಡ ಟೆನ್ನಿಸ್ ಗೋಪಿ ಚಾಲನೆ ನೀಡಿದರು. ಈ ವೇಳೆ ರಮ್ಮನಹಳ್ಳಿ ಸೋಮಣ್ಣ, ಗ್ರಾಮಸ್ಥರಿಂದ ಮುಖ್ಯ ಅತಿಥಿಗಳನ್ನು ಸನ್ಮಾನಿಸಲಾಯಿತು.

ಪಾಲಿಕೆಯಲ್ಲಿ ಕುಂದುಕೊರತೆ ನಿವಾರಣಾ ಸಮಿತಿ ರಚಿಸಲು ಅರ್ಜಿ ಆಹ್ವಾನ

ಮೈಸೂರು, ಮಾ.14– ನಗರ ಪಾಲಿಕೆಯಲ್ಲಿ ಕುಂದುಕೊರತೆ ನಿವಾರಣಾ ಸಮಿತಿ ರಚಿಸುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಮಾ.17 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಅಧ್ಯಕ್ಷರು (ಹುದ್ದೆ–1): ನಿವೃತ್ತ ಸಿವಿಲ್ ನ್ಯಾಯಾಧೀಶರಾಗಿರಬೇಕು, 65 ವರ್ಷದೊಳಗಿನ ವಯೋಮಾನದವರಾಗಿರಬೇಕು.

ಸ್ಥಳೀಯ ಸದಸ್ಯರು(ಹುದ್ದೆ–1): ರಾಜ್ಯ ಸರ್ಕಾರದ ನಿವೃತ್ತ 'ಎ' ದರ್ಜೆ ಅಧಿಕಾರಿಯಾಗಿರಬೇಕು. 65 ವರ್ಷದೊಳಗಿನ ವಯೋಮಾನದವರಾಗಿರ ಬೇಕು. ಸ್ಥಳೀಯ ಪ್ರದೇಶದ ಕಳಂಕ ರಹಿತ ಸೇವಾ ದಾಖಲೆಯುಳ್ಳವರಾಗಿರಬೇಕು.

ಸ್ಥಳೀಯ ಪ್ರದೇಶದಲ್ಲಿ ಬೀದಿ ಬದಿ ವ್ಯಾಪಾರಿ(ಹುದ್ದೆ–1): ಬೀದಿ ವ್ಯಾಪಾರವನ್ನೊಳಗೊಂಡ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ ಅನುಭವ ಹೊಂದಿರಬೇಕು. 65 ವರ್ಷದೊಳಗಿನ ವಯೋಮಾನದವರಾಗಿರಬೇಕು. ಸಾಮಾಜಿಕ ಕಾರ್ಯಕರ್ತರಾಗಿರಬೇಕು.

ಸಮಿತಿಯ ಅವಧಿಯು ಆದೇಶ ಹೊರಡಿಸಿದ ದಿನಾಂಕದಿಂದ ಐದು ವರ್ಷಗಳವರೆಗೆ ಇರುತ್ತದೆ. ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಂಡು, ಪ್ರತಿ ಬಾರಿಯು ಉಪವೇಶನಕ್ಕೆ ಎರಡು ಸಾವಿರದ ಐದು ನೂರು ರೂಪಾಯಿಗಳ ಗೌರವಧನವನ್ನು ಸಂದಾಯ ಮಾಡಲಾಗುವುದು. ಕುಂದು ಕೊರತೆ ನಿವಾರಣಾ ಸಮಿತಿಯ ಇತರೆ ಸದಸ್ಯರನ್ನು ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಂಡು, ಪ್ರತಿ ದಿನದ ಉಪವೇಶನಕ್ಕೆ ಒಂದು ಸಾವಿರ ರೂಪಾಯಿ ಗೌರವಧನವನ್ನು ಸಂದಾಯ ಮಾಡಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆಯ ನೋಡಲ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಿಂಗ್ ರಸ್ತೆಯಲ್ಲಿ ಸ್ವಚ್ಛತೆಯೇನೋ ಆಯ್ತು

ಈಗ ಅಪಾಯ ತಂದಿತ್ತರು!





ಮೈಸೂರು, ಮಾ.14(ಜಿಎ)– ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆದ ಸ್ವಚ್ಛತಾ ಅಭಿಯಾನ ಯಶಸ್ವಿ ಏನೋ ಆಯಿತು. ಆದರೆ, ಇಕ್ಕೆಲಗಳಲ್ಲಿ ತೆಗೆದ ಕಸವನ್ನು ಡಿವೈಡರ್ ಪಕ್ಕದಲ್ಲಿಯೇ ಗುಡ್ಡೆ ಹಾಕಿರುವುದು ಅಪಾಯಕ್ಕೆ ಆಹ್ವಾನ ನೀಡುವಂತಿದೆ.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಫೆ27ರಿಂದ ನಾಲ್ಕು ದಿನಗಳ ಕಾಲ ನಡೆದ ರಿಂಗ್ ರಸ್ತೆಯ ಸ್ವಚ್ಛತಾ ಅಭಿಯಾನವು ನಾಲ್ಕು ದಿನವೂ ತ್ವರಿತವಾಗಿ ನಡೆಯಿತು. ಆದರೆ, ಈಗ ಸ್ವಚ್ಛತೆಗೊಳಿಸಿದ ಕಸವನ್ನು ತೆರವುಗೊಳಿಸದೆ ರಸ್ತೆಯ ಡಿವೈಡರ್ ಪಕ್ಕದಲ್ಲಿಯೇ ಹಾಕಿದ್ದು, ಇದರಿಂದ ಯಾವ ಕ್ಷಣದಲ್ಲಾದರೂ ಅಪಾಯ ಸಂಭವಿಸುವ ಸಾಧ್ಯತೆ ಇದೆ.

ಸಂಸದ ಪ್ರತಾಪ್ ಸಿಂಹ ಅವರ ನೇತೃತ್ವದಲ್ಲಿ ಫೆ.24 ರಂದು ಮೈಸೂರು ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ರಿಂಗ್ ರಸ್ತೆಯಲ್ಲಿರುವ ಕಸವನ್ನು ತೆಗೆದು ಸ್ವಚ್ಛತೆಯನ್ನು ಕಾಪಾಡಬೇಕು ಎಂಬ ಉದ್ದೇಶದಿಂದ ನಾಲ್ಕು ದಿನಗಳು ಸ್ವಚ್ಛತಾ ಅಭಿಯಾನದ ಮೂಲಕ ಸುಂದರ ರಿಂಗ್ ರಸ್ತೆಯನ್ನು ಕಾಣುವ ಆಶಯವನ್ನು ಹೊಂದಿದ್ದರಿಂದ ಅವರೇ ಸ್ವತಃ ಸ್ವಚ್ಛತಾ ಅಭಿಯಾನವನ್ನು ಆರಂಭಿಸಿದರು.

ನಾಲ್ಕು ದಿನಗಳು ಬೆಳಗ್ಗೆಯಿಂದ ಏಕ ಕಾಲದಲ್ಲಿ ತಮ್ಮ ವ್ಯಾಪ್ತಿಗೆ ಬರುವ ರಿಂಗ್ ರಸ್ತೆಯಲ್ಲಿ ಸಾರ್ವಜನಿಕರು ರಾತ್ರೋರಾತ್ರಿ ಕದ್ದು ಮುಚ್ಚಿ ತಂದು ಸುರಿದಿದ್ದ ತ್ಯಾಜ್ಯವನ್ನು ಪಾಲಿಕೆಯ 6ವಲಯ ಕಚೇರಿ ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಪೌರಕಾರ್ಮಿಕರು, ಜೆಸಿಬಿ, ಟ್ರಕ್‌ಗಳನ್ನು ಬಳಸಿ ತೆರವು ಕಾರ್ಯಾಚರಣೆ ಆರಂಭಿಸಿ, 42.5 ಕಿ.ಮೀ. ಉದ್ದದ ರಿಂಗ್ ರಸ್ತೆಯಲ್ಲಿರುವ ಕಸವನ್ನು ತೆರವು ಮಾಡಿದರು.

ರಸ್ತೆಯ ಎರಡು ಭಾಗದಲ್ಲಿ ಸ್ವಚ್ಛತೆ ಏನೋ ಆಯಿತು. ಆದರೆ ಡಿವೈಡರ್ ಮೇಲೆ ಬೆಳೆದಿದ್ದ ಹುಲ್ಲಿಗೆ ಬೆಂಕಿ ಹಾಕಿದ್ದು, ಇದರಿಂದ ಅಲ್ಲಿ ಬೆಳೆದು ನಿಂತಿರುವ ಬೇವಿನ ಮರಗಳಿಗೂ ಬೆಂಕಿ ತಗುಲಲಿದೆ. ಹಾಗೇ ಮಳೆ ಸಂದರ್ಭದಲ್ಲಿ ಮಳೆ ನೀರಿನೊಂದಿಗೆ ಕೊಚ್ಚಿಕೊಂಡು ಬಂದಿರುವ ಮಣ್ಣನ್ನು ಡಿವೈಡರ್ ಪಕ್ಕದಲ್ಲಿ ಶೇಖರಣೆ ಮಾಡಿದ್ದಾರೆ.

ಡಿವೈಡರ್ ಪಕ್ಕದಲ್ಲಿಯೇ ಶೇಖರಣೆಯಾಗಿರುವ ಮಣ್ಣಿನ ರಾಶಿ ಮೇಲೆ ಡಿವೈಡರ್ ಮೇಲೆ ಬೆಳೆದಿರುವ ಸಣ್ಣ ಮಟ್ಟ ಗಿಡಗಳನ್ನು ಹಾಕಿ ಮುಚ್ಚಿದ್ದು, ಇದು ಒಂದು ಗುಡ್ಡೆ ರೀತಿ ನಿರ್ಮಾಣವಾಗಿದೆ. ವೇಗವಾಗಿ ಬರುವ ವಾಹನ ಸವಾರರು ಇದನ್ನು ಗಮನಿಸದೆ ಇದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ ಎಂದು ವಾಹನ ಸವಾರರು ದೂರಿದ್ದಾರೆ.

ಈ ಮೊದಲು ರಾಜಾರೋಷವಾಗಿ ವಾಹನದಲ್ಲಿ ಬಂದು ಕಸವನ್ನು ರಸ್ತೆ ಬದಿ ಸುರಿದು ಹೋಗುತ್ತಿದ್ದರು. ಆದರೆ, ರಸ್ತೆಗೆ ಲೈಟ್ ಬಂದ ನಂತರ ಕಸ ಹಾಕುವುದು ನಿಯಂತ್ರಣಕ್ಕೆ ಬರುತ್ತದೆ ಎಂದು ಭಾವಿಸಲಾಗಿತ್ತು ಆದರೆ ಸಾಕಷ್ಟು ಮಂದಿ ಮಧ್ಯರಾತ್ರಿಯಲ್ಲಿ ಬಂದು ಕಸ ಸುರಿದು ಹೋಗುತ್ತಿದ್ದಾರೆ. ಸ್ವಚ್ಛತಾ ಅಭಿಯಾನದ ನಂತರ ಪರಿಸ್ಥಿತಿ ಬದಲಾಗುತ್ತದೆ. ಎಂದರೆ ನಾಯಿ ಬಾಲ ಡೊಂಕು ಎಂಬಂತೆ ರಿಂಗ್ ರಸ್ತೆಯಲ್ಲಿ ಕಸ ಹಾಕುವುದನ್ನು ಮುಂದುವರೆಸಿದ್ದಾರೆ.

ತಿ.ನರಸೀಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮುಂದೂಡಿಕೆ

ಮೈಸೂರು, ಮಾ.14(ಎಂಟಿವೈ)– ಮೈಸೂರು ಜಿಲ್ಲೆ ತಿ.ನರಸೀಪುರದ ತಿರುಮಕೂಡಲಿನಲ್ಲಿ ಮಾ.28 ಮತ್ತು 29ರಂದು ಆಯೋಜಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಚುನಾವಣಾ ನೀತಿ ಸಂಹಿತೆ ಜಾರಿಗೊಳ್ಳುವ ಕಾರಣಕ್ಕೆ ಮುಂದೂಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದ್ದಾರೆ. ಈ ಬಾರಿ ತಿ.ನರಸೀಪುರದ ತಿರುಮಕೂಡಲಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಆಯೋಜಿಸಲು ಈ ಹಿಂದೆಯೇ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ, ನಿಗದಿತ ದಿನಾಂಕದಂದು ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಜಾರಿ, ಶಾಲಾ–ಕಾಲೇಜಿನಲ್ಲಿ ಪರೀಕ್ಷೆಗಳಿರುವ ಕಾರಣ ಸಮ್ಮೇಳನ ಮುಂದೂಡಲಾಗಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಗೋಷ್ಠಿಯಲ್ಲಿ ಪರಿಷತ್‌ನ ಪದಾಧಿಕಾರಿಗಳಾದ ಜಿ.ಪ್ರಕಾಶ್, ಕೆ.ಕೆಂಪಣ್ಣ, ಮಲ್ಲೇಶ್ ಇತರರಿದ್ದರು.

ನೀವೂ ತಪ್ಪದೇ ಮತದಾನ ಮಾಡಿ; ಬಿಜೆಪಿ ಮುಖಂಡ ಶರತ್‌ಪುಟ್ಟಬುದ್ದಿ



ಮೈಸೂರು,ಮಾ.14(ಪಿಎಂ)– ರಾಜಕೀಯ ಪಕ್ಷಗಳ ಪ್ರಣಾಳಿಕೆ ಹಾಗೂ ಅಭ್ಯರ್ಥಿಗಳ ಬಗ್ಗೆ ಅವಲೋಕಿಸಿ ತಪ್ಪದೇ ಮತದಾನ ಮಾಡುವಂತೆ ಯುವ ಮತದಾರರಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಶರತ್‌ಪುಟ್ಟಬುದ್ದಿ ಮನವಿ ಮಾಡಿದರು.

ವರುಣಾ ವಿಧಾನಸಭಾ ಕ್ಷೇತ್ರದ ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಬಿಜೆಪಿ ಪ್ರಣಾಳಿಕೆ ಸಲಹಾ ಅಭಿಯಾನ ತಂಡದ ವತಿಯಿಂದ ಹಮ್ಮಿಕೊಂಡಿದ್ದ ಸಲಹಾ ಸಂಗ್ರಹ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇದೇ ಮೊದಲ ಬಾರಿಗೆ 2023ರ ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡುವ ಯುವ ಜನರು ರಾಜಕೀಯ ಪಕ್ಷಗಳ ಪ್ರಣಾಳಿಕೆ ಹಾಗೂ ಅಭ್ಯರ್ಥಿಗಳ ಬಗ್ಗೆ ವಿಶೇಷವಾಗಿ ಅವಲೋಕಿಸಬೇಕು. ಮೊಟ್ಟ ಮೊದಲು ರಾಜಕೀಯ ಪಕ್ಷ ಎಂದರೇನು? ಎಂದು ತಿಳಿದುಕೊಳ್ಳಬೇಕು. ತಪ್ಪದೇ ಮತದಾನ ಮಾಡಬೇಕು. ಮುಖ್ಯವಾಗಿ ಸೂಕ್ತ ಅಭ್ಯರ್ಥಿಗೆ ಮತದಾನ ಮಾಡಬೇಕು ಎಂದು ಸಲಹೆ ನೀಡಿದರು.

ತಪ್ಪದೇ ಮತದಾನ ಮಾಡುವ ಮೂಲಕ ಮುಂದೆ ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರವನ್ನು ಪ್ರಶ್ನಿಸುವ ನೈತಿಕ ಹಕ್ಕನ್ನು ತಮ್ಮದಾಗಿಸಿಕೊಳ್ಳಬೇಕು ಎಂದು ಹೇಳಿದರು. ಅನೇಕ ವಿದ್ಯಾರ್ಥಿಗಳು ಚುನಾವಣಾ ಗುರುತಿನ ಚೀಟಿ ಪಡೆಯದೇ ಇರುವುದನ್ನು ಇದೇ ವೇಳೆ ಗಮನಿಸಿದ ಅವರು, ಆದಷ್ಟು ಶೀಘ್ರದಲ್ಲಿ ನೋಂದಾಯಿಸಿ ಗುರುತಿನ ಚೀಟಿ ಪಡೆಯುವಂತೆ ಕೋರಿದರು. ಬಿಜೆಪಿ ಪ್ರಣಾಳಿಕೆ ಸಲಹಾ ಅಭಿಯಾನ ತಂಡದ ಜಿಲ್ಲಾ ಸಂಚಾಲಕ ರಮೇಶ್‌ಕುಮಾರ್, ಸಹ ಸಂಚಾಲಕ ಡಾ.ಪ್ರಫುಲ್ಲ ಮಾಲ್ಲಾಡಿ, ಮುಖಂಡ ಕಿರಣ್‌ಜಯರಾಂ ಹಾಗೂ ಕಾಲೇಜಿನ ಉಪನ್ಯಾಸಕರು ಹಾಜರಿದ್ದರು.

ಚಾಮುಂಡಿಬೆಟ್ಟದಲ್ಲಿ ಬ್ಯಾಟರಿ ಚಾಲಿತ ವಾಹನ ವ್ಯವಸ್ಥೆ

ಮೈಸೂರು, ಮಾ.14– ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಆಗಮಿಸುವ



ಅಂಗವಿಕಲರಿಗೆ, ಹಿರಿಯ ನಾಗರಿಕರಿಗೆ, ಗರ್ಭಿಣಿಯರಿಗೆ, ವೃದ್ಧ ಭಕ್ತಾದಿಗಳಿಗೆ ಮಹಿಷಾಸುರ ಹತ್ತಿರವಿರುವ ಬಸ್ ನಿಲ್ದಾಣದಿಂದ ದೇವಾಲಯಕ್ಕೆ ಕರೆದುಕೊಂಡು ಹೋಗಲು ಮತ್ತು ಮರಳಿ ಬರಲು ಅನುಕೂಲಕರವಾಗುವಂತೆ ಭಾರತೀಯ ನೋಟು ಮುದ್ರಣ ನಿಯಮಿತ ಸಂಸ್ಥೆಯವರು ಮಾ.10 ಶುಕ್ರವಾರದಂದು ದೇವಾಲಯಕ್ಕೆ ಉಚಿತವಾಗಿ ಬ್ಯಾಟರಿ ಚಾಲಿತ ವಾಹನವನ್ನು ನೀಡಿದ್ದಾರೆ.

ಇದರ ಉಪಯೋಗವನ್ನು ಸಾರ್ವಜನಿಕರು, ಭಕ್ತಾದಿಗಳು, ಪ್ರವಾಸಿಗರು ಸದುಪಯೋಗಪಡಿಸಿಕೊಳ್ಳಬೇಕೆಂದು ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಸವಪೂರ್ವ ಲಿಂಗಪತ್ತೆ, ಭ್ರೂಣಹತ್ಯೆ ತಡೆಯುವಲ್ಲಿ ವೈದ್ಯರ ಪಾತ್ರ ಪ್ರಧಾನ

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ ಅಭಿಮತ

ಮೈಸೂರು, ಮಾ.14 (ಆರ್‌ಕೆ)– ಪ್ರಸವಪೂರ್ವದಲ್ಲೇ ಲಿಂಗಪತ್ತೆ ಹಾಗೂ ಭ್ರೂಣಹತ್ಯೆ ತಡೆಯುವಲ್ಲಿ ವೈದ್ಯರ ಪಾತ್ರ ಪ್ರಧಾನವಾದುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದಿನಿಂದ ಆರಂಭವಾದ 'ಪ್ರಸವಪೂರ್ವ ಲಿಂಗಪತ್ತೆ ನಿಷೇಧ ಕಾನೂನಿನ ಪರಿಣಾಮಕಾರಿ ಜಾರಿ' ವಿಷಯ ಕುರಿತ ಎರಡು ದಿನಗಳ ವಿಭಾಗ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡುತ್ತಿದ್ದ ಅವರು, ಹೆಣ್ಣು ಮಕ್ಕಳನ್ನೂ ಗಂಡು ಮಕ್ಕಳಂತೆಯೇ ಸಮಾನವಾಗಿ ಕಂಡು ಸಮಾಜದಲ್ಲಿ ಗಂಡು–ಹೆಣ್ಣು ಮಕ್ಕಳ ಸಂಖ್ಯೆ ಸಮಾನಾಂತರವಾಗಿರುವಂತೆ ನೋಡಿಕೊಳ್ಳುವುದು ಅತೀ ಅವಶ್ಯ ಎಂದರು.



ಪ್ರಸವಪೂರ್ವ ಲಿಂಗಪತ್ತೆ ಮತ್ತು ಭ್ರೂಣಹತ್ಯೆ ಎರಡೂ ಪ್ರಕ್ರಿಯೆಗಳಿಗೆ ಜನರು ವೈದ್ಯರ ಬಳಿಗೆ ಬರಲೇಬೇಕು. ಆ ಸಂದರ್ಭ ತಿಳುವಳಿಕೆ ಹೇಳಿ ಕಾನೂನಿನ ಬಗ್ಗೆಯೂ ವಿವರಿಸಿ ಅವರ ಮನವೊಲಿಸುವ ಸಾಮಾಜಿಕ ಮತ್ತು ವೃತ್ತಿ ಜವಾಬ್ದಾರಿಯೂ ವೈದ್ಯರ ಮೇಲಿದೆ ಎಂದ ಅವರು, ಸಮಾಜ ಮತ್ತು ಸಮುದಾಯವೂ ಸಹ ಈ ವಿಷಯದಲ್ಲಿ ಜಾಗೃತರಾಗಿ ಜವಾಬ್ದಾರಿ ಮೆರೆಯಬೇಕು ಎಂದು ತಿಳಿಸಿದರು.

ಇತ್ತೀಚಿನ ಸಮೀಕ್ಷೆ ಪ್ರಕಾರ 0 ಯಿಂದ 6 ವರ್ಷದ ಮಕ್ಕಳ ಪೈಕಿ ಮೈಸೂರು ಜಿಲ್ಲೆಯಲ್ಲಿ 1000 ಗಂಡು ಮಕ್ಕಳಿಗೆ 946 ಹೆಣ್ಣು ಮಕ್ಕಳಿದ್ದಾರೆ. ಆದರೆ ಎರಡೂ ಸಂಖ್ಯೆ ಸಮಾನವಾಗಿರುವಂತೆ ನೋಡಿಕೊಳ್ಳಬೇಕು. ಆಗ ಮಾತ್ರ ಸಮಾಜದ ಸ್ವಾಸ್ಥ್ಯ ಸಾಧ್ಯ ಎಂದು ಡಾ. ಪ್ರಸಾದ್ ತಿಳಿಸಿದರು.

ಎಲ್ಲಾ ಜಿಲ್ಲೆಗಳಲ್ಲೂ ಈ ರೀತಿ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜೊತೆಗೆ ಜನರಿಗೆ ಅರಿವು ಮೂಡಿಸಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ವೈದ್ಯರು ಸಹಕರಿಸಬೇಕು. ಅದು ಸಾಮಾಜಿಕ ಜವಾಬ್ದಾರಿಯೂ ಹೌದು ಎಂದು ಅವರು ಇದೇ ವೇಳೆ ನುಡಿದರು.

ಪಿಸಿಪಿಎನ್‌ಡಿಟಿ ಉಪನಿರ್ದೇಶಕ ಡಾ. ವಿವೇಕ್ ದೊರೈ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಭಾಗೀಯ ಜಂಟಿ ನಿರ್ದೇಶಕಿ ಡಾ. ರಾಜೇಶ್ವರಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಪಿ. ರವಿ, ಆರ್‌ಸಿಹೆಚ್ ಡಾ. ಜಯಂತ್ ಅವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಮೈಸೂರು ವಿಭಾಗದ ಎಲ್ಲಾ 8 ಜಿಲ್ಲೆಗಳ ಜಿಲ್ಲಾ ಆರೋಗ್ಯಾಧಿಕಾರಿಗಳು ಇಂದಿನ ಕಾರ್ಯಕ್ರಮದಲ್ಲಿ ಹಾಜರಿದ್ದರು. ನಾಳೆ ಕುಟುಂಬ ಕಲ್ಯಾಣಾಧಿಕಾರಿಗಳು ಭಾಗವಹಿಸಲಿದ್ದಾರೆ.

ನಂಜನಗೂಡು ಕಾಂಗ್ರೆಸ್‌ಗೆ ದರ್ಶನ್ ಧ್ರುವ ಅನಿವಾರ್ಯ

ಶ್ರದ್ಧಾಂಜಲಿ ಪೂರ್ವಭಾವಿ ಸಭೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀಕಂಠು



ನಂಜನಗೂಡು, ಮಾ.14– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರ ಪುತ್ರ ದರ್ಶನ್ ಅವರಿಗೆ ರಾಜಕೀಯ ಅನಿವಾರ್ಯವಲ್ಲ. ಆದರೆ ನಂಜನಗೂಡು ಕಾಂಗ್ರೆಸ್‌ಗೆ ದರ್ಶನ್ ಧ್ರುವ ಅನಿವಾರ್ಯವಾಗಿದ್ದು, ಈ ಬಗ್ಗೆ ಮಾತನಾಡುವ ಪರಿಸ್ಥಿತಿಯಲ್ಲಿ ಅವರಿಲ್ಲ. ಶೀಘ್ರ ಅವರಿಗೆ ನಿಮ್ಮೆಲ್ಲರ ಅಭಿಪ್ರಾಯ ತಿಳಿಸಿ ಕ್ಷೇತ್ರಕ್ಕೆ ಕರೆತರುವ ಪ್ರಯತ್ನ ಮಾಡಲಾಗುವುದು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀಕಂಠು ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸುವ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ 9 ಜಿಲ್ಲೆಗಳಲ್ಲಿ ಪ್ರವಾಸ ಮಾಡುವ ಮೂಲಕ ಪಕ್ಷ ಸಂಘಟಿಸಿ, ಯಾವ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ನೀಡಬೇಕೆಂದು ಶಿಫಾರಸ್ಸು ಮಾಡುವ ಅಧಿಕಾರ ಹೊಂದಿದ್ದ ಆರ್.ಧ್ರುವನಾರಾಯಣ ಪಕ್ಷಕ್ಕಾಗಿ ಸಾಕಷ್ಟು ದುಡಿದಿದ್ದಾರೆ. ಅವರು ಸ್ಪರ್ಧಿಸಲು ಬಯಸಿದ್ದ ನಂಜನಗೂಡು ಕ್ಷೇತ್ರಕ್ಕೆ ಧ್ರುವನಾರಾಯಣ ಅವರೊಬ್ಬರ ಹೆಸರನ್ನು ಸ್ಕ್ರೀನಿಂಗ್ ಕಮಿಟಿಗೆ ಕಳುಹಿಸಲು ನಮ್ಮ ಪಕ್ಷಕ್ಕೆ ಸಾಧ್ಯವಾಗಲಿಲ್ಲ ಎಂಬ ಬೇಸರ ನನಗೂ ಇದೆ. ಲಕ್ಷ್ಮಣ ರೇಖೆ ಮೀರಿದ ವರ್ತನೆಗಳು ಹಾಗೂ ಪಕ್ಷಕ್ಕಾಗಿ ಹಗಲು ರಾತ್ರಿ ದುಡಿಯುತ್ತಿದ್ದರಿಂದ ಒತ್ತಡಕ್ಕೆ ಸಿಲುಕಿದ್ದರು. ಮನಸ್ಸಿನಲ್ಲಿ ಎಷ್ಟೇ ನೋವಿದ್ದರೂ ಹೊರಗೆ ಹಾಕದೇ ನಗು ಮುಖದಲ್ಲೇ ಎಲ್ಲರೊಂದಿಗೂ ಮಾತನಾಡುತ್ತಿದ್ದರು. ಇದರಿಂದ ಗುಣ ಮುಖ ಆಗಿದ್ದ ಕಾಯಿಲೆಗಳು ಉಲ್ಬಣಗೊಂಡು ನಮ್ಮಿಂದ ದೂರ ಆಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭ ಅವರನ್ನು ನಂಬಿದ್ದ ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಿಗೆ ಅವರ ಪ್ರತಿರೂಪವಾಗಿರುವ ಪುತ್ರ ದರ್ಶನ್ ಧ್ರುವ ಅನಿವಾರ್ಯವಾಗಿದ್ದಾರೆಯೇ, ಹೊರತು ದರ್ಶನ್‌ಗೆ ರಾಜಕೀಯ ಅನಿವಾರ್ಯವಲ್ಲ. ಏಕೆಂದರೆ ಅವರು ವಿದೇಶದಲ್ಲಿ ಕಾನೂನು ಪದವಿ ವ್ಯಾಸಂಗ ಮಾಡಿ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದಲ್ಲದೇ ಕೃಷಿಯಲ್ಲೂ ಸಕ್ರಿಯರಾಗಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಧ್ರುನಾರಾಯಣ್ ಅವರ ಸಾವಿನ ಆಘಾತದಿಂದ ಹೊರಬಂದ ಬಳಿಕ ದರ್ಶನ್ ಧ್ರುವ ಅವರೊಂದಿಗೆ ಸಮಾಲೋಚಿಸಿ ತಂದೆ ಸ್ಥಾನ ತುಂಬುವಂತೆ ಮನವರಿಕೆ ಮಾಡಿಕೊಡಲಾಗುವುದು ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಯುಗಾದಿ ಹಬ್ಬದ ಬಳಿಕ ನಂಜನಗೂಡಿನಲ್ಲಿ ಶ್ರದ್ಧಾಂಜಲಿ ಸಭೆ ಆಯೋಜಿಸಲಾಗುವುದು. ಸುಮಾರು 15 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸಿ ಕಾರ್ಯಕ್ರಮ ಮಾಡಲು ಉದ್ದೇಶಿಸಲಾಗಿದ್ದು, ರಾಷ್ಟ್ರ ಹಾಗೂ ರಾಜ್ಯ ಮಟ್ಟದ ನಾಯಕರನ್ನು ಶ್ರದ್ಧಾಂಜಲಿ ಸಭೆಗೆ ಆಹ್ವಾನಿಸುವ ಜವಾಬ್ದಾರಿಯನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಂಠು ಹಾಗೂ ಎಸ್.ಸಿ.ಬಸವರಾಜು ವಹಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಬಸವರಾಜು, ಕ್ಷೇತ್ರ ಉಸ್ತುವಾರಿಗಳಾದ ಸೋಮೇಶ್, ಬಿ.ಕೆ.ರವಿಕುಮಾರ್, ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಲತಾಸಿದ್ದಶೆಟ್ಟಿ, ಬಿಸಿಎಂ ಜಿಲ್ಲಾಧ್ಯಕ್ಷ ಕೆ. ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ. ಶಂಕರ್, ಶ್ರೀಕಂಠನಾಯ್ಕ, ರಂಗಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ.ಮಾದಪ್ಪ ಮುದ್ದುಮಾದಶೆಟ್ಟಿ ಮುಖಂಡರಾದ ಮಂಜುನಾಥ್, ಶಶಿರೇಖಾ, ಕುಳ್ಳಯ್ಯ, ನಾಗರಾಜಯ್ಯ, ರಾಜೇಶ್, ಎಂ.ರಾಜು, ವಿಜಯ್‌ಕುಮಾರ್, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಶ್ರೀಕಂಠಸ್ವಾಮಿ, ಅಶೋಕ್ ಸೇರಿದಂತೆ ಇತರರಿದ್ದರು.

ಹಳೆಯೂರು ಡೈರಿಗೆ ನವೀನ್ ಅಧ್ಯಕ್ಷ



ಚುಂಚನಕಟ್ಟೆ, ಮಾ.14– ಸಾಲಿಗ್ರಾಮ ತಾಲೂಕಿನ ಹಳಿಯೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್.ಬಿ.ನವೀನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಹೆಚ್.ಎಸ್.ಜಗದೀಶ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನವೀನ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಅಭಿವೃದ್ಧಿ ಅಧಿಕಾರಿ ರವಿ ಘೋಷಿಸಿದರು.

ನೂತನ ಅಧ್ಯಕ್ಷರನ್ನು ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಪ್ರಸನ್ನ, ಗ್ರಾಪಂ ಸದಸ್ಯ ಮಲ್ಲೇಶಾಚಾರಿ, ಚಂದ್ರಮೋಹನ್, ಕುಮಾರ್ ಅಭಿನಂದಿಸಿದರು.

ಅಧ್ಯಕ್ಷ ನವೀನ್ ಮಾತನಾಡಿ, ಸಂಘ ನೂತನವಾಗಿ ಆರಂಭವಾಗಿರುವ ಕಾರಣ ಸಂಘದ ಆದಾಯ ಹೆಚ್ಚಳ, ಸಂಘಕ್ಕೆ ಉತ್ತಮ ಕಟ್ಟಡ ನಿರ್ಮಾಣ ಮಾಡುವ ನಿಟ್ಟಿನಲ್ಲಿ ನಿರ್ದೇಶಕರ ಸಹಕಾರ ಹಾಗೂ ಶಾಸಕ ಸಾ.ರಾ.ಮಹೇಶ್ ಅವರ ಸಲಹೆ ಮಾರ್ಗದರ್ಶನದೊಂದಿಗೆ ಕಾರ್ಯ ನಿರ್ವಹಿಸುವುದಾಗಿ ಹೇಳಿದರು. ಸಭೆಯಲ್ಲಿ ಗೌರವಾಧ್ಯಕ್ಷ ಕುಳ್ಳೇಗೌಡ, ಉಪಾಧ್ಯಕ್ಷ ಶ್ರೀನಿವಾಸ್, ಯೋಗಾನಂದ, ಜಯಮ್ಮ ಮಮತಾ, ಗೋವಿಂದೇಗೌಡ, ಹರೀಶ ಇತರರಿದ್ದರು.

ಹನಗೋಡು ಗ್ರಾಪಂಗೆ ರತ್ನಶ್ರೀಧರ್ ಅಧ್ಯಕ್ಷೆ

ಹುಣಸೂರು, ಮಾ.14– ತಾಲೂಕಿನ ಹನಗೋಡು ಗ್ರಾಪಂ ನೂತನ ಅಧ್ಯಕ್ಷೆಯಾಗಿ ರತ್ನಶ್ರೀಧರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಗ್ರಾಪಂ ಆವರಣದಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರತ್ನಶ್ರೀಧರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್, ಸಹಾಯಕ ಚುನಾವಣಾಧಿಕಾರಿ ರೇಷ್ಮೆ ಇಲಾಖೆ ರಮೇಶ್ ಘೋಷಿಸಿದರು. ಈ ವೇಳೆ ಒಟ್ಟು ಸದಸ್ಯರ ಪೈಕಿ 13 ಮಂದಿ ಹಾಜರಾಗಿ, ಮೂವರು ಗೈರಾಗಿದ್ದರು.

ನೂತನ ಅಧ್ಯಕ್ಷೆ ರತ್ನಶ್ರೀಧರ್ ಮಾತನಾಡಿ, ಗ್ರಾಪಂ ವ್ಯಾಪ್ತಿಯಲ್ಲಿ ಸ್ವಚ್ಛತೆ, ಸಾರ್ವಜನಿಕರಿಗೆ ಸರ್ಕಾರದಿಂದ ಸಿಗುವ ಸೌಲಭ್ಯ ದೊರಕಿಸಿಕೊಡುವ ಜೊತೆಗೆ ಎಲ್ಲಾ ಸದಸ್ಯರ ಸಹಕಾರದಿಂದ ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಅಭಿವೃದ್ಧಿಗೆ ಶ್ರಮಿಸು ತ್ತೇನೆ ಎಂದರು.

ಇದೇ ವೇಳೆ ಜೆಡಿಎಸ್ ಮುಖಂಡರಾದ ರಂಜಿತಾ ಚಿಕ್ಕಮಾದು ಅವರು ನೂತನ ಅಧ್ಯಕ್ಷೆ ರತ್ನಶ್ರೀಧರ್ ಅವರನ್ನು ಸನ್ಮಾನಿಸಿದರು. ಈ ಸಂದರ್ಭ ಜಿಪಂ ಮಾಜಿ ಸದಸ್ಯ ಕಟ್ಟನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರು ಬಸವರಾಜ್, ಗ್ರಾಪಂ ಉಪಾಧ್ಯಕ್ಷ ಬೋರೇಗೌಡ, ಮುಖಂಡರಾದ ಹೆಚ್.ಆರ್.ರಮೇಶ್, ಪುಟ್ಟಸ್ವಾಮಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ವೀರಭದ್ರಪ್ಪ, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಸದಸ್ಯರಾದ ಜಯಲಕ್ಷ್ಮಿ, ಛಾಯ, ಮಹದೇವ ನಾಯಕ, ಈಶ್ವರ, ಪವಿತ್ರ ಶಶಿಕಲಾ, ಸಂಗೀತ, ಚೆನ್ನಯ್ಯ ಸೇರಿದಂತೆ ಇನ್ನಿತರರಿದ್ದರು.

ಇಂದು ವಿವಿಧ ಕಾಮಗಾರಿ ಉದ್ಘಾಟನೆ

ಹುಣಸೂರು, ಮಾ.14– ನಗರೋತ್ಥಾನ ಹಂತ–4ರ ಯೋಜನೆಯಡಿ ಮಾ.15 ರಂದು ಬೆಳಗ್ಗೆ 9 ಗಂಟೆಗೆ ಇಲ್ಲಿನ ನಗರಸಭೆ ವ್ಯಾಪ್ತಿಯಲ್ಲಿ 18 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ ಹಾಗೂ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡುವರು. ನಗರಸಭಾಧ್ಯಕ್ಷೆ ಗೀತಾ ಅಧ್ಯಕ್ಷತೆ ವಹಿಸಲಿದ್ದು, ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು, ಸರ್ವ ಸದಸ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೂಡ್ಲೂರಿನಲ್ಲಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣೆ

ಹನಗೋಡು, ಮಾ.14– ಇಲ್ಲಿಗೆ ಸಮೀಪದ ಕೂಡ್ಲೂರಿನಲ್ಲಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ಮನೆ ಮನೆಗೆ ಪಕ್ಷದ ಗ್ಯಾರೆಂಟಿ ಕಾರ್ಡ್ ವಿತರಿಸಿದರು.



ನಂತರ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ 3 ಪ್ರಮುಖ ಯೋಜನೆಗಳನ್ನು ರೂಪಿಸಿದ್ದು, ಗೃಹಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ 2 ಸಾವಿರ ರೂ, ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ಉಚಿತ ವಿದ್ಯುತ್ ಹಾಗೂ 10 ಕೆಜಿ ಅಕ್ಕಿ ವಿತರಿಸುವ ಅನ್ನಭಾಗ್ಯ ಯೋಜನೆಗಳನ್ನು ಮುಂಬರುವ ಚುನಾವಣೆ ಪ್ರಣಾಳಿಕೆಯಲ್ಲಿ ಜಾರಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಕುಟುಂಬಕ್ಕೆ ಗ್ಯಾರೆಂಟಿ ಕಾರ್ಡ್ ವಿತರಿಸಲಾಗುತ್ತಿದೆ. ಇದರಿಂದ ಎಲ್ಲಾ ವರ್ಗದ ಜನತೆಗೆ ಅನುಕೂಲವಾಗಲಿದೆ. ಪ್ರತಿಯೊಬ್ಬರೂ ಕಾಂಗ್ರೆಸ್ ಬೆಂಬಲಿಸುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದರು. ಪ್ರಸ್ತುತ ಬಿಜೆಪಿ ಸರ್ಕಾರದಲ್ಲಿ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿದ್ದು, ಬಡವರು ಜೀವನ ನಡೆಸುವುದೇ ದುಸ್ತರವಾಗಿದೆ. ಹೀಗಾಗಿ ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಬೇಕು. ಅಲ್ಲದೇ ಶಾಸಕ ಹೆಚ್.ಪಿ.ಮಂಜುನಾಥ್ ಅಧಿಕಾರವಧಿಯಲ್ಲಿ ಶಿಕ್ಷಣ, ಕೃಷಿ, ನೀರಾವರಿ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳು ಅಭಿವೃದ್ಧಿ ಹೊಂದಿದ್ದು, ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಎಂದು ಮನವಿ ಮಾಡಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಾಧ್ಯಕ್ಷ ಪುಟ್ಟರಾಜು, ಕುಮಾರ್, ಹೆಗ್ಗಂದೂರು ಗ್ರಾಪಂ ಉಪಾಧ್ಯಕ್ಷೆ ಸ್ಮಿತಾ, ಮುಖಂಡರಾದ ಸಂತೋಷ್, ಹೃದಯರಾಜ್, ಅಂತೋಣಿ, ಪ್ರಭಾಕರ್, ವಿನ್ಸೆಂಟ್ ಅರುಣ್ ಕುಮಾರ್,ಅಂಜಲಿ, ಆರ್.ಅಣ್ಣಮ್ಮ, ಜಯಶೀಲ, ನಿರ್ಮಲ, ಫಾತಿಮಾ ಮೇರಿ ಸೇರಿದಂತೆ ಇತರರಿದ್ದರು.

ಹೆಡಿಯಾಲದಲ್ಲಿ ಧ್ರುವಗೆ ಕಂಬನಿ



ಮಲ್ಲುಂಡಿ, ಮಾ.14– ನಂಜನಗೂಡು ತಾಲೂಕಿನ ಹೆಡಿಯಾಲದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಗ್ರಾಮಸ್ಥರು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಗ್ರಾಪಂ ಸದಸ್ಯ ಗೋವಿಂದರಾಜು ಮಾತನಾಡಿ, ಆರ್.ಧ್ರುವನಾರಾಯಣ್ ಕಾಂಗ್ರೆಸ್ ಪಕ್ಷಕ್ಕೆ ಓರ್ವ ಸಾಮಾನ್ಯ ಕಾರ್ಯಕರ್ತನಾಗಿ ಸೇರ್ಪಡೆಯಾಗಿ ಶಾಸಕ, ಸಂಸದನಾಗಿ ಅತ್ಯುತ್ತಮ ಕೆಲಸ ಮಾಡಿದರು. ಅಲ್ಲದೇ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ನಂಜನಗೂಡು ವಿಧಾನಸಭಾ ಕ್ಷೇತ್ರದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಅವರು ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದರು. ಧ್ರುವನಾರಾಯಣ್ ನಿಧನ ರಾಜ್ಯಕ್ಕೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟ ಎಂದ ಅವರು, ಕಾಂಗ್ರೆಸ್ ವರಿಷ್ಠರು ಅವರ ಕುಟುಂಬದ ಸದಸ್ಯರಿಗೆ ಮುಂಬರುವ ಚುನಾವಣೆಯ ಟಿಕೆಟ್ ನೀಡುವ ಮೂಲಕ ಅವರ ಋಣ ತೀರಿಸುವ ಕೆಲಸ ಮಾಡಬೇಕು ಎಂದರು.

ಈ ವೇಳೆ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ವ್ಯವಸ್ಥಾಪಕ ಮಹದೇವಸ್ವಾಮಿ, ಗ್ರಾಪಂ ಸದಸ್ಯರಾದ ನಾಗೇಶ್, ಕೃಷ್ಣ, ಮಂಜು, ಕಲೀಲ್, ಪಟೇಲ್, ಶಿವರಾಜು, ಮುಖಂಡರಾದ ಚಿನ್ನಸ್ವಾಮಿ, ನಾಗರಾಜೇಗೌಡ, ಸುಬ್ರಹ್ಮಣ್ಯ, ಕಾಳಸ್ವಾಮಿ, ಅನ್ಸರ್, ಸಾದಿಕ್, ಸಿದ್ದರಾಜು, ನಾರಾಯಣ, ರವಿ, ಹುಚ್ಚೇಗೌಡ, ಪ್ರಕಾಶ, ಸೇರಿದಂತೆ ಅಭಿಮಾನಿಗಳಿದ್ದರು.



ಮೂಗೂರು ಸಮೀಪದ ಮೂಗೂರುಮೋಳೆ ಗ್ರಾಮದ ಗ್ರಾಮದೇವತೆ ಶ್ರೀಚಿಕ್ಕಮ್ಮ ತಾಯಿ, ದೊಡ್ಡಮ್ಮ ತಾಯಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಮುಖಂಡರಾದ ಸ್ವಾಮಿ, ಸಿದ್ದಶೆಟ್ಟಿ, ರೇವಣ್ಣ, ರಾಜಣ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವೆಂಕಟಚಲಶೆಟ್ಟಿ ನಿಧನ



ಸರಗೂರು, ಮಾ.14– ಪಟ್ಟಣದ 1ನೇ ವಾರ್ಡ್ ನಿವಾಸಿ, ತೊಗಟವೀರ ಸಮಾಜದ ಮುಖಂಡ ವೆಂಕಟಚಲಶೆಟ್ಟಿ (58) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಭಿವೃದ್ಧಿ ವಿಚಾರದಲ್ಲಿ ಧ್ರುವನಾರಾಯಣ್ ಮೀರಿಸುವವರಿಲ್ಲ

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ



ಹೆಚ್.ಡಿ.ಕೋಟೆ, ಮಾ.14– ಅಭಿವೃದ್ಧಿ ವಿಚಾರದಲ್ಲಿ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಅವರನ್ನು ಮೀರಿಸುವ ಶಾಸಕರಾಗಲೀ, ಸಂಸದರಾಗಲೀ ಇಲ್ಲ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಜೆಡಿಎಸ್ ಘಟಕದಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ಅಭಿವೃದ್ಧಿ ಕಾರ್ಯಗಳತ್ತ ಹೆಜ್ಜೆ ಹಾಕಿ ಯಶಸ್ವಿಯಾಗುತ್ತಿದ್ದರು. ತಾಲೂಕಿನ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ. ಅವರು ಯಾವುದೇ ಗ್ರಾಮಕ್ಕೆ ಭೇಟಿ ನೀಡಿದರೂ ಸಾರ್ವಜನಿಕರಿಂದ ಕುಂದು ಕೊರತೆ ಆಲಿಸಿ ಕೆಲವೊಂದನ್ನು ಸ್ಥಳದಲ್ಲೇ ಬಗೆಹರಿಸಿ, ಉಳಿದ ಸಮಸ್ಯೆಗಳನ್ನು ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸುತ್ತಿದ್ದರು. ನಾನು ಶಾಸಕನಾಗಿದ್ದ ವೇಳೆ ಅಧಿವೇಶನಕ್ಕೆ ತಪ್ಪಿಸಿಕೊಳ್ಳಬಾರದು ಎಂದು ತಿಳಿಸಿದ್ದರು. ಕಾರಣ ಅಧಿವೇಶನ ನಡೆಯುವ ವೇಳೆ ಎಲ್ಲಾ ಇಲಾಖೆಯ ಮಂತ್ರಿಗಳು ಹಾಗೂ ಅಧಿಕಾರಿಗಳು ಸಿಗುವುದರಿಂದ ನಮ್ಮ ಕ್ಷೇತ್ರದ ಕೆಲಸ ಕಾರ್ಯ ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಅವರು ನನಗೆ ಹೇಳಿಕೊಟ್ಟಿದ್ದರು. ಅಂತಹ ವ್ಯಕ್ತಿಯನ್ನು ಕಳೆದುಕೊಂಡಿರುವುದು ತುಂಬಲಾರದ ನಷ್ಟ, ಅವರ ಆತ್ಮಕ್ಕೆ ದೇವರು ಶಾಂತಿ ಕರುಣಿಸಲಿ ಎಂದರು. ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ನಾಗರಾಜ್, ಕೋಟೆ–ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಪುರಸಭಾಧ್ಯಕ್ಷೆ ಅನಿತಾ, ಮಾಜಿ ಜಿಪಂ ಸದಸ್ಯ ಎಂ.ಪಿ. ನಾಗರಾಜು, ಮುಖಂಡರಾದ ನಿಂಗೇಗೌಡ, ಎಂ.ಡಿ. ಮಂಚಯ್ಯ, ಚಾ.ನಂಜುಂಡಮೂರ್ತಿ, ಜೀವಿಕ ಬಸವರಾಜು, ಮಾರುತಿ, ಮಿಲ್ ನಾಗರಾಜು, ನಾಗನಾಯಕ, ರಾಜೇಗೌಡ, ವೇಣು, ನಜೀರ್, ನಯಿಮ್, ಶಿವು, ಲಿಂಗೇಗೌಡ, ನಜೀರ್ ಮಹಮದ್, ಶಿವಣ್ಣ, ಶಾಂತಕುಮಾರ್, ವಿನೋದ್, ಜವರಯ್ಯ, ಸಣ್ಣಕುಮಾರ್, ಚನ್ನಕೋಟೆ, ತೇಜು, ಗುರುಮಲ್ಲು, ಸಲೀಂ, ಪ್ರಭಾಕರ್, ಶಿವಕುಮಾರ್, ಚಂದ್ರು ಇತರರಿದ್ದರು.

ವಿಜೃಂಭಣೆಯ ಶ್ರೀಮಹದೇಶ್ವರಸ್ವಾಮಿ ರಥೋತ್ಸವ



ನಂಜನಗೂಡು ತಾಲೂಕಿನ ಚುಂಚನಹಳ್ಳಿಯಲ್ಲಿ ಶ್ರೀಮಹದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.



ಪಿರಿಯಾಪಟ್ಟಣದ ಪುರಸಭೆ ಆವರಣದಲ್ಲಿ ಬಾಬು ಜಗಜೀವನ ರಾಂ ದ್ವಿಚಕ್ರ ವಾಹನ ಸರಕು ಸಾಗಾಣಿಕೆ ಯೋಜನೆಯಡಿ 22–23ನೇ ಸಾಲಿನ ಫಲಾನುಭವಿಗಳಿಗೆ ಸವಲತ್ತುಗಳನ್ನು ಶಾಸಕ ಕೆ.ಮಹದೇವ್ ವಿತರಿಸಿದರು. ಪುರಸಭಾಧ್ಯಕ್ಷ ಕೆ.ಮಹೇಶ್ ಸೇರಿದಂತೆ ಇನ್ನಿತರಿದ್ದರು.



ಸರಗೂರು ತಾಲೂಕಿನ ಹಂಚೀಪುರದಲ್ಲಿ ಕಟ್ಟೆ ಮಾರಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮಾ.17ಕ್ಕೆ, ಅಜಾತಶತ್ರು ಧ್ರುವನಾರಾಯಣ ನುಡಿನಮನ

ತಿ.ನರಸೀಪುರ, ಮಾ.14– ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಾ.17ರಂದು ಬೆಳಗ್ಗೆ 11 ಗಂಟೆಗೆ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಸವಿನೆನಪಿಗಾಗಿ 'ಅಜಾತಶತ್ರು ಧ್ರುವನಾರಾಯಣ ನುಡಿನಮನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ಎಲ್ಲಾ ಸಮಾಜದ ಬಂಧುಗಳು, ಅಭಿಮಾನಿಗಳು ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸುವಂತೆ ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಶಶಿಕಾಂತ್ ಸೋಸಲೆ ತಿಳಿಸಿದ್ದಾರೆ.

ಮಹಿಳೆಯರು ತಮ್ಮ ಪ್ರತಿಭೆ ಮೂಲಕ ಸಾಧನೆಯತ್ತ ಸಾಗಿ

ಮಹಿಳಾ ದಿನಾಚರಣೆಯಲ್ಲಿ ತಹಸೀಲ್ದಾರ್ ಸಿ.ಜೆ.ಗೀತಾ ಸಲಹೆ




ತಿ.ನರಸೀಪುರ, ಮಾ.14– ಮಹಿಳೆ ಅಬಲೆಯಲ್ಲ. ಆಕೆ ಸಮಾಜದಲ್ಲಿ ಏಕಾಂಗಿಯಾಗಿ ಹೋರಾಟ ಮಾಡುವ ಸಾಮರ್ಥ್ಯ ಹೊಂದಿದ್ದಾಳೆ. ಮಹಿಳೆಯರು ತಮ್ಮಲ್ಲಿರುವ ವೈವಿಧ್ಯಮಯ ಪ್ರತಿಭೆ ಮೂಲಕ ಸಮಾಜದ ಮುನ್ನೆಲೆಗೆ ಬಂದು ಸಾಧನೆಯತ್ತ ಸಾಗಬೇಕು ಎಂದು ತಹಶೀಲ್ದಾರ್ ಸಿ.ಜೆ.ಗೀತಾ ಸಲಹೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಸಂಜೀವಿನಿ ಒಕ್ಕೂಟ ಮತ್ತು ತಾಲೂಕು ದಲಿತ ಜಾಗೃತಿ ವೇದಿಕೆ ಸಹಯೋಗದೊಂದಿಗೆ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಗೆ ಸಮಾನ ಅವಕಾಶ ಕಲ್ಪಿಸಬೇಕು. ಶಿಕ್ಷಣ ಜೀವನದ ದಿಕ್ಕು ಬದಲಿಸುತ್ತದೆ. ಹಾಗಾಗಿ ಮಹಿಳೆಯರು ಶಿಕ್ಷಣದ ಕಡೆ ಹೆಚ್ಚು ಗಮನ ಹರಿಸಬೇಕು. ಮಹಿಳೆ ಎಂಬ ಕೀಳರಿಮೆ ಬಿಟ್ಟು ಎಲ್ಲರೊಂದಿಗೂ ಬೆರೆತು ಕೆಲಸ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದರು.

ತಾಪಂ ಇಓ ಸಿ.ಕೃಷ್ಣ ಮಾತನಾಡಿ, ಸಮಾಜದಲ್ಲಿ ಮಹಿಳೆಯನ್ನು ಪುರುಷರಿಗೆ ಸಮಾನವಾಗಿ ನೋಡುವ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ಹೆಣ್ಣು–ಗಂಡು ಎಂಬ ಲಿಂಗ ತಾರತಮ್ಯ ಮಾಡುವುದನ್ನು ನಿಲ್ಲಿಸಬೇಕು ಎಂದರು.

ಮಹಿಳೆಯರು ಶೈಕ್ಷಣಿಕ ಅರ್ಹತೆ ಪಡೆಯುವ ಕಡೆ ಹೆಚ್ಚು ಗಮನ ಹರಿಸಬೇಕು. ಅಂಬೇಡ್ಕರ್ ಸಂವಿಧಾನದ ಮುಖೇನ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಿದ್ದು, ಗ್ರಾಮೀಣ ಮಹಿಳೆಯರು ಇದನ್ನು ಬಳಸಿಕೊಂಡು ರಾಜಕೀಯ, ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಬೇಕು ಎಂದು ಕರೆ ನೀಡಿದರು.

ತಾಲೂಕು ದಲಿತ ಒಕ್ಕೂಟ ಅಧ್ಯಕ್ಷ ಸೋಸಲೆ ಶಶಿಕಾಂತ್, ಬಿಜೆಪಿ ಎಸ್‌ಸಿ ಮಾಧ್ಯಮ ವಕ್ತಾರ ಸೋಸಲೆ ಶಿವಕುಮಾರ್, ತಾಲೂಕು ದಲಿತ ಜಾಗೃತಿ ಸಮಿತಿ ಅಧ್ಯಕ್ಷ ತುಂಬಲಾ ಮಂಜುನಾಥ್, ಸರ್ಕಾರಿ ಅಭಿಯೋಜಕರಾದ ಸುಮಿತ್ರ, ತುಂಬಲ ಮರಿಸ್ವಾಮಿ, ಗಣೇಶ್‌ಸ್ವಾಮಿ, ಮೋಹನಕುಮಾರಿ, ತಾಲೂಕು ಸಂಜೀವಿನಿ ವ್ಯವಸ್ಥಾಪಕಿ ರೂಪಶ್ರೀ, ಸಂಜೀವಿನಿ ಮೇಲ್ವಿಚಾರಕ ಸುರೇಶ, ಸ್ವಾಮಿ, ಮನು, ತಲಕಾಡು ಗ್ರಾಪಂ ಸದಸ್ಯೆ ಪಾರ್ವತಿ, ಜಯಲಕ್ಷ್ಮಿ ಇತರರಿದ್ದರು.



ಮೃದಂಗ ವಿದ್ವಾನ್ ವಿ.ನಾಗಭೂಷಣಾಚಾರ್

ನಿವೃತ್ತ–ಪ್ರಾಧ್ಯಾಪಕರು, ಲಲಿತಕಲಾ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ಸ್ಮರಿಸುತ್ತಿರುವ
ತಮ್ಮ ಶಿಷ್ಯ : ಎಂ.ಆರ್. ಉದಯ್ ಕುಮಾರ್, ನಿವೃತ್ತ
ಕರ್ನಾಟಕ ಪೊಲೀಸ್ ಬ್ಯಾಂಡ್ ಮ್ಯೂಸಿಷಿಯನ್, ಮೈಸೂರು

SITES FOR SALE

30x40, 30x50, 40x60
Near Infosys
MUDA approved

RIVER VIEW LAYOUT

45x60, Rs.1400/sft
12 kms from Bus Stand
with Club House

Call : 90714 01234

KRIYA YOGA INITIATION (DEEKSHA)



(Lineage of Babaji & Paramahamsa Yoganandaji) on 19th March 2023

9343333766, 9845359518

ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

SHUBH YATHRA

Booking started for
CHARDHAM YATHRA
few Seats are Available
For the month of
April 24, May 3 & May 15

Mob: 74833-73991

PART TIME JOB

Weekdays online Examination invigilation work, above 21 years, no age limit can apply.
EDUCATION :
10th PUC and any Degree
Candidates can call the numbers for further information.

Call : 90089 97080 / 89713 87209

Call for details on working hours
9.00am to 5.00pm

43 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


-ಜಾಹೀರಾತು ವ್ಯವಸ್ಥಾಪಕರು

AVIS HOSPITALS

ಉಬ್ಬಿರುವ ರಕ್ತನಾಳಗಳಿಗೆ ಶಾಶ್ವತ ವಿದಾಯ ಹೇಳಿ ಆಧುನಿಕ ಎಂಡೊ ವೀನಸ್ ಲೇಸರ್ ಅಬಲೇಶನ್ ಮುಖಾಂತರ

16.03.2023
ಗುರುವಾರ

ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ



ಡಾ. ವಿನಯ್ ಸ್ವಾಮಿ

ಸ್ಥಳ : ರಾಮಕೃಷ್ಣ ಆಸ್ಪತ್ರೆ, ಶಾಪ್ ನಂ.1120, ಎಫ್-58 ಬಿ, 1ನೇ ಮೇಯಿನ್, ಲಕ್ಷ್ಮೀ ಭಾಯಿ ರಸ್ತೆ, ಸೆಂಟ್ ಜೋಸೆಫ್ ಶಾಲೆ ಎದುರುಗಡೆ, ವಿದ್ಯಾರಣ್ಯಪುರ, ಮೈಸೂರು.

ನೋಂದಣಿಗಾಗಿ
808 883 7000

Avis Vascular Centre
/avisvascularcentre
www.avisvascularcentre.com



Venue In Mysore
The Institution Of Engineers
Jhansi Lakshmibai Road, JLB Road - 5

Dsg by Surya Agency Pvt Ltd

IN THE COURT OF V ADDL. I CIVIL JUDGE SR.DIV.AT MYSURU

OS.485/2022

Plaintiffs: Ningachari and others V/S
Defendants: Mohammed Hanif and others

DRAFT PUBLICATION FOR PUBLIC

The Plaintiff has filed the suit against the defendants for the relief of declaration and permanent injunction. The defendants No-1 and 8 are here by directed to appear before the Hon'ble V Addl.I Civil Judge (Sr.Div) at Mysuru on 28.03.2022 Failing which the matter will be heard and proceed in accordance with law.

D-1. Mohammed Hanif, S/o Late. Usman Shariff aged about 32 years, Mellahalli, Varuna Hobli, Mysore Taluk

D-8. Vasanthamma, W/o Nagaraj, D/o Late. Siddachari, Aged about 34 years, R/at, Sollepura, Mysuru

.........Defendants No-1 and 8

Given under my hand and the seal of the Court, this 28th day of February 2023

By order of the Court
Sd/- Chief Ministerial Officer
Court of Senior Civil Judge & CJM, Mysuru

Advocate for petitioners
Sri Rao Law Associates
K. Sheshagiri Rao, B.sc, LLB
Advocate, Mysore

PUBLIC NOTICE

Hereby notice to the general public is that my client has agreed and intends to purchase the under mentioned property from Smt. Chaitra H.R. W/o Sri. Swamy L., If any person/s having any rights, claim or interest over the notice schedule property are hereby called upon to raise their objections with relevant documents fortifying their claim in the notice schedule property within 7 days from the date of this publication, and required to communicate the same to me with documentary evidence at my office at No.51/1, 2nd Floor, 5th Cross, 6th Main, Saraswathipuram, Mysuru-09, After expiry of stipulated period of 7 days and in the event of non receiving any objections, it will be presumed that there is no claims whatsoever from anybody shall be deemed to have been waived for all interest and purpose, and the sale will be completed without any such purported claim or interest.

SCHEDULE OF THE PROPERTY

Site No. No.4562, Site measuring East to West 18.00 Meters, North to South 12.00 Meters, In total 216.00 Square Meters, situated at Layout developed by Mysuru Urban Development Authority, Mysuru, 2nd Phase, 4th Stage, Vijayanagara, Devaraja Mohalla, Mysuru, and bounded on : East : By Road, West : By Property No. 4556, North : By Property No. 4563, South : By Property No.4561.

Sd/- HARISHA K.P., B.A.,LL.B.
Advocate, Roll No. KAR/1483/99,
No.51/1, 2nd Floor, 5th Cross 6th Main,
Saraswathipuram, Mysuru-9
Place: Mysuru
Date: 14-03-2023. Mob : 9886332001

HERITAGE HOMES

MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS

30x40 | 30x50
40x60 | 50x80

ಕೇವಲ ₹550/ ಪ್ರತಿ ಚದರ ಅಡಿ



ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಸುಲಭ 4 ಕಂತುಗಳ ಸೌಲಭ್ಯವಿದೆ

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ **ಅದ್ವಿಕಾ ವೆಂಚರ್ಸ್**

9513301854, 9071386615

ಕರ್ನಾಟಕ ಸರ್ಕಾರ

ಪ್ರಾಂಶುಪಾಲರು ಡಯಟ್ ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಹಾಸನ

ph No:08172-239781 E-mail ID: diet.hassan@gmail.com

ಸಂಖ್ಯೆ: ಸಿ3. KPS e-Proc:02/2022-23 ದಿನಾಂಕ: 14.03.2023

ಟೆಂಡರ್

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತವರದೇವರ ಕೊಪ್ಪಲು ಹಾಸನ ಇವರ ವತಿಯಿಂದ 2022–23 ನೇ ಸಾಲಿನಲ್ಲಿ ಹಾಸನ ಜಿಲ್ಲೆಯ 08 ತಾಲ್ಲೂಕಿನ 10 KPS ಶಾಲೆಗಳಿಗೆ Ict Digital ಉಪಕರಣಗಳ ಸರಬರಾಜು ಮಾಡುವ ಕುರಿತು ಅಲ್ಪಾವಧಿ ಇ–ಟೆಂಡರ್ (ಟಿ–ಸಂಖ್ಯೆ: DPI/2022-23/IND1017) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:21–03–2023 ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ, ಹೆಚ್ಚಿನ ವಿವರಗಳನ್ನು E-Procurment portal ನಲ್ಲಿ ಪಡೆಯುವುದು ಮಾಹಿತಿಗಾಗಿ ಸಂಪರ್ಕಿಸಬೇಕಾದ ಸಂಖ್ಯೆ M-9448999371.

ಸಹಿ/–ಪ್ರಾಂಶುಪಾಲರು ಡಯಟ್ ಹಾಗೂ ಪದನಿಮಿತ್ತ
ಉಪನಿರ್ದೇಶಕರು(ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಸಂಸ್ಥೆ ಹಾಸನ,
ಹಾಸನ ಜಿಲ್ಲೆ.

ವಾಸಾಸಂಇ/ಹಿಸಹಿ/ಹಾಸನ/ಎಂಸಿಎ/1254/2022–23

ಕೋಟ್ಯಾಂತರ ರೂಪಾಯಿ ಮೌಲ್ಯದ ಅಂತಾರಾಷ್ಟ್ರೀಯ ಗಾರ್ಮೆಂಟ್ಸ್

ವಿಶೇಷ ಬ್ರಾಂಡ್‌ಗಳ ಗಾರ್ಮೆಂಟ್ಸ್ ಮತ್ತು ಶೂಗಳು

ಯುಗಾದಿ ಹಬ್ಬದ ಪ್ರಯುಕ್ತ ಭಾರಿ ರಿಯಾಯಿತಿ ಮಾರಾಟ

ಅಂತಾರಾಷ್ಟ್ರೀಯ ಶೋರೂಂಗಳಿಗಾಗಿ ಸಿದ್ಧಪಡಿಸಲಾಗಿದ್ದ ಕೋಟ್ಯಾಂತರ ಸ್ಟಾಕ್‌ನ್ನು ಈಗ 80% ರವರೆಗೆ ದೊಡ್ಡ ರಿಯಾಯಿತಿ ದರದಲ್ಲಿ ಮೈಸೂರಿನ ರಿಟೇಲ್ ಗ್ರಾಹಕರಿಗೆ ನೇರ ಮಾರಾಟ ಮಾಡಲಾಗುತ್ತಿದೆ.

ರ್‍ಯಾಂಗ್ಲರ್, ಲಿ–ಕೂಪರ್, ಕ್ರೊಕಾಡೈಲ್, ರೋಗ್, ಕಿಲ್ಲರ್, ಕೂಲ್ ಕಲರ್, ಹೈಲ್ಯಾಂಡರ್ ಬ್ರಾಂಡ್‌ಗಳ ರೂ. 2000/– ರಿಂದ 4000/– ಮೌಲ್ಯದ ಶರ್ಟ್ಸ್ ಮತ್ತು ಪ್ಯಾಂಟ್ಸ್ ಕೇವಲ ರೂ. 800/- ಮಾತ್ರ

ಪುರುಷರ ಬ್ರಾಂಡೆಡ್ ಪೆಪೆ ಜೀನ್ಸ್, ಲಿವೈಸ್, ಪೋಲೊ & ರಾಕೆಟ್ ಕ್ಲಬ್, ಸ್ಪೈಕರ್ ಇನ್ನೂ ಮುಂತಾದ ಬ್ರಾಂಡ್‌ಗಳು ರೂ. 2000/– ರಿಂದ 5000/– ಈಗ ಕೇವಲ 1000- ಕ್ಕೆ ಪಡೆಯಿರಿ

ರೂ. 3000/– ರಿಂದ 8,000/– ಮೌಲ್ಯದ ಸ್ಪೋರ್ಟ್ಸ್ & ಫಾರ್ಮಲ್ ಲೆದರ್ ಶೂ
U.S. POLO ASSN. PUMA GUESS HRX Roadster ರೂ 700- ರಿಂದ 1500/- ಕ್ಕೆ ಪಡೆಯಿರಿ

ರೂ. 1500/– ರಿಂದ 2500/– ಬೆಲೆಬಾಳುವ ಮಹಿಳೆಯರ ಬ್ರಾಂಡೆಡ್ ಶೂಸ್ ಮತ್ತು ಸ್ಯಾಂಡಲ್ಸ್ ರೂ. 350/- ರಿಂದ 500/- ಕ್ಕೆ ಪಡೆಯಿರಿ

ರೂ. 1000/– ರಿಂದ 2000/– ಬೆಲೆಯ ಸ್ಕೂಲ್ & ಕಾಲೇಜು ಬ್ಯಾಗ್ ಕೇವಲ ರೂ. 400/- ಕ್ಕೆ ಪಡೆಯಿರಿ
ಲೇಡಿಸ್ ಬ್ಯಾಗ್ಸ್ ಫ್ಲಾಟ್ 70% ರಿಯಾಯಿತಿ ಪಡೆಯಿರಿ

ರೂ. 2000/– ರಿಂದ ರೂ. 5000/– ಬೆಲೆಯ ಬೆಲೆಬಾಳುವ ಮಹಿಳೆಯರ ಬ್ರಾಂಡೆಡ್ ಕುರ್ತಿಸ್, ಟಾಪ್ಸ್, ಲಾಂಗ್ & ಶಾರ್ಟ್ ಕುರ್ತಿಸ್, ಪಲಾಜೋ, ಲೆಗಿನ್ಸ್, ಜೀನ್ಸ್ ರೂ. 250/- ರಿಂದ 800/- ಕ್ಕೆ ಪಡೆಯಿರಿ

enamor ಬ್ರಾ, ಪ್ಯಾಂಟೀಸ್, ಟ್ರ್ಯಾಕ್ ಪ್ಯಾಂಟ್ಸ್, ಶರ್ಟ್ಸ್, ಟಿ–ಶರ್ಟ್ಸ್, ಟಾಪ್ಸ್, ಕೆಮಿಸೋಲ್, ನೈಟ್‌ವೇರ್, ಜಿಮ್ ಪ್ಯಾಂಟ್ಸ್ ಇತ್ಯಾದಿ } ಕೇವಲ ರೂ. 120/- ರಿಂದ 400/- ಪಡೆಯಿರಿ

ಸ್ಥಳ : ನಂಜರಾಜ ಬಹದ್ದೂರ್ ಛತ್ರ
ವಿನೋಬ ರಸ್ತೆ, ಮೆಟ್ರೊಪೋಲ್ ಸರ್ಕಲ್ ಹತ್ತಿರ, ಮೈಸೂರು.

